# 2

# ಸಾಂಪ್ರದಾಯಿಕ ಅರ್ಥಶಾಸ್ತ್ರ

ಆರ್ಥಿಕ ವ್ಯವಸ್ಥೆಯ ಕುರಿತಾದ ಮೊದಲ ಸಮಗ್ರವಾದ ಶೋಧನೆಯೊಂದು ಯುರೋಪಿನ ದಾರ್ಶನಿಕ ಚಳವಳಿಯ ಕಾಲದಲ್ಲಿ "ಸಾಂಪ್ರದಾಯಿಕ" ಅರ್ಥಶಾಸ್ತ್ರದಿಂದ ಬಂದಿತು. ಕಾರ್ಲ್ ಮಾರ್ಕ್ಸ್ (Karl Marx) (1818-1883) ಮತ್ತು ಜೋಸೆಫ್ ಎ ಶಂಪೀಟರ್ (Joseph A. Schumpeter) ಅವರ ಪ್ರಕಾರ ವಿಲಿಯಮ್ ಪೆಟಿ (William Petty) (1623-1687) 17ನೇ ಶತಮಾನದ ಉತ್ತರಾರ್ಧದಲ್ಲಿ ಸಾಂಪ್ರದಾಯಿಕ ದೃಷ್ಟಿಕೋನದ ಬೀಜಗಳನ್ನು ಬಿತ್ತಿದರು. ಇತರ ಪ್ರಮುಖ ಹರಿಕಾರರೆಂದರೆ ಫ್ರಾನ್ಸ್ ನಲ್ಲಿ ಪಿಯರ್ ಲೆ ಪೆಸಾನ್ ದಿಬ್ವಾಗಿಬೇರ್ (Pierre Le Pesant de Boisguilbert) (1646-1714), ಫ್ರಾಂಸ್ವಾ ಕಿನೆ (François Quesnay) (1694-1774) ಮತ್ತು ಆನ್-ರಾಬರ್ಟ್-ಜ಼ಾಕ್-ಟ್ಯುರ್ಗೋ (Anne-Robert-Jacques Turgot) (1727-1781), ಬ್ರಿಟನ್ನಿನಲ್ಲಿ ರಿಚರ್ಡ್ ಕಾಂಟಿಯಾನ್ (Richard Cantillon) (1680-1734) ಮತ್ತು ಡೇವಿಡ್ ಹ್ಯೂಮ್ (David Hume) ಹಾಗೂ ಇಟಲಿಯಲ್ಲಿ ಆಂಟೋನಿಯೋ ಜಿನೊವೇಸಿ (Antonio Genovesi) (1713-1769), ಫರ್ಡಿನಾಂಡೊ ಗಲಿಯಾನಿ (Ferdinando Galiani) (1728-1787), ಪಿಯೆಟ್ರೊ ವೆರ್ರಿ (Pietro Verri) (1728-1797) ಮತ್ತು ಚೆಸ್ಸರೆ ಬೆಕ್ಕರಿಯಾ (Cesare Beccaria) (1738-1794). ನಾನು ಇನ್ನು ಮುಂದಿನ ಭಾಗದಲ್ಲಿ ಗಮನವನ್ನು ಕೇಂದ್ರೀಕರಿಸಲಿರುವ ಬ್ರಿಟಿಷ್ ಸಾಂಪ್ರದಾಯಿಕ ಅರ್ಥಶಾಸ್ತ್ರವು ಆಡಂ ಸ್ಮಿತ್ (Adam Smith) ಮತ್ತು ಡೇವಿಡ್ ರಿಕಾರ್ಡೋ (David Ricardo) (1772-1823) ರ ಕಾಲದಲ್ಲಿ ಸಂಪೂರ್ಣವಾಗಿ ಅರಳಿಕೊಂಡಿತ್ತು.

## ಸಾಂಪ್ರದಾಯಿಕ ಚಿಂತನೆಯ ಗುಣಲಕ್ಷಣಗಳು

ಮೊದಲಿಗೆ ನಾನು ಸಾಂಪ್ರದಾಯಿಕ ಚಿಂತನೆಯ ಲಕ್ಷಣವಾಗಿರುವ ಎಂಟು ಸಾಮಾನ್ಯ ಗುಣಗಳನ್ನು ಪಟ್ಟಿ ಮಾಡುತ್ತೇನೆ. ಅವು ಈ ಕೆಳಗಿನವನ್ನು ಕುರಿತಾಗಿವೆ:

1. ಅರ್ಥಶಾಸ್ತ್ರವು ನಿಯಮ ಬದ್ಧವಾಗಿದೆ, ಆ ನಿಯಮಗಳನ್ನು ಅಧ್ಯಯನ ಮಾಡಬಹುದು ಮತ್ತು ಜೀವನದ ಪರಿಸ್ಥಿತಿಯನ್ನು ಉತ್ತಮಪಡಿಸಲು ಅವುಗಳನ್ನು ಬಳಸಿಕೊಳ್ಳಬಹುದು ಎಂಬ ದೃಷ್ಟಿಕೋನ;
2. ಆರ್ಥಿಕ ಪ್ರಕ್ರಿಯೆಯಲ್ಲಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸುವ ಸದಸ್ಯರುಗಳನ್ನು ಒಳಗೊಂಡಂತಹ ಸಾಮಾಜಿಕ ವರ್ಗಗಳಾಗಿ ಸಮಾಜ ಶ್ರೇಣೀಕರಿಸಲಾಗಿದೆ;
3. ಆರ್ಥಿಕ ಚಟುವಟಿಕೆಯ ಹೆಚ್ಚಿನ ಭಾಗಗಳನ್ನು ಪರಸ್ಪರಾವಲಂಬಿತವಾದ ಮಾರುಕಟ್ಟೆಗಳ ಮೂಲಕ ಪರಿಣಾಮಕಾರಿಯಾಗಿ ಸಮನ್ವಯಗೊಳಿಸಬಹುದಾಗಿದ್ದು ಅದು ಸಮಾಜದಲ್ಲಿನ ಪ್ರಭುತ್ವದ ಪಾತ್ರದ ಕುರಿತು ಒಂದು ಹೊಸ ದೃಷ್ಟಿಕೋನಕ್ಕೆ ಕಾರಣವಾಗುವುದು ಎಂಬ ಗಾಢನಂಬಿಕೆ;
4. ವ್ಯಕ್ತಿಗಳ ಸ್ವಾಹಿತಾಸಕ್ತ ಕ್ರಿಯೆಗಳು ಸಾಮಾನ್ಯವಾಗಿ ಅನುದ್ದಿಷ್ಟ ಪರಿಣಾಮಗಳನ್ನು ಹೊಂದಿವೆ ಮತ್ತು ಈ ವಾಸ್ತವವು ಅರ್ಥಶಾಸ್ತ್ರವೆಂಬ ವಿಷಯದ ಅಸಾಧಾರಣ ಸಂಕೀರ್ಣತೆಗೆ ಬಹುತೇಕವಾಗಿ ಕಾರಣವಾಗಿದೆ ಎಂಬ ಅಭಿಪ್ರಾಯ;
5. ಬಹುತೇಕ ರಾಷ್ಟ್ರಗಳಲ್ಲಿ ಸಂಪತ್ತನ್ನು ಸೃಷ್ಟಿಸುವ ಸಾಧನ ಶ್ರಮ - ಜನತೆಯ ಕೌಶಲ್ಯಗಳು, ನೈಪುಣ್ಯತೆ ಹಾಗೂ ಚಾತುರ್ಯತೆ - ಮತ್ತು ಶ್ರಮದ ಉತ್ಪಾದಕತೆಯಲ್ಲಿನ ಹೆಚ್ಚಳವು ಶ್ರಮದ ಹೆಚ್ಚಿನ ಮಟ್ಟದ ಸಾಮಾಜಿಕ

ವಿಭಜನೆಗಳಿಂದ ಆಗುತ್ತದೆ; ಅನುರೂಪವಾಗಿ ಒಂದು ರಾಷ್ಟ್ರದ ಸಂಪತ್ತು ಅದರ ತಲಾವಾರು ಸಾಮಾಜಿಕ ನಿವ್ವಳ ಉತ್ಪನ್ನದ ಗಾತ್ರದಲ್ಲಿ ವ್ಯಕ್ತವಾಗುತ್ತದೆ ಎಂಬ ದೃಢ ನಂಬಿಕೆ;

6. ಆರ್ಥಿಕ ವ್ಯವಸ್ಥೆಗೆ ಒಂದು ಕ್ರಮಬದ್ಧತೆಯನ್ನು ಮತ್ತು ಸುಸಂಬದ್ಧತೆಯನ್ನು ನೀಡುವ ಶಕ್ತಿ ಎಂದು ಹಾಗೂ ಕೈಗಾರಿಕೆ ಮತ್ತು ತಾಂತ್ರಿಕ ಪ್ರಗತಿಯನ್ನು ಪೋಷಿಸುವ ಶಕ್ತಿ ಎಂದು ಸ್ಪರ್ಧೆಗೆ, ಮತ್ತು ಉತ್ಪಾದನಾ ವೆಚ್ಚವು ಬೆಲೆಯನ್ನು ನಿರ್ಣಯಿಸುವಂತ ಸ್ಪರ್ಧಾತ್ಮಕ ಪರಿಸ್ಥಿತಿಗಳಲ್ಲಿನ ಮಾರುಕಟ್ಟೆ ಆಧಾರಿತ ಆರ್ಥಿಕ ಸಮನ್ವಯದ ವಿಶ್ಲೇಷಣೆಗೆ ಪ್ರಾಮುಖ್ಯತೆ ನೀಡಿರುವುದು;
7. ಬಂಡವಾಳ ಹೊಂದಿದವರ, ಲಾಭವನ್ನು ಅರಸುವ ವರ್ತನೆಯಿಂದಾಗಿ ಹುಟ್ಟಿಕೊಳ್ಳುವಂತ ಏಕರೂಪ ಲಾಭ ದರಗಳತ್ತ ಸಾಗುವ ಪ್ರವೃತ್ತಿಯ ಕುರಿತಾದ ಪರಿಕಲ್ಪನೆ ಮತ್ತು ಅವುಗಳ ಅತ್ಯಂತ ಲಾಭದಾಯಕ ಬಳಕೆಯನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ತೊಡಗಿಕೊಂಡಿರುವಂತ ಮಾಲೀಕರಿಗೆ ಸೇರಿದ ವಿವಿಧ ಗುಣಮಟ್ಟದ ಭೂಮಿ ಮತ್ತು ಶ್ರಮದ ಸೇವೆಗಳಿಗೆ ಏಕರೂಪ ಪ್ರತಿಫಲದ ದರಗಳನ್ನು ದಕ್ಕಿಸಿಕೊಳ್ಳುವ ಪ್ರವೃತ್ತಿಯ ಕುರಿತಾದ ಪರಿಕಲ್ಪನೆ; ಮತ್ತು ಅಂತಿಮವಾಗಿ
8. ಸಾಮಾನ್ಯ ಲಾಭದ ದರಗಳು ಮತ್ತು ವಿಭಿನ್ನ ರೀತಿಯ ಕೆಲಸಗಳಿಗೆ ಮತ್ತು ವಿಭಿನ್ನ ಗುಣಮಟ್ಟದ ಭೂಮಿಗೆ ನೀಡಲಾಗುವ ಏಕರೂಪದ ಕೂಲಿಗಳು ಮತ್ತು ಬಾಡಿಗೆಗಳನ್ನು ಪ್ರತಿಬಿಂಬಿಸುವಂತಹ ಮಾರುಕಟ್ಟೆಯ ದರಗಳು ಅವುಗಳ “ಸಹಜ” ಮಟ್ಟಗಳತ್ತ ಧಾವಿಸುತ್ತವೆ ಎಂಬ ಅದಕ್ಕೆ ಅನುರೂಪವಾಗಿರುವ ಪರಿಕಲ್ಪನೆ.

ಈ ಎಲ್ಲವುಗಳ ಬಗ್ಗೆ ನಾನು ಇನ್ನಷ್ಟು ವಿಸ್ತರಿಸಿ ಹೇಳಲಿದ್ದೇನೆ.

ಸಾಂಪ್ರದಾಯಿಕ ಚಿಂತನೆಯ ಮೊಟ್ಟಮೊದಲನೆಯ ಲಕ್ಷಣವೆಂದರೆ ಅರ್ಥವ್ಯವಸ್ಥೆಯು ತನ್ನದೇ ಆದ ನಿಯಮಗಳನ್ನು ಅನುಸರಿಸುತ್ತದೆ ಎಂಬ ಪರಿಕಲ್ಪನೆ; ಸಂಶೋಧಿಸಬಹುದಾದ, ಅರ್ಥಮಾಡಿಕೊಳ್ಳಬಹುದಾದ ಮತ್ತು ಬಳಸಿಕೊಳ್ಳಬಹುದಾದಂತ ನಿಯಮಗಳು. ನಿಸರ್ಗ ವಿಜ್ಞಾನಗಳಲ್ಲಿ ಆಗಷ್ಟೇ ದೊರೆತಿದ್ದ ಯಶಸ್ಸುಗಳು ಸಾಂಪ್ರದಾಯಿಕ ಚಿಂತಕರಿಗೆ ಒಂದು ಮಾದರಿಯನ್ನು ಒದಗಿಸಿದವು; ಉದಾಹರಣೆಗೆ ಫ್ರಾನ್ಸಿಸ್ ಬೇಕನ್ (Francis Bacon) (1561-1626) ಸಾಮಾಜಿಕ ಪ್ರಗತಿಯ ಹಿತಾಸಕ್ತಿಯಲ್ಲಿ ನಿಸರ್ಗ ವಿಜ್ಞಾನಗಳನ್ನು ಕಾರ್ಯೋನ್ಮುಖವಾಗಿ ಬಳಸುವುದನ್ನು ಉತ್ತೇಜಿಸಿದ್ದರು. ತಮ್ಮ *‘ಪೊಲಿಟಿಕಲ್ ಅರಿತ್ಮೆಟಿಕ್ (Political Arithmetick)’* (1690) ಎಂಬ ಪುಸ್ತಕದಲ್ಲಿ ವಿಲಿಯಮ್ ಪೆಟಿ, “ತನ್ನನ್ನು ತಾನು ಸಂಖ್ಯೆ, ತೂಕ ಅಥವಾ ಅಳತೆಯ ಮೂಲಕ ಅಭಿವ್ಯಕ್ತಿಪಡಿಸಿಕೊಳ್ಳಲು; ಇಂದ್ರಿಯ ಗ್ರಾಹ್ಯವಾಗಿರುವಂತಹ ವಾದಗಳನ್ನು ಮಾತ್ರ ಬಳಸಲು, ಮತ್ತು ನಿಸರ್ಗದಲ್ಲಿ ಸ್ಪಷ್ಟವಾಗಿ ಗೋಚರವಾಗಿರುವ ಆಧಾರಗಳನ್ನು ಹೊಂದಿರುವಂತಹ ಕಾರಣಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲು’’ ಬಯಸಿದ್ದು ಅವರು ವೈದ್ಯನೋರ್ವರ ದೃಷ್ಟಿಕೋನವನ್ನು ಅಳವಡಿಸಿಕೊಂಡಿದ್ದರು. “ವಿಶಿಷ್ಟ ವ್ಯಕ್ತಿಗಳ ಬದಲಾಗುವಂತಹ ಮನಸ್ಸುಗಳನ್ನು, ಅಭಿಪ್ರಾಯಗಳನ್ನು, ಅಭಿರುಚಿಗಳನ್ನು ಮತ್ತು ಗಾಢ ಆಸಕ್ತಿಗಳನ್ನು ಅವಲಂಬಿಸುವ ಕಾರಣಗಳನ್ನು” ಬೇರೆಯವರಿಗೆ ಬಿಟ್ಟುಬಿಟ್ಟರು. (ಅಧ್ಯಾಯ 5 ರಲ್ಲಿ ನಾವು ಅಂತಹ ನಿದರ್ಶನಗಳನ್ನು ಕನಿಷ್ಠ ಪ್ರಮಾಣ ಮೌಲ್ಯದ ಸಿದ್ಧಾಂತದ ತಿರುಳಿನಲ್ಲಿದೆ ಎಂಬುದನ್ನು ಗಮನಿಸಲಿದ್ದೇವೆ). ಈ ಅರ್ಥಶಾಸ್ತ್ರಜ್ಞರು ಅವರ ಹೊಸ ವಿಜ್ಞಾನವು ಪರಿಮಾಣಾತ್ಮಕವಾದದ್ದು ಮತ್ತು ಅನುಭವಜನ್ಯವಾದದ್ದು ಎಂಬುದಾಗಿ ನೋಡಿದರು; ಫ್ರಾಂಸ್ವಾ ಕಿನೆ ಅವರ ಪ್ರಕಾರ ಅದು ಗಣಿತ ಮತ್ತು ಅಂಕಿ ಸಂಖ್ಯಾಶಾಸ್ತ್ರವನ್ನು ಬಳಸಿಕೊಳ್ಳಲೇಬೇಕು. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಧನಾತ್ಮಕ (ವಾಸ್ತವಚಿತ್ರ ಆಧಾರಿತ) ಅರ್ಥಶಾಸ್ತ್ರದಲ್ಲಿ ಮತ್ತು ವಿವೇಕಯುತವಾದ ಆರ್ಥಿಕ ನೀತಿ ಕ್ರಮಗಳ ಮೂಲಕ ಪರಿಸ್ಥಿತಿಗಳನ್ನು ಉತ್ತಮಗೊಳಿಸುವುದರಲ್ಲಿ ಆಸಕ್ತಿ ಹೊಂದಿದ್ದರು. ಹಾಗಾಗಿ ಸ್ಮಿತ್ (ಮತ್ತು ಅವರಿಗಿಂತ ಮೊದಲು ಕಿನೆ) ಈ ಹೊಸ ಜ್ಞಾನ

ಶಿಸ್ತನ್ನು "ರಾಜನೀತಿಜ್ಞರ ವಿಜ್ಞಾನ" ಎಂದು ಅವರು ಕರೆದದ್ದನ್ನು ತನ್ನೊಳಗೆ ಅಡಕ ಮಾಡಿಕೊಂಡಿರುವಂತ ಒಂದು ಮುಖ್ಯವಾದ, ಪ್ರಾಯಶಃ ಅತ್ಯಂತ ಮುಖ್ಯವಾದ, ಒಂದು ರೀತಿಯ ಪಾರಂಗತದ ರಾಜನೀತಿ ಶಾಸ್ತ್ರದ ಭಾಗವನ್ನಾಗಿ ಪರಿಕಲ್ಪಿಸಿದರು.

ಎರಡನೆಯದಾಗಿ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು, ತಮ್ಮ ಪರಿಶೋಧನೆಯ ವಿಷಯವನ್ನು ಹೆಚ್ಚಾಗುತ್ತಿರುವ ಶ್ರಮದ ವಿಭಜನೆ ಮತ್ತು ನೈಸರ್ಗಿಕ ಸಂಪನ್ಮೂಲಗಳು ಹಾಗೂ ಉತ್ಪಾದನೆಯ ಸಾಧನಗಳು ಖಾಸಗಿ ಮಾಲೀಕತ್ವದ ಕೈಯಲ್ಲಿ ಇರುವ ಗುಣಲಕ್ಷಣವುಳ್ಳ ಅರ್ಥವ್ಯವಸ್ಥೆ ಎಂಬುದಾಗಿ ಮತ್ತು ಅಂತಹ ಅರ್ಥವ್ಯವಸ್ಥೆಯಲ್ಲಿನ ಅನೇಕ ಪ್ರತಿನಿಧಿಗಳ ಚಟುವಟಿಕೆಗಳು, ಅಂತರ್ ಸಂಬಂಧವುಳ್ಳ ಮಾರುಕಟ್ಟೆಗಳ ಮೂಲಕ ಮತ್ತು ಸರಕು ಹಾಗೂ ಸೇವೆಗಳ ವಿನಿಮಯವನ್ನು ಸುಗಮಗೊಳಿಸಿಕೊಡುವಂತ ವಿನಿಮಯದ ಸಾಧನವಾಗಿ ಕಾರ್ಯನಿರ್ವಹಿಸುವ ಹಣದ ಮೂಲಕ ಸಮನ್ವಯಗೊಂಡಿರುತ್ತವೆ ಎಂದು ಪರಿಭಾವಿಸಿದರು. ಖಾಸಗಿ ಪ್ರತಿನಿಧಿಗಳನ್ನು ಅವರು ತಮ್ಮದೇ ಆದ ಗುರಿಗಳಿಗಾಗಿ ಮತ್ತು ತಾವಾಗಿಯೇ (ಹೆಚ್ಚಾಗಿ) ಯಾವುದೇ ಕೇಂದ್ರ ಮಾರ್ಗದರ್ಶನವಿಲ್ಲದೆ ಪರಸ್ಪರ ವ್ಯವಹರಿಸುತ್ತಾರೆ ಎಂದು ಅರ್ಥ ಮಾಡಿಕೊಳ್ಳಲಾಗಿತ್ತು. ಸಮಾಜವು ವಿಭಿನ್ನ ವರ್ಗಗಳಾಗಿ ವಿಭಜಿತವಾಗಿದ್ದು ಅದರ ಸದಸ್ಯರು ಉತ್ಪಾದನೆ, ವಿತರಣೆ ಮತ್ತು ಸಮಾಜದ ಸಂಪತ್ತನ್ನು ಬಳಸಿಕೊಳ್ಳುವ ಪ್ರಕ್ರಿಯೆಯಲ್ಲಿ ವಿಭಿನ್ನ ಪಾತ್ರಗಳನ್ನು ವಹಿಸುತ್ತಾರೆ ಎಂದು ಭಾವಿಸಲಾಗಿತ್ತು.

ಆರ್ಥಿಕ ಆಸ್ತಿ ಮತ್ತು ರಾಜಕೀಯ ಅಧಿಕಾರ ಹಾಗೂ ಮಾಹಿತಿ ಮತ್ತು ಜ್ಞಾನವನ್ನು ಪಡೆದುಕೊಳ್ಳಲು ಇರುವ ಲಭ್ಯಾವಕಾಶದಲ್ಲಿನ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ವರ್ಗಗಳ ನಡುವೆ ಅಸಮತೆಗಳು ಇವೆ ಎಂಬುದನ್ನು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಒತ್ತಿ ಹೇಳಿದರು. ಇಂದಿನ ಕೆಲವೊಂದು ಅರ್ಥಶಾಸ್ತ್ರೀಯ ವಲಯಗಳಲ್ಲಿ ಜನಪ್ರಿಯವಾಗಿರುವ, ಕೇವಲ ಒಬ್ಬ "ಪ್ರಾತಿನಿಧಿಕ ವ್ಯಕ್ತಿ" ಯ ವರ್ತನೆಯನ್ನು ಅಧ್ಯಯನ ಮಾಡುವುದರ ಮೂಲಕ ಇಡೀ ಸಮಾಜವನ್ನೇ ಅರ್ಥೈಸಿಕೊಳ್ಳಬಹುದು (ನೋಡಿ ಅಧ್ಯಾಯ 4 ಮತ್ತು 10) ಎಂಬ ಕಲ್ಪನೆಯನ್ನು ಅವರು ಅಪನಂಬಿಕೆಯಿಂದ ಪರಿಗಣಿಸಿರುತ್ತಿದ್ದರು. ಜನರು ವಿಭಿನ್ನವಾಗಿರುತ್ತಾರೆ: ಅವರ ಆರ್ಥಿಕ ಸಾಧ್ಯತೆಗಳು, ಉದ್ದೇಶಗಳು ಮತ್ತು ಮನೋಭಾವಗಳು ಅವರವರ ಸಾಮಾಜಿಕ ಹಿನ್ನೆಲೆಗಳನ್ನು ಮತ್ತು ಅವರು ಬೆಳೆದು ಬಂದ ರೀತಿಯನ್ನು ಪ್ರತಿಬಂಬಿಸುತ್ತವೆ. ಜನರು ಸಮಾಜವನ್ನು ರೂಪಿಸುವಂತೆ ಮತ್ತು ಬದಲಾಯಿಸುವಂತೆಯೇ ಸಮಾಜವು ಜನರನ್ನು ರೂಪಿಸುತ್ತದೆ ಮತ್ತು ಬದಲಾಯಿಸುತ್ತದೆ. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಕೆಲವೊಂದು ಪ್ರಮುಖ ವರ್ಗಗಳ ಮೇಲೆ ತಮ್ಮ ಗಮನವನ್ನು ಹರಿಸಿದರು. ಅದರಲ್ಲಿ ತಮ್ಮ ಜಮೀನನ್ನು ಗುತ್ತಿಗೆಗೆ ನೀಡುವುದರಿಂದ ಬಾಡಿಗೆಯನ್ನು ಪಡೆದುಕೊಳ್ಳುವ ಜಮೀನ್ದಾರರು ಇದ್ದರು; ಸ್ಮಿತ್ ತಮ್ಮ ಕೃತಿ *'ದಿ ವೆಲ್ತ್ ಆಫ್ ನೇಷನ್ಸ್ (The Wealth of Nations)'* ನಲ್ಲಿ ಹೇಳಿದಂತೆ "ಅವರು ತಾವು ಎಂದೂ ಬಿತ್ತದಿರುವ ಭೂಮಿಯಿಂದ ಬೆಳೆಯನ್ನು ಕಟಾವು ಮಾಡಲು ಇಚ್ಛಿಸುತ್ತಾರೆ." ಸಾಂಪ್ರದಾಯಿಕ ಊಳಿಗಮಾನ್ಯ ಜೀವನ ಶೈಲಿಗೆ ಬಲವಾಗಿ ನೆಚ್ಚಿಕೊಂಡಿದ್ದ ಜಮೀನ್ದಾರರು, ಈ ಬಾಡಿಗೆಯ ಮೇಲೆ ಬದುಕುತ್ತಾ ದುಂದುಗಾರ ಜೀವನವನ್ನು ಅನುಭವಿಸುತ್ತಿದ್ದರು. ಅವರು ಯಾವುದೇ ಉಳಿತಾಯ ಅಥವಾ ಹೂಡಿಕೆ ಮಾಡಲಿಲ್ಲವಾದ ಕಾರಣ, ಅವರು ಶ್ರಮದ ಉತ್ಪಾದಕತೆಯ ಹೆಚ್ಚಳಕ್ಕೆ ಅತ್ಯಗತ್ಯವಾದ ಬಂಡವಾಳದ ಸೃಷ್ಟಿಗೆ ಯಾವುದೇ ಗಮನಾರ್ಹ ಕೊಡುಗೆಯನ್ನು ನೀಡಲಿಲ್ಲ. ಇನ್ನೊಂದು ಕಡೆ ತಮ್ಮ ಶ್ರಮದ ಶಕ್ತಿಯನ್ನು ಬಿಟ್ಟು ಬೇರೆ ಏನನ್ನೂ ಕಾರ್ಮಿಕರು ಹೊಂದಿರಲಿಲ್ಲ. ತಮ್ಮನ್ನು ಮತ್ತು ತಮ್ಮ ಕುಟುಂಬಗಳನ್ನು ಪೋಷಿಸಿಕೊಳ್ಳಲು ಅವರು ಸಾಕಷ್ಟು ಕೂಲಿ ದೊರಕುವಂತಹ ಉದ್ಯೋಗಗಳನ್ನು ಹುಡುಕಿಕೊಳ್ಳಲೇ ಬೇಕಾಗಿತ್ತು. ಅವರು ತಮ್ಮ ಕೂಲಿಯನ್ನು ಆಹಾರ, ಬಟ್ಟೆ ಮತ್ತು ವಸತಿ ಇವುಗಳಿಗೆ ವೆಚ್ಚ ಮಾಡುತ್ತಿದ್ದರು ಮತ್ತು ಆದ್ದರಿಂದ ಸಾಮಾನ್ಯವಾಗಿ ಹೆಚ್ಚೇನನ್ನು ಅಥವಾ ಏನನ್ನೂ ಉಳಿಸಲು

ಸಾಧ್ಯವಾಗುತ್ತಿರಲಿಲ್ಲ. ಬಂಡವಾಳಗಾರರು ಅಥವಾ (ಸ್ಮಿತ್ ಅವರ ಪರಿಭಾಷೆಯಲ್ಲಿ) “ಮಾಲೀಕರು” ಸಮಾಜದ ಆಕಾಂಕ್ಷೆಯುಳ್ಳ ವರ್ಗವಾಗಿದ್ದರು. ಅವರು ಹಣವನ್ನು ಮತ್ತು ವಾಣಿಜ್ಯ ಬಂಡವಾಳವನ್ನು (ಅಂಗಡಿಗಳು, ಸಾರಿಗೆಯ ಸಾಧನಗಳು, ಮತ್ತು ಸರಕುಗಳು) ಮತ್ತು ಉತ್ಪಾದನಾ ಸಾಧನಗಳನ್ನು (ಕಾರ್ಖಾನೆ ಮತ್ತು ಉಪಕರಣಗಳು) ತಮ್ಮಿಷ್ಟ ಬಂದಂತೆ ಬಳಸಲು ಹೊಂದಿದ್ದರು. ಬಂಡವಾಳವಾದದ ಆರಂಭ ಹಂತವೊಂದರಲ್ಲಿ ಬಂಡವಾಳಶಾಹಿಗಳು ಉದ್ಯಮಶೀಲರೂ ಸಹ ಆಗಿದ್ದರು, ಅವರೇ ಉದ್ಯಮಗಳನ್ನು ಆರಂಭಿಸಿ ನಡೆಸುತ್ತಿದ್ದರು, ಅಂದರೆ ಒಡೆತನ ಮತ್ತು ನಿಯಂತ್ರಣ ಒಬ್ಬರ ಕೈಯಲ್ಲೇ ಇದ್ದವು. (ನಂತರದ ಕಾಲಘಟ್ಟದಲ್ಲಿ ಜಾಯಿಂಟ್ ಸ್ಟಾಕ್ ಕಂಪನಿಗಳು ಹುಟ್ಟಿಕೊಂಡ ಮೇಲೆ ವ್ಯವಸ್ಥಾಪನೆ ಮತ್ತು ನಿಯಂತ್ರಣವು ಹೆಚ್ಚು ಹೆಚ್ಚಾಗಿ ವ್ಯವಸ್ಥಾಪಕರಿಗೆ ವಹಿಸಲ್ಪಟ್ಟಿತು, ಮತ್ತು ಮುಖ್ಯಸ್ಥ (principal-ಹೂಡಿಕೆದಾರ)-ಪ್ರತಿನಿಧಿ (agent-ಮಧ್ಯವರ್ತಿ/ಕಾರ್ಯಭಾರಿ) ಸಮಸ್ಯೆ ಎಂದು ಕರೆಯಲಾಗುವ ಸಮಸ್ಯೆ ಹುಟ್ಟಿಕೊಂಡಿತು: ವ್ಯವಸ್ಥಾಪಕರು (“ಪ್ರತಿನಿಧಿಗಳು”) ಕೇವಲ ತಮ್ಮ ಸ್ವಂತ ಹಿತಾಸಕ್ತಿಯಲ್ಲಿ ಮಾತ್ರ ಅಲ್ಲದೆ, ಒಡೆಯರ (“ಮುಖ್ಯಸ್ಥರ”) ಹಿತಾಸಕ್ತಿಯಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ಹೇಗೆ?) ಬಂಡವಾಳದ ಮಾಲೀಕರ ಆದಾಯವು ಲಾಭವಾಗಿತ್ತು, ಅಂದರೆ ಮಾರಾಟದಿಂದ ಬರುವ ಆದಾಯ ಹಾಗೂ ಉತ್ಪಾದನಾ ವೆಚ್ಚದ ನಡುವಿನ ವ್ಯತ್ಯಾಸ, ಮತ್ತು ಹಣ ಬಂಡವಾಳವಾಗಿದ್ದ ಸಂದರ್ಭದಲ್ಲಿ ಅದರ ಮೇಲಿನ ಬಡ್ಡಿ. ಬಂಡವಾಳ ಹೊಂದಿದವರಿಗೆ ಉಳಿತಾಯ ಮಾಡುವುದು ಮತ್ತು ಅದನ್ನು ಉತ್ಪಾದನಾ ವ್ಯವಸ್ಥೆಯ ಅಭಿವೃದ್ಧಿ ಹಾಗೂ ಆಧುನೀಕರಣದ ಮೇಲೆ ಹೂಡಿಕೆ ಮಾಡುವುದು ಸಾಧ್ಯವಿತ್ತು, ಮತ್ತು ಹಾಗೆ ಮಾಡಲು ಬೇಕಾದ ಪ್ರೇರಕಗಳನ್ನು ಸ್ಪರ್ಧೆಯು ಒದಗಿಸುತ್ತಿತ್ತು.

ಮೂರನೆಯದಾಗಿ, ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು 17ನೆಯ ಶತಮಾನದಲ್ಲಿ ನಡೆದ ಧಾರ್ಮಿಕ ಯುದ್ಧಗಳ ಕಾಲಘಟ್ಟದಲ್ಲಿ ವ್ಯವಸ್ಥೆಯನ್ನು ಹಾಗೇ ಬಿಟ್ಟರೆ ಅದು ಅನಿವಾರ್ಯವಾಗಿ ಒಂದು ಅಂತರ್ಯುದ್ಧಕ್ಕೆ ಎಡೆಮಾಡಿಕೊಡುವುದು ಎಂಬ ಯುರೋಪಿನಲ್ಲಿ ಪ್ರಚಲಿತವಾಗಿದ್ದ ದೃಢ ನಂಬಿಕೆಯನ್ನು ಅಲ್ಲಗಳೆದರು. *‘ಲೆವಾಯತನ್ (Leviathan)’* (1651), ಎಂಬ ತಮ್ಮ ಗ್ರಂಥದಲ್ಲಿ ಥಾಮಸ್ ಹಾಬ್ಸ್ (Thomas Hobbes) (1588–1679) ತನ್ನ ಸಹಜ ಸ್ಥಿತಿಯಲ್ಲಿ ಮನುಷ್ಯನಿಗೆ ಪ್ರತಿಯೊಂದರ ಮೇಲೆಯೂ ನಿಸರ್ಗದತ್ತ ಹಕ್ಕಿದೆ ಮತ್ತು ಅವನು ತನ್ನ ಲಂಗುಲಗಾಮಿಲ್ಲದ ಆಸೆಗಳ ಹಿನ್ನೆಲೆಯಲ್ಲಿ ದುರಾಶಾಪ್ರವೃತ್ತಿಯ ತೋಳದಂತಾಗುತ್ತಾನೆ: *‘ಹಾಮೊ ಹಾಮಿನಿ ಲೂಪಸ್ ಎಸ್ಟ್ (homo homini lupus est)’* ಎಂಬ ವಾದವನ್ನು ಮುಂದಿಟ್ಟಿದ್ದರು. ಇಂತಹ ಸಹಜ ಸ್ಥಿತಿಯು ಎಲ್ಲರೂ ಎಲ್ಲರೊಂದಿಗೆ ಯುದ್ಧಕ್ಕಿಳಿಯುವಂತಹ ತಪ್ಪಿಸಲಾಗದ ಹಂತಕ್ಕೆ ಕೊಂಡೊಯ್ಯುತ್ತದೆ *(bellum omnium contra omnes (ಬೆಲ್ಲುಂ ಆಮ್ನಿಯಮ್ ಕಾಂತ್ರಾ ಆಮ್ನೆಸ್*)). ಲೆವಾಯತನ್ (ಪೆಡಂಭೂತ)ಸ್ವರೂಪದ ನಿರಂಕುಶ ಪ್ರಭುತ್ವವು ನಿರಂಕುಶ ಅಧಿಕಾರವನ್ನು ಹೊಂದಿದ್ದು ಸಹಜ ಸ್ಥಿತಿಯನ್ನು ಕೊನೆಗಾಣಿಸಿ, “ಸೊಕ್ಕಿನ ಮಕ್ಕಳನ್ನು” ಹದ್ದುಬಸ್ತಿನಲ್ಲಿಡುವ ಮೂಲಕ ಒಂದು ಸಾಮಾಜಿಕ ಸಮತೋಲನದ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ.

ಹಾಗೇನಿಲ್ಲ ಎಂದು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ತಮ್ಮ ಆಕ್ಷೇಪವನ್ನು ಮುಂದಿಟ್ಟರು: ದೇಶದ ಒಳಗೆ ಮತ್ತು ಹೊರಗೆ ಮುಕ್ತ ವ್ಯಾಪಾರವನ್ನು ಆಧರಿಸಿರುವ ಪರಸ್ಪರಾವಲಂಬಿತ ಮಾರುಕಟ್ಟೆಗಳ ಮೂಲಕ ಆರ್ಥಿಕ ಚಟುವಟಿಕೆಯ ಹೆಚ್ಚಿನ ಭಾಗವು ಸಮನ್ವಯಗೊಂಡಿರುವ ಸಮಾಜವು (ಕೆಲವೊಂದು ನಿರ್ದಿಷ್ಟ ಸಂದರ್ಭಗಳಲ್ಲಿ) ಒಂದು ಸ್ವಯಂ ನಿಯಂತ್ರಿತ ಸಮಸ್ಥಿತಿಯ (homeostatic)ವ್ಯವಸ್ಥೆಯಾಗಿರುತ್ತದೆ ಎಂದರು. ಹೀಗೆ “ಸಮತೋಲನದ” ಪರಿಕಲ್ಪನೆಯು ಅರ್ಥಶಾಸ್ತ್ರಜ್ಞರ ಮನಸ್ಥಿತಿಯ ಭಾಗವಾಯಿತು. ಮೇಲಾಗಿ, ಇಂತಹ ಒಂದು ವ್ಯವಸ್ಥೆಯು ಇನ್ನಿತರ ಎಲ್ಲಾ ಆರ್ಥಿಕ ಪದ್ಧತಿಗಳಿಗಿಂತ ಹೆಚ್ಚಾಗಿ ಸಮಾಜದ ಸಂಪತ್ತು ವೇಗವಾಗಿ ಹೆಚ್ಚಾಗುವುದಕ್ಕೆ ಅನುಕೂಲ ಮಾಡಿಕೊಡುತ್ತದೆ, ಏಕೆಂದರೆ

ಅದು ಕಠಿಣ ಪರಿಶ್ರಮ, ವ್ಯವಹಾರ ಚಾತುರ್ಯ ಮತ್ತು ಹೊಸದನ್ನು ಕಂಡುಹಿಡಿಯುವ ಮನೋಭಾವವನ್ನು ಪ್ರಚೋದಿಸುತ್ತದೆ ಎಂದು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ವಾದಿಸಿದರು. ಹಾಬ್ಸ್ ರ ಸಂದೇಹಗಳು ಆಧಾರವಿಲ್ಲದ್ದು ಎಂದು ಅವರು ಪ್ರತಿಪಾದಿಸಿದರು. *'ಲೇಸ್ಸೇ ಫೇರ್, ಲೇಸ್ಸೇ ಪಾಸ್ಸೆ, ಲೆ ಮೌನ್ದ್ ವಾ ದೆ ಲುವಿ – ಮೆಮ್ (Laissez faire, laissez passer, le monde va de lui-même)'* (ಅದು ಹಾಗೇ ಇರಲಿ, ಅದನ್ನು ಅದರಷ್ಟಕ್ಕೆ ಬಿಡಿ, ಜಗತ್ತು ತನ್ನಷ್ಟಕ್ಕೆ ತಾನು ನಡೆಯುತ್ತದೆ) ಎಂದು ಆರ್ಥಿಕ ಉದಾರವಾದವು ನೀಡಿದ ಸುಪ್ರಸಿದ್ಧ ಕರೆಯಾಗಿತ್ತು. ಮಾರುಕಟ್ಟೆ ಆರ್ಥಿಕತೆಯು ಪರಿಣಾಮಕಾರಿಯಾಗಿ ಕೆಲಸ ಮಾಡುವುದಲ್ಲದೆ, ಕೇಂದ್ರ ಯೋಜಿತ ಆಜ್ಞಾಧಾರಿತ ಅರ್ಥವ್ಯವಸ್ಥೆಗಿಂತ ಅಥವಾ ಗಣನೀಯ ಪ್ರಮಾಣದಲ್ಲಿ ಸರ್ಕಾರದ ಮಧ್ಯಪ್ರವೇಶಗಳಿರುವ ಅರ್ಥವ್ಯವಸ್ಥೆಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದೆಂಬ ನಿರೀಕ್ಷೆಯನ್ನಿಟ್ಟುಕೊಳ್ಳಬಹುದು ಎಂಬ ದೃಢ ನಂಬಿಕೆಯು ಒಂದು ಮುಖ್ಯ ಸೂಚ್ಯಪರಿಣಾಮವನ್ನು ಹೊಂದಿತ್ತು: ಅದು ಆರ್ಥಿಕ ವ್ಯವಹಾರಗಳನ್ನು ಯಾವಾಗ ಮಾರುಕಟ್ಟೆಗಳಿಗೆ ಬಿಡಬೇಕು ಮತ್ತು ಯಾವಾಗ ಆರ್ಥಿಕ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ ಪಾತ್ರವಿದೆ ಎಂಬುದರ ಮರುವ್ಯಾಖ್ಯಾನಕ್ಕೆ ದಾರಿ ಮಾಡಿ ಕೊಟ್ಟಿತು. ಊಳಿಗಮಾನ್ಯ ಪದ್ಧತಿಯಲ್ಲಿ ಪ್ರಜೆಗಳು ವ್ಯಾಪಾರದಲ್ಲಿ ತೊಡಗಿಕೊಳ್ಳಲು ರಾಜಪ್ರಭುತ್ವದಿಂದ ಅನುಮತಿಯನ್ನು ಪಡೆದುಕೊಳ್ಳಬೇಕಾಗಿದ್ದರೆ, ಈಗ ಆರ್ಥಿಕ ಪ್ರಕ್ರಿಯೆಯಲ್ಲಿನ ಅದರ ಮಧ್ಯಪ್ರವೇಶಿಕೆಗೆ, ಅದು ಸಂಗ್ರಹಿಸುವ ತೆರಿಗೆಗೆ, ಅದರ ವೆಚ್ಚ ಮುಂತಾದವುಗಳಿಗೆ ಸರ್ಕಾರವು ಬಲವಾದ ಕಾರಣಗಳನ್ನು ಒದಗಿಸುವಂತೆ ಅದನ್ನು ಕೇಳಲಾಯಿತು. ಹೀಗೆ ಸಾಕ್ಷಿ ನೀಡಬೇಕಾದ ಜವಾಬ್ದಾರಿಯನ್ನು ತಿರುಗು ಮುರುಗು ಮಾಡಲಾಯಿತು.

ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ನಾಲ್ಕನೆಯ ಪ್ರಮುಖ ಕಲ್ಪನೆ ಮತ್ತು ಒಂದು ಬಹಳ ಮುಖ್ಯವಾದ ಕಲ್ಪನೆ ಎಂದರೆ ಅದು ಮಾನವನ ಕ್ರಿಯೆಯು ಸಾಮಾನ್ಯವಾಗಿ ವ್ಯಕ್ತಿಯು ಉದ್ದೇಶಿಸದೇ ಇದ್ದ, ಯೋಜಿಸದೇ ಇದ್ದ ಮತ್ತು ಮೊದಲೇ ಮುಂಗಾಣ್ಕೆಗೆ ಸಿಗದಿದ್ದ ಪರಿಣಾಮಗಳಿಗೆ ಎಡೆ ಮಾಡಿಕೊಡುತ್ತದೆ ಎಂಬುದು. ಆಡಂ ಫೆರ್ಗುಸನ್ (Adam Ferguson) (1723-1816) ಅವರು ಬಹಳ ಚೊಕ್ಕವಾಗಿ ಮುಂದಿಟ್ಟಂತೆ: "ಚರಿತ್ರೆಯು ಮಾನವನ ಚಟುವಟಿಕೆಯ ಫಲಿತಾಂಶವೇ ಹೊರತು ಮಾನವನ ಯಾವುದೇ ಉದ್ದೇಶಪೂರ್ವಕ ಯೋಜನೆಯ ಕಾರ್ಯರೂಪವಲ್ಲ". ಸಾಂಪ್ರದಾಯಿಕ ರೂಢಮಾದರಿಯಲ್ಲಿ ವ್ಯಕ್ತಿಗಳನ್ನು ಸಂಕೀರ್ಣ ಉದ್ದೇಶಗಳನ್ನು ಸಾಮಾನ್ಯವಾಗಿ ಹೊಂದಿರುವ ಸ್ವಂತ ಹಿತಾಸಕ್ತಿಯುಳ್ಳ ಜೀವಿಗಳು ಎಂದು ನೋಡಲಾಗಿದೆ. ತಕ್ಕಮಟ್ಟಿಗೆ ರಸಹೀನವಾಗಿ ಕಾಣುವ ಆಕೃತಿಯಾದ *'ಹೋಮೋ ಎಕನಾಮಿಕಸ್ (homo economicus)'* - ನಂತರದ ಆರ್ಥಿಕ ಚಿಂತನೆಗೆ ಕೇಂದ್ರವಾದ ಸ್ವಾರ್ಥ ವ್ಯಕ್ತಿಯ ಪೂರ್ವಜ - ಕಿನೆ ಅವರ ಬರಹಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಈ ಆರಂಭಿಕ ನಿರೂಪಣೆಯಲ್ಲಿ ಆತನು ತನ್ನ ಆನಂದಾನುಭವವನ್ನು *(ಜ್ಯೂಯಿಸಾನ್ಸ್ (jouissance))* ಗರಿಷ್ಠಗೊಳಿಸಿಕೊಳ್ಳಲು ಮತ್ತು ಸಂಪನ್ಮೂಲಗಳ ಬಳಕೆಯನ್ನು ಕನಿಷ್ಠಗೊಳಿಸಿಕೊಳ್ಳಲು ಇಷ್ಟಪಡುವವನು - ಇದೊಂದು ಕಷ್ಟದ ಕೆಲಸ, ಏಕೆಂದರೆ ದತ್ತ ಒಂದರ ನಿರ್ದಿಷ್ಟ ಮಟ್ಟಕ್ಕೆ ಮತ್ತೊಂದರ ಪ್ರಮಾಣವನ್ನು ಗರಿಷ್ಠ ಮಟ್ಟಕ್ಕೆ ಅಥವಾ ಕನಿಷ್ಠ ಮಟ್ಟಕ್ಕೆ ಬದಲಾಯಿಸುವುದು ಮಾತ್ರವೇ ಸಾಧ್ಯವಾದ ಪರ್ಯಾಯ. ಆದರೆ ಅಯ್ಯೋ, ಅದು ಮನುಷ್ಯ ಸ್ಥಿತಿಯ ಬದಲಾಯಿಸಲಾಗದಂತಹ ಅಂಶವಾಗಿದ್ದು ಅದನ್ನು ಮನುಷ್ಯರು ಅವರು ಬದುಕಿರುವ ಜಗತ್ತನ್ನು ಕೇವಲ ಭಾಗಶಃ ಮಾತ್ರ ತಿಳಿದು ಅರ್ಥ ಮಾಡಿಕೊಂಡಿರುವರು ಹಾಗೂ ಎಂದಿಗೂ ಸಹ ಅದರ ಬಗ್ಗೆ ಪೂರ್ತಿ ಅರಿವನ್ನು ಬೆಳೆಸಿಕೊಳ್ಳಲಾರರು, ಮತ್ತು ಆದ್ದರಿಂದ ಪದೇಪದೇ ಅವರು ತಮ್ಮ ಯೋಜನೆಯ ಭಾಗವೇ ಆಗಿರದಿದ್ದಂತಹ ಪರಿಣಾಮಗಳನ್ನು ಉಂಟುಮಾಡುವ ರೀತಿಯಲ್ಲಿ ವರ್ತಿಸುವುದು ಅನಿವಾರ್ಯ. ಈ ಕೆಲವು ಪರಿಣಾಮಗಳು ಇತರರ ಕಲ್ಯಾಣದ ಮೇಲೆ ಒಳ್ಳೆಯ ರೀತಿಯಲ್ಲೋ ಅಥವಾ ಕೆಟ್ಟ ರೀತಿಯಲ್ಲೋ ಪ್ರಭಾವಿಸಬಹುದು.

ಮನುಷ್ಯರು ತಮ್ಮದೇ ಆದ ಒಂದು ದ್ವೀಪದಲ್ಲಿದ್ದ ರಾಬಿನ್ಸನ್ ಕ್ರೂಸೋನಂತೆ (ಫ್ರೈಡೆಯನ್ನು ಭೇಟಿಯಾಗುವ ಮೊದಲು) ಒಬ್ಬಂಟಿಗರಾಗಿ ಜೀವಿಸುವ ವ್ಯಕ್ತಿಗಳಲ್ಲ. ದ್ವೀಪದಲ್ಲಿ ಬೇರೆ ಯಾವ ವ್ಯಕ್ತಿಯು ಇರಲಿಲ್ಲವಾದ್ದರಿಂದ ರಾಬಿನ್ಸನ್ ತನ್ನ ಅಗತ್ಯಗಳು ಮತ್ತು ಬೇಕುಗಳನ್ನು ತೃಪ್ತಿ ಪಡಿಸಿಕೊಳ್ಳಲು ತನಗೆ ಲಭ್ಯವಿದ್ದ ಎಲ್ಲ ಸಾಧನಗಳನ್ನು ತನಗೆ ಸಾಧ್ಯವಾದಷ್ಟು ಮಟ್ಟಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡು ತನ್ನ ಸುತ್ತಲಿನ ಭೌತಿಕ ಜಗತ್ತಿನೊಂದಿಗಿನ ಸಂಬಂಧದ ಮೇಲೆ ತನ್ನ ಸಂಪೂರ್ಣ ಗಮನವನ್ನು ಕೇಂದ್ರೀಕರಿಸಬಹುದಾಗಿತ್ತು; ಆದರೆ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಅಧ್ಯಯನ ಮಾಡಿದ ಅರ್ಥವ್ಯವಸ್ಥೆಯಲ್ಲಿ ಹಾಗೆ ಮಾಡಲು ಸಾಧ್ಯವಿಲ್ಲ. ಅರ್ಥವ್ಯವಸ್ಥೆಯಲ್ಲಿನ ವಿಭಿನ್ನ ಪ್ರತಿನಿಧಿಗಳು (ವ್ಯಕ್ತಿಗಳು) ಮತ್ತು ಶಾಖೆಗಳು ಪರಸ್ಪರ ಒಂದನ್ನೊಂದು ಅವಲಂಬಿಸಿರುತ್ತವೆ ಎಂಬುದನ್ನು ಗುರುತಿಸುತ್ತಾ ಈ ಅರ್ಥಶಾಸ್ತ್ರಜ್ಞರು ಆರ್ಥಿಕ ಘಟಕಗಳ *'ಪರಸ್ಪರಾವಲಂಬನೆ '* ಯನ್ನು ಒಂದು ಪ್ರಮುಖ ವಿಶ್ಲೇಷಣಾತ್ಮಕ ವಿಷಯವನ್ನಾಗಿ ನೋಡಲಾರಂಭಿಸಿದರು. ಪ್ರತಿನಿಧಿಗಳ ಸ್ವಾಹಿತಾಸಕ್ತ ಕ್ರಿಯೆಗಳಿಂದ ಉಂಟಾಗುವ ಉದ್ದೇಶಿತ ಮತ್ತು ಅನುದ್ದೇಶಿತ ಪರಿಣಾಮಗಳ ಗೋಜಲಮಯ ಸಂಬಂಧವನ್ನು ವಿಶ್ಲೇಷಿಸುವುದು ರಾಜಕೀಯ ಅರ್ಥನೀತಿಯ ಕಾರ್ಯವಾಯಿತು. ವಿಶಿಷ್ಟವಾಗಿ, ಯಾವ ಕ್ರಿಯೆಗಳು ಮತ್ತು ವರ್ತನೆಗಳು ಕೇವಲ ಖಾಸಗಿಯಾಗಿ ಅಲ್ಲದೆ ಸಾಮಾಜಿಕವಾಗಿ ಕೂಡ ಲಾಭದಾಯಕ ಪರಿಣಾಮಗಳನ್ನು ಉಂಟುಮಾಡುತ್ತವೆ ಎಂಬುದನ್ನು ಮತ್ತು ಯಾವ ಕ್ರಿಯೆಗಳು ಖಾಸಗಿಯಾಗಿ ಲಾಭದಾಯಕವಾಗಿದ್ದರೂ ಸಹ ಸಾಮಾಜಿಕವಾಗಿ ಹಾನಿಕರ ಎಂಬುದನ್ನು ತಿಳಿಯುವುದೇ ಗುರಿಯಾಗಿತ್ತು. ತತ್ಪರಿಣಾಮವಾಗಿ ಇದು ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳಲ್ಲಿ ಮೂಢನಂಬಿಕೆ, ಉನ್ಮಾದತೆ ಮತ್ತು ಉತ್ಸಾಹವನ್ನು ತೊಲಗಿಸಲು ಹಾಗೂ ಲಾಭದಾಯಕ ವರ್ತನೆಗಳನ್ನು ಬೆಂಬಲಿಸುವಂತಹ ಮತ್ತು ಹಾನಿಕಾರಕವಾದವುಗಳನ್ನು ನಿಗ್ರಹಿಸುವಂತಹ ಸಾಮಾಜಿಕ ಸಂಸ್ಥೆಗಳು, ಉತ್ತೇಜಕಗಳು, ಕಾನೂನುಗಳು, ಮತ್ತು ನಿಯಂತ್ರಿಸುವ ಚೌಕಟ್ಟನ್ನು ಸೂಚಿಸುವುದು ಎಂದಾಯಿತು. ಹೀಗೆ ರಾಜಕೀಯ ಅರ್ಥನೀತಿ ಒಂದು ವಿಶೇಷ ಕಾರ್ಯರೂಪದ ಪ್ರಸ್ತುತತೆ ಹೊಂದಿರುವುದಾಗಿ ನೋಡಲಾಯಿತು.

ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಚಿಂತನೆಯ ಐದನೆಯ ಗುಣಲಕ್ಷಣವೆಂದರೆ, ಬಹುತೇಕ ರಾಷ್ಟ್ರಗಳ ಬೃಹತ್ತಾದ ಮತ್ತು ಬೆಳೆಯುತ್ತಿದ್ದ ಸಂಪತ್ತಿನ ಮುಖ್ಯ ಮೂಲವು, ಬೇರೆ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿಕೊಳ್ಳುವುದು ಮತ್ತು ಅವರ ಸಂಪನ್ಮೂಲಗಳನ್ನು ತಮ್ಮ ಉಪಯೋಗಕ್ಕೆಂದು ದೋಚಿಕೊಳ್ಳುವುದಾಗಲೀ ಅಥವಾ ಅನುಕೂಲಕರ ಸಾಗರದಾಚೆಗಿನ ವ್ಯಾಪಾರವಾಗಲೀ ಅಲ್ಲ ("ಅಗ್ಗವಾಗಿ ಕೊಂಡುಕೊಂಡು ದುಬಾರಿಯಾಗಿ ಮಾರುವಂತಹ ವ್ಯವಹಾರ") ಎಂಬ ದೃಢ ನಂಬಿಕೆ. ಬದಲಿಗೆ ಸಂಪತ್ತಿನ ಮುಖ್ಯ ಮೂಲವು ಕೈಗಾರಿಕೆ ಮತ್ತು ದುಡಿಯುವ ಜನತೆಯ ಪರಿಶ್ರಮ - ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಶ್ರಮ ಮತ್ತು ಉತ್ಪಾದನೆ - ಹಾಗೂ ಹೆಚ್ಚುತ್ತಿದ್ದ ಶ್ರಮದ ಉತ್ಪಾದಕತೆ. ಇನ್ನು ಸಾಂಪ್ರದಾಯಿಕ (ಚಿಂತನೆಯ) ಕರ್ತರು ಸಂಪತ್ತನ್ನು ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ರಾಜನ ಖಜಾನೆಯಲ್ಲಿನ ಚಿನ್ನ ಮತ್ತು ಬೆಳ್ಳಿಯ ದಾಸ್ತಾನಿಗೆ ಸಂಬಂಧಿಸಿ ಅಳೆಯುವುದ್ನು ಕೈಬಿಟ್ಟರು, ಬದಲಿಗೆ ಒಂದು ವರ್ಷದಲ್ಲಿ ಉತ್ಪಾದಿಸಿದ ನಿವ್ವಳ ಸರಕುಗಳ *'ಪರಿಚಲನೆ'* ಗೆ ಸಂಬಂಧಿಸಿ ಅಳೆಯಲಾರಂಭಿಸಿದರು. ಈ ರೀತಿಯಲ್ಲಿ ಅವರು ನಿವ್ವಳ ದೇಶೀಯ ಉತ್ಪಾದನೆ ಎಂಬ ಆಧುನಿಕ ಪರಿಕಲ್ಪನೆಯನ್ನು ಮುಂಗಾಣಿದರು: ಯಾವುದೇ ಒಂದು ರಾಷ್ಟ್ರದ ನಿವ್ವಳ ಸಾಮಾಜಿಕ ಉತ್ಪನ್ನದ ತಲಾವಾರು ಹೆಚ್ಚಾಗಿದ್ದಷ್ಟು ಹೆಚ್ಚು ಶ್ರೀಮಂತವಾಗಿರುವುದು- ಅಂದರೆ ಅದರ ಒಟ್ಟು ದೇಶೀಯ ಉತ್ಪನ್ನದಲ್ಲಿ (ಜಿಡಿಪಿಯಲ್ಲಿ) ಅಗತ್ಯವಾಗಿ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಬಳಸಲಾಗುವ ಎಲ್ಲ ಸರಕುಗಳನ್ನು (ಕಚ್ಚಾ ವಸ್ತುಗಳು, ಸಲಕರಣೆಗಳು, ಮತ್ತು ಯಂತ್ರಗಳು ಮಾತ್ರವಲ್ಲದೆ ಅಗತ್ಯವಾಗಿ ಶ್ರಮಪಡೆಯ ಕಲ್ಯಾಣಕ್ಕೆ ತಗಲುವ ವೆಚ್ಚವೂ ಸಹ) ಕಳೆದರೆ ಬರುವಂಥದ್ದು. ಕಿನೆ *"ಪ್ರೋದ್ವಿ ನೆಟ್ (produit net)"* (ನಿವ್ವಳ ಆದಾಯ/ಲಾಭ) ಕುರಿತು ಮಾತನಾಡಿದರೆ, ಆಡಂ ಸ್ಮಿತ್ ಮತ್ತು ಡೇವಿಡ್ ರಿಕಾರ್ಡೊ "ಹೆಚ್ಚುವರಿ ಉತ್ಪನ್ನ" ಅಥವಾ "ನಿವ್ವಳ ಉತ್ಪನ್ನ" ದ ಬಗ್ಗೆ

ಮಾತನಾಡಿದರು. ಸಾಂಪ್ರದಾಯಿಕ (ಚಿಂತನೆಯ) ಕರ್ತರ ವಿಶ್ಲೇಷಣೆಗಳ ಒಂದು ಮುಖ್ಯ ಗುಣಲಕ್ಷಣವೆಂದರೆ ಅವರು ಉತ್ಪಾದನಾ ಸಾಮರ್ಥ್ಯವುಳ್ಳ ಕಾರ್ಮಿಕರಿಗೆ ಅವರು ಬದುಕುಳಿಯಲು ಮತ್ತು ಮುಂದಿನ ತಲೆಮಾರನ್ನು ಹುಟ್ಟಿಸಲು ಅಗತ್ಯವಾದ ಜೀವನಾಧಾರ ಸಾಧನವನ್ನು ವರ್ಷಂ ಪ್ರತಿಯ ಮುಂಗಡ ವೆಚ್ಚಗಳ ಭಾಗವನ್ನಾಗಿ ಪರಿಗಣಿಸಿದರು ಮತ್ತು ಹೀಗೆ ಉತ್ಪಾದನೆಯ ಅನಿವಾರ್ಯ ಭೌತಿಕ ಹಾಗೂ ವಾಸ್ತವಿಕ ವೆಚ್ಚಗಳನ್ನು ಜಾನುವಾರುಗಳ ಆಹಾರ ಮತ್ತು ಯಂತ್ರಗಳ ಇಂಧನ - ಇವುಗಳಿಗೆ ಸರಿಸಮವಾಗಿ ಪರಿಗಣಿಸಿದರು. (ಬದಲಿಗೆ ಇಂದಿನ ಕಾಲದ ರಾಷ್ಟ್ರದ ಲೆಕ್ಕಾಚಾರದಲ್ಲಿ ಕಾರ್ಮಿಕರ ಒಟ್ಟಾರೆಯ ಕೂಲಿಯನ್ನು ಸಾಮಾಜಿಕ ನಿವ್ವಳ ಉತ್ಪನ್ನದ ಲೆಕ್ಕದಲ್ಲಿ ತೆಗೆದುಕೊಳ್ಳಲಾಗುತ್ತದೆ.)

ಗೋಧಿ, ಬ್ರೆಡ್, ಕಬ್ಬಿಣ, ಉಪಕರಣಗಳು, ಯಂತ್ರಗಳು ಮುಂತಾದ ಉತ್ಪಾದಿಸಲು ಸಾಧ್ಯವಾಗುವ ಮತ್ತು ಪುನರುತ್ಪಾದಿಸಲು ಸಾಧ್ಯವಾಗುವ ಸರಕುಗಳ ಮೇಲೆ ಗಮನವನ್ನು ಕೇಂದ್ರೀಕರಿಸಲಾಗಿತ್ತು. (ಪುನರುತ್ಪಾದಿಸಲು ಸಾಧ್ಯವಾಗದ ಕಲಾ ವಸ್ತುಗಳಂತಹ ಸರಕುಗಳಿಗೆ ಹೆಚ್ಚಿನ ಗಮನ ಕೊಡಲಿಲ್ಲ.) ಪುನರುತ್ಪಾದನೆ ಎಂಬುದು ಹೆಚ್ಚುವರಿಯ (ಮಿಗುತಾಯದ) ಅವಳಿ ಪರಿಕಲ್ಪನೆಯಾಗಿತ್ತು. ಅರ್ಥವ್ಯವಸ್ಥೆಯೊಂದು, ವರ್ಷದ ನಂತರ ಮತ್ತೊಂದು ವರ್ಷದಂತೆ, ಕನಿಷ್ಠ ಅದು ಅವಶ್ಯವಾಗಿ ಉತ್ಪಾದನೆಯಲ್ಲಿ ಬಳಸಿಕೊಳ್ಳುವಷ್ಟಾದರೂ ಉತ್ಪಾದಿಸಲು ಮತ್ತು ಹೀಗೆ “ನಾಶ ಮಾಡಲು” ಅಥವಾ “ಪರಿಣಾಮಕಾರಿಯಾಗಿ ಬಳಸಿಕೊಳ್ಳಲು” (ಇದರಲ್ಲಿ ಉತ್ಪಾದನೆಯ ಸಾಧನಗಳು ಮತ್ತು ಜೀವನಾಧಾರದ ಸಾಧನಗಳು ಸೇರುತ್ತವೆ) ಅವುಗಳನ್ನು ಉತ್ಪಾದಿಸಲು ಶಕ್ತವಾಗಿದ್ದರೆ ಆಗ ಅದು ಅದನ್ನು ಸ್ವತಃ ತನ್ನನ್ನು ಪುನರುತ್ಪಾದಿಸಿಕೊಳ್ಳಲು ಸಮರ್ಥವಾಗಿದೆ ಎಂದು ಹೇಳಬಹುದು. ಆರ್ಥಿಕ ನೀತಿಯ ಒಂದು ಪ್ರಮುಖ ಕಾಳಜಿ ಏನಿತ್ತೆಂದರೆ, ಯಾವುದೇ ಅಂಶವು (ಉತ್ಪಾದನಾ) ವ್ಯರ್ಥವಾಗಿ ಪೋಲಾಗುವುದನ್ನು ತಪ್ಪಿಸಿ, ಫಲಕಾರಿತ್ವವನ್ನು ಉತ್ತಮಪಡಿಸಿ, ಶ್ರಮದ ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ ಸಾಮಾಜಿಕ ಮಿಗುತಾಯವನ್ನು ಹೆಚ್ಚಿಸುವುದಾಗಿತ್ತು. ಹೆಚ್ಚುವರಿಯನ್ನು ಸೃಷ್ಟಿಸುವಂತಹ ವ್ಯವಸ್ಥೆಗಳಲ್ಲಿ, ಆ ಹೆಚ್ಚುವರಿಯನ್ನು ಹೇಗೆ ಬಳಸಿಕೊಳ್ಳುವುದು ಎಂಬುದು ಯಾವಾಗಲೂ ಕಾಡುವ ಪ್ರಶ್ನೆಯಾಗಿರುತ್ತದೆ: ಒಂದೋ ಅದನ್ನು ಬಳಸಿಕೊಳ್ಳಬಹುದು ಅಥವಾ ಉಳಿತಾಯ ಮಾಡಿ ಅದನ್ನು ಹೂಡಿಕೆ ಮಾಡಬಹುದು (ಅಂದರೆ ಶೇಖರಣೆಯಾಗಿರುವುದು). ಹೂಡಿಕೆ ಮಾಡಿದಲ್ಲಿ ಅರ್ಥವ್ಯವಸ್ಥೆಯು ಬೆಳೆಯುತ್ತದೆ, ಮಾರುಕಟ್ಟೆಗಳು ಹಿಗ್ಗುತ್ತವೆ, ಶ್ರಮ ವಿಭಜನೆಯು ಹೆಚ್ಚಿನ ಮಟ್ಟದ ಶ್ರಮ ವಿಭಜನೆಗೆ ಎಡೆ ಮಾಡಿಕೊಡುತ್ತದೆ, ಮತ್ತು ಉತ್ಪಾದಕತೆಯು ಬೆಳೆಯುತ್ತಾ ಹೋಗುತ್ತದೆ. ಆ ಕಾರಣ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಹೆಚ್ಚುವರಿಯ ಗಾತ್ರ, ಬೆಳೆಯುತ್ತಿರುವ ಗಾತ್ರದಲ್ಲಿ ಆಸಕ್ತಿ ಹೊಂದಿದ್ದರು.

ಆದರೆ ಮಿಲಿಯಾಂತರ ಸ್ವತಂತ್ರವಾಗಿ ತೆಗೆದುಕೊಳ್ಳಲ್ಪಡುವ ನಿರ್ಧಾರಗಳ ಮತ್ತು ಕ್ರಿಯೆಗಳ ಸಮನ್ವಯವನ್ನು ಮಾರುಕಟ್ಟೆಗಳಿಗೆ ಬಿಟ್ಟುಬಿಡುವ ಖಾಸಗಿ ವಿಕೇಂದ್ರಿತ ವ್ಯವಸ್ಥೆಯೊಂದು ಹೇಗೆ ಕೆಲಸ ಮಾಡುತ್ತದೆ? ಇದು ನಮ್ಮನ್ನು ಮುಕ್ತ ಪೈಪೋಟಿ, ಸಮರೂಪದ ಲಾಭ ಧರಗಳನ್ನು ಹೊಂದಲು ಪ್ರಯತ್ನಿಸುವ ಪ್ರವೃತ್ತಿ, ಮತ್ತು ಅದಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆ ದರಗಳು ತಮ್ಮ ಸಹಜ ಮಟ್ಟದತ್ತ ಸಾಗುವ ಪರಿಕಲ್ಪನೆಗಳನ್ನು ಆಧಾರವನ್ನಾಗಿ ಹೊಂದಿರುವಂತ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ದೃಷ್ಟಿಕೋನದ ಆರನೆಯ ಗುಣಲಕ್ಷಣದತ್ತ ಕೊಂಡೊಯ್ಯುತ್ತದೆ. ಓರ್ವ ಪ್ರತಿನಿಧಿಯು ಒಂದು ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿನ ಒಂದು ಪರಸ್ಪರಾವಲಂಬಿತ ಮಾರುಕಟ್ಟೆಗಳ ಜಾಲದ ಮೂಲಕ ತನ್ನ ಸ್ವಂತ ಹಿತಾಸಕ್ತಿಯನ್ನು ಅನುಸರಿಸುವುದು, ಅನೇಕ ಅರ್ಥಶಾಸ್ತ್ರಜ್ಞರು ಮತ್ತು ಸಾಮಾಜಿಕ ತತ್ವಶಾಸ್ತ್ರಜ್ಞರು ವಾದಿಸಿದ್ದಂತೆ ಅರಾಜಕತೆ ಮತ್ತು ಗೊಂದಲಮಯದ ಸ್ಥಿತಿಯನ್ನು ಸೂಚಿಸುವುದಿಲ್ಲ ಎಂಬುದನ್ನು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ನಿರೂಪಿಸಬೇಕಾಗಿತ್ತು. ಯಾವುದೇ ಲೆವಾಯತನ್ (ನಿರಂಕುಶ ಪ್ರಭುತ್ವದ) ನ ಅಗತ್ಯವೂ ಇಲ್ಲ ಮತ್ತು ಹಾಗೊಂದು ವೇಳೆ

ಇದ್ದಿದ್ದಲ್ಲಿ ಅದು ಬಹು ಸಂಖ್ಯಾತ ಜನಸ್ತೋಮದ ಕಲ್ಯಾಣಕ್ಕೆ ಹಾನಿಕಾರಕವಾಗಿರುವುದು. ಆದ್ದರಿಂದ, ಸಾಂಪ್ರದಾಯಿಕ ಅರ್ಥಶಾಸ್ತ್ರದ ತಿರುಳಿನಲ್ಲಿ ಮಾರುಕಟ್ಟೆ-ಮಧ್ಯಸ್ಥಿಕೆ ಆಧಾರಿತ ಸಮನ್ವಯ, ಬೆಲೆಯ ರಚನೆ, ಮತ್ತು ತತ್ಫಲವಾದ ಆದಾಯ ವಿತರಣೆಯ ಕುರಿತಾದ ಒಂದು ವಿವರಣೆ ಇತ್ತು .

ಸಾಂಪ್ರದಾಯಿಕ (ಚಿಂತನೆಯ) ಕರ್ತರ ದೃಷ್ಟಿಕೋನದಲ್ಲಿ ಬೆಲೆಗಳು ವಿವಿಧ ಸರಕುಗಳನ್ನು ಉತ್ಪಾದಿಸುವಲ್ಲಿ ಇರುವ ಪರಿಶ್ರಮವನ್ನು ಪ್ರತಿಬಿಂಬಿಸುತ್ತವೆ, ಅಂದರೆ ಅವುಗಳನ್ನು ಪಡೆದುಕೊಳ್ಳುವಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಿಕೊಳ್ಳುವಲ್ಲಿ ತಗಲುವ ವೆಚ್ಚ. ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಅಗತ್ಯವಾಗುವ ಶ್ರಮ (ಪರೋಕ್ಷವಾಗಿ ಎಂದರೆ ಕಚ್ಚಾ ಸಾಮಗ್ರಿಗಳು ಮತ್ತು ಉತ್ಪಾದನಾ ಸಾಧನಗಳಂತಹ ಉತ್ಪಾದನಾ ಪ್ರಕ್ರಿಯೆಯಲ್ಲಿ ಅಗತ್ಯವಾಗುವ ಉತ್ಪನ್ನಗಳನ್ನು ಉತ್ಪಾದಿಸುವಲ್ಲಿ ತಗಲುವ ಶ್ರಮ) ಈ ಪರಿಶ್ರಮದ ಸರಿಯಾದ ಅಳತೆ ಎಂದು ಪರಿಗಣಿಸಲಾಗಿತ್ತು. ಆದ್ದರಿಂದ ಬಹುತೇಕ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಒಂದಲ್ಲ ಒಂದು ರೀತಿಯ ಶ್ರಮ ಆಧಾರಿತ ಮೌಲ್ಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದು ಅದರ ಪ್ರಕಾರ ಸರಕಿನಲ್ಲಿ "ಸಾಕಾರಗೊಂಡಿರುವ" ಒಟ್ಟಾರೆ ಶ್ರಮದ ಪ್ರಮಾಣವು ಅದರ ಮೌಲ್ಯ ಅಥವಾ ಬೆಲೆಯನ್ನು ನಿರ್ಣಯಿಸಲು ಆಧಾರವಾಗುವುದು. ಅಲ್ಲದೆ ಬಹುತೇಕರು ವಿಭಿನ್ನ ಮಟ್ಟದ ಸಂಕೀರ್ಣ ತಿಳಿವಳಿಕೆಯ ಹೊರತಾಗಿಯೂ, ಸರಕೊಂದನ್ನು ಉತ್ಪಾದಿಸುವಲ್ಲಿನ ಕಾಲದ ಚಿತ್ರಣವು (time profile) ಸರಕಿನ ಮೌಲ್ಯವನ್ನು ನಿಗದಿಪಡಿಸುವಲ್ಲಿ ಮುಖ್ಯವಾಗುತ್ತದೆ ಎಂದು ಸಹ ಅರ್ಥ ಮಾಡಿಕೊಂಡರು. ಉದಾಹರಣೆಗೆ ಒಂದು ಸರಕಿನಲ್ಲಿ ಸಾಕಾರಗೊಂಡಿರುವ ಒಟ್ಟು ಶ್ರಮದ ಬಹುಪಾಲಿನ ಭಾಗವು ಅದರ ಉತ್ಪಾದನೆಯ ಆರಂಭಿಕ ಹಂತದಲ್ಲಿಯೇ ವ್ಯಯಿಸಿದ್ದರೆ ಆಗ ಕೂಲಿಯ ಬಹುಪಾಲಿನ ಭಾಗವು ಉತ್ಪನ್ನವು ಪೂರ್ತಿಯಾಗುವ ಮೊದಲೇ ಕೊಡಲಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ಲಾಭಗಳ ಧನಾತ್ಮಕ ದರದ ಲೆಕ್ಕದಲ್ಲಿ ಈ ಮೊತ್ತವನ್ನು ಮೊದಲೇ ಚಕ್ರ ಬಡ್ಡಿಯ ಆಧಾರದ ಮೇರೆಗೆ ಲೆಕ್ಕ ಹಾಕಿ ಸರಕಿನ ಬೆಲೆಯಲ್ಲಿ ಸೇರಿಸಬೇಕಾಗುತ್ತದೆ. ಹಾಗಾಗಿ, ನಿಖರವಾಗಿ ಒಂದೇ ಪ್ರಮಾಣದ ಮೊತ್ತ ಶ್ರಮದಿಂದ ಉತ್ಪಾದಿಸಲಾದ ಎರಡು ಸರಕುಗಳೇ ಆಗಿರಬಹುದಾದರೂ, ಅವುಗಳಿಗೆ ಅನುರೂಪವಾಗಿ ವ್ಯಯಿಸಲಾದ ಶ್ರಮದ ಕಾಲ ಚಿತ್ರಣಗಳು ಭಿನ್ನವಾಗಿ ಇದ್ದಲ್ಲಿ, ವಿಭಿನ್ನ ಬೆಲೆಗಳನ್ನು ಹೊಂದಿರುತ್ತವೆ. ಇಂತಹ ಹೆಚ್ಚು ಸಾಮಾನ್ಯ ದೃಷ್ಟಿಕೋನದಲ್ಲಿ, "ಸಹಜ ಬೆಲೆಗಳು" ಒಂದರ ಬದಲು ಎರಡು ಕಾರಣಗಳನ್ನು ಅಭಿವ್ಯಕ್ತಿಸುತ್ತವೆ: ಬೇರೆ ಬೇರೆ ಸರಕುಗಳನ್ನು ಉತ್ಪಾದಿಸುವಲ್ಲಿ ಬಳಸಲಾದ ಉತ್ಪಾದನಾ ವಿಧಾನಗಳು (ಇವು ಶ್ರಮದ ವೆಚ್ಚದ ಒಟ್ಟಾರೆ ಪ್ರಮಾಣ ಮತ್ತು ಕಾಲ ಚಿತ್ರಣಗಳಲ್ಲಿ ಪ್ರತಿಬಿಂಬಿತವಾಗಿರುತ್ತವೆ) ಮತ್ತು ಆದಾಯ ವಿತರಣೆ, ಅಂದರೆ, ನೈಜ ಕೂಲಿಯ ಮಟ್ಟ (ಮತ್ತು ಅದಕ್ಕೆ ಅನುರೂಪವಾಗಿ ಲಾಭಗಳ ಸಾಮಾನ್ಯ ದರದ ಮಟ್ಟ). ಮೊದಲನೆಯದು ಒಂದು ನಿರ್ದಿಷ್ಟ ಕಾಲ ಮತ್ತು ಸ್ಥಳದಲ್ಲಿ ಇರುವ ತಾಂತ್ರಿಕ ಮತ್ತು ವ್ಯವಸ್ಥೆಮಾಡಿಕೊಳ್ಳುವ ಜ್ಞಾನವನ್ನು ಅಭಿವ್ಯಕ್ತಿಸುತ್ತದೆಯಾದರೆ, ಎರಡನೆಯದು ಆದಾಯದ ವಿತರಣೆಯ ಕುರಿತಾದ "ವಿವಾದದಲ್ಲಿನ" (ಇದು ಆಡಂ ಸ್ಮಿತ್ ಹೇಳಿದಂತೆ) ಅಧಿಕಾರ ಶಕ್ತಿಯ ಸಮತೋಲನವನ್ನು ಪ್ರತಿಬಿಂಬಿಸುತ್ತದೆ. ಪೈಪೋಟಿಯ ಪರಿಸ್ಥಿತಿಗಳು ಉದ್ದಿಮೆಗಳನ್ನು ತಮ್ಮ ವೆಚ್ಚ ಕಡಮೆ ಮಾಡುವಂತೆ ಒತ್ತಾಯಿಸುತ್ತವೆ ಎಂಬುದಾಗಿ ನೋಡಲಾಗುತ್ತದೆ.

ಏಳನೆಯದಾಗಿ, ಸಾಂಪ್ರದಾಯಿಕ ಆರ್ಥಿಕ ಚಿಂತನೆಯು ಪೈಪೋಟಿಯನ್ನು ಮಾರುಕಟ್ಟೆಯ ಎರಡೂ ಕಡೆಯಲ್ಲಿ ಪ್ರತಿನಿಧಿಗಳವರಲ್ಲಿಯೇ ಪೈಪೋಟಿ - ಅಂದರೆ ಪೂರೈಕೆದಾರರು ಮತ್ತು ಬೇಡಿಕೆದಾರರು ಅವರುಗಳಲ್ಲಿಯೇ ಪೈಪೋಟಿ ಎಂದು ಅರ್ಥೈಸಿತ್ತು. ಉದಾಹರಣೆಗೆ ಉದ್ದಿಮೆಗಳು ಸಾಧ್ಯವಾದಷ್ಟು ಹೆಚ್ಚಾದ ಮಾರಾಟದ ಪ್ರಮಾಣ ಮತ್ತು ಮಾರುಕಟ್ಟೆಯ ಪಾಲಿಗಾಗಿ ಪರಸ್ಪರ ಪೈಪೋಟಿಗಿಳಿಯುತ್ತವೆ. ಸ್ಪರ್ಧೆಯು ಒಂದು ವಸ್ತುವಿನ ಮೇಲಿನ ನಿಯಂತ್ರಣವು

ಏಕಸ್ವಾಮ್ಯಕ್ಕೆ ಒಳಪಟ್ಟಿರುವುದಿಲ್ಲ, ಬದಲಿಗೆ ಅದು ಅನೇಕ ಪ್ರತಿನಿಧಿಗಳ ನಡುವೆ ಹಂಚಿಹೋಗಿರುತ್ತದೆ ಎಂದು ಭಾವಿಸುತ್ತದೆ. ಮಧ್ಯಯುಗದ ವೃತ್ತಿಸಂಘದ ವ್ಯವಸ್ಥೆ, ಊಳಿಗಮಾನ್ಯ ಜಮೀನೊಂದರಲ್ಲಿ ಕೆಲಸ ಮಾಡಲು ಜೀತದಾಳೊಬ್ಬನು ಹೊಂದಿರುವ ದಾಸ್ಯ ಸ್ವರೂಪದ ಬಾಧ್ಯತೆ, ಅಥವಾ ಏಕಸ್ವಾಮ್ಯತೆಗೆ ರಾಜಾನುಗ್ರಹದ ಮೂಲಕ ಪಡೆದ ಅನುಮತಿ ಇವೆಲ್ಲವೂ ಶ್ರಮದ ಮತ್ತು ಬಂಡವಾಳದ ಚಲನಶೀಲತೆಗೆ ಅಡೆತಡೆಯೊಡ್ಡಿದ್ದವು ಮತ್ತು ಅಸಹಜವಾಗಿ ಹೆಚ್ಚಿದ ಆದಾಯಗಳನ್ನು ಸ್ಪರ್ಧೆಯ ವ್ಯಾಪ್ತಿಗೆ ಬರದಂತೆ ರಕ್ಷಿಸಿದ್ದವು. ಇಂದಿನ ಪರಿಭಾಷೆಯಲ್ಲಿ ಅಂತಹ ಮಾರುಕಟ್ಟೆಗಳು "ಸ್ಪರ್ಧಾತ್ಮಕದವಲ್ಲ". ಏಕಸ್ವಾಮ್ಯತೆಗಳು, ಸವಲತ್ತುಗಳು ಮತ್ತು ದುಡಿಯುವವರ ಮತ್ತು ಬಂಡವಾಳದ ಚಲನಶೀಲತೆಗೆ ಒಡ್ಡುವ ಅಡ್ಡಿಗಳು ಇವೆಲ್ಲವೂ ಸಾಮಾನ್ಯವಾಗಿ ಕೆಲವರಿಗೆ ಮಾತ್ರ ಅನುಕೂಲಕರವಾಗಿರುತ್ತವೆ, ಬಹುತೇಕರಿಗೆ ಅನಾನುಕೂಲವನ್ನು ಉಂಟು ಮಾಡುತ್ತವೆ ಎಂದು ಸಾಂಪ್ರದಾಯಿಕ (ಚಿಂತನೆಯ) ಕರ್ತರು ತೋರಿಸಿದರು.

ಸ್ಮಿತ್ ನ ಪ್ರಕಾರ ಮುಕ್ತ ಪೈಪೋಟಿ ಆದರ್ಶ ಸ್ಥಿತಿ, ಅಂದರೆ ಮಾರುಕಟ್ಟೆ ಪ್ರವೇಶ ಮತ್ತು ನಿರ್ಗಮನಕ್ಕೆ ಯಾವುದೇ ಗಮನಾರ್ಹ ಅಡೆತಡೆಗಳು ಇಲ್ಲದಿರುವುದು. ಮುಕ್ತ ಪೈಪೋಟಿ ಸುಸಂಬದ್ಧತೆ ಹಾಗೂ ಕ್ರಮಬದ್ಧತೆಯನ್ನು ಖಚಿತಪಡಿಸುತ್ತದೆ ಮತ್ತು ಶ್ರಮ ಉತ್ಪಾದಕತೆಯನ್ನು ಚುರುಕುಗೊಳಿಸುತ್ತದೆ ಎಂಬುದು ಸಾಂಪ್ರದಾಯಿಕ ಚಿಂತಕರ ದೃಢ ನಂಬಿಯಾಗಿತ್ತು. ಸ್ಮಿತ್ ಅವರ ಪ್ರಸಿದ್ಧ ಹೇಳಿಕೆಯ ಪ್ರಕಾರ ಅದೊಂದು "ಅದೃಶ್ಯ ಹಸ್ತ" ದಂತೆ ಕೆಲಸ ಮಾಡುತ್ತದೆ ಮತ್ತು ಪ್ರಭುತ್ವದ ಗೋಚರವಾಗುವ ಹಸ್ತದ ಸ್ಥಾನವನ್ನು ತುಂಬುತ್ತದೆ. ಒಂದು ಸಾಮಾಜಿಕ ವ್ಯವಸ್ಥೆಯಾಗಿ ಮುಕ್ತ ಪೈಪೋಟಿಯು ಒಂದು ಲೆವಾಯತನ್ ನ ಅವಶ್ಯಕತೆ ಇಲ್ಲದೆ ಪ್ರತಿಫಲ ಹಾಗೂ ಶಿಕ್ಷೆಯನ್ನು ನೀಡುವುದು. ಅದು ಮನುಷ್ಯನ ಸ್ವಾಹಿತಾಸಕ್ತಿಯನ್ನು ಬಳಸಿಕೊಳ್ಳುತ್ತದೆ. ಮಾರುಕಟ್ಟೆಯಲ್ಲಿ ಯಾವುದಾದರೂ ಒಂದು ಸರಕಿನ ಸರಬರಾಜಿನಲ್ಲಿ ಕೊರತೆಯುಂಟಾಗಿದ್ದರೆ, ಆಗ ಬೇಡಿಕೆದಾರರ ನಡುವಿನ ಪೈಪೋಟಿಯು ಮಾರುಕಟ್ಟೆ ಬೆಲೆಯನ್ನು ಮೇಲಕ್ಕೇರಿಸುತ್ತದೆ. ಇದು ಲಾಭಾಂಶವನ್ನು ಹೆಚ್ಚಿಸಿದ್ದು ಬೇರೆ ಶಾಖೆಗಳಿಂದ ಬಂಡವಾಳ ಮತ್ತು ಶ್ರಮವನ್ನು ಆಕರ್ಷಿಸುತ್ತದೆ ಮತ್ತು ಅಂತಿಮವಾಗಿ ಉತ್ಪನ್ನದ ಹೆಚ್ಚಳಕ್ಕೆ ಮತ್ತು ಕೊರತೆಯಲ್ಲಿದ್ದ ಸರಕಿನ ಸರಬರಾಜಿನಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ. ತತ್ಪರಿಣಾಮವಾಗಿ ಇದು ಮಾರುಕಟ್ಟೆ ಬೆಲೆಗಳು ಮತ್ತೊಮ್ಮೆ ಕುಸಿಯುವುದರಲ್ಲಿ ಪರಿಣಮಿಸುತ್ತದೆ. ಯಾವುದೇ ಸರಕಿನ ಸರಬರಾಜು ಅತ್ಯಧಿಕವಾದ ಸಂದರ್ಭದಲ್ಲಿ ಇದೇ ಪ್ರಕ್ರಿಯೆಯು ತಿರುಗುಮುರುಗಾಗುತ್ತದೆ.

ಬಂಡವಾಳ ಹೊಂದಿದವರಲ್ಲಿ ತಾವು ಹೂಡಿದ ಒಂದು ಘಟಕದಷ್ಟು ಬಂಡವಾಳಕ್ಕೆ ಸಾಧ್ಯವಾದಷ್ಟು ಅತಿ ಹೆಚ್ಚು ಲಾಭಗಳನ್ನು ಪಡೆಯಬೇಕೆಂಬ ಕೊನೆಯಿಲ್ಲದ ತಹತಹಿಕೆ ಮತ್ತು ಸಾಧ್ಯವಾದಷ್ಟು ಹೆಚ್ಚಿನ ಮಟ್ಟದ ಕೂಲಿಗಳನ್ನು ಪಡೆದುಕೊಳ್ಳಬೇಕೆಂಬ ಕಾರ್ಮಿಕರ ಅವಿರತ ಪ್ರಯತ್ನಗಳು ಆರ್ಥಿಕತೆಯ ಎಲ್ಲಾ ಶಾಖೆಗಳಲ್ಲಿಯೂ ಸಾಮಾನ್ಯ ಲಾಭದ ಧರಗಳು ಅಥವಾ ಬಂಡವಾಳಕ್ಕೆ ಬರುವ ಪ್ರತಿಫಲ ದರಗಳು ಏಕರೂಪವಾಗಿ ಸಮಾನವಾಗಿರುವುದಕ್ಕೆ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದಕ್ಕೆ ಎಡೆ ಮಾಡಿಕೊಡುತ್ತದೆ. ಸಾಂಪ್ರದಾಯಿಕ (ಮತ್ತು ಸಾಂಪ್ರದಾಯಿಕೋತ್ತರ) ಆರ್ಥಿಕ ಚಿಂತನೆ ಎರಡೂ ಸಾಮಾನ್ಯ ಲಾಭಗಳ ದರದ ನಿರ್ಣಯ ಮತ್ತು ಕಾಲಕ್ರಮೇಣ ಆಗುವ ಅದರ ಚಲನೆ ಮೇಲೆ ಕೇಂದ್ರಿತವಾಗಿದ್ದವು. ಮಾರ್ಕ್ಸ್ ನಂತರ ತನ್ನ *'ಕ್ಯಾಪಿಟಲ್ (Capital)'* ಗ್ರಂಥದಲ್ಲಿ ವ್ಯಕ್ತಪಡಿಸಿದಂತೆ, ಲಾಭಗಳ ದರವು ವ್ಯವಸ್ಥೆಯಲ್ಲಿನ ಒಂದು ಪ್ರಮುಖ ಅಂಶವಾಗಿದೆ, ಅದು "ಶೇಖರಣೆಗೆ ಪ್ರೇರಣೆ... ಮತ್ತು ಚಾಲಕ ಶಕ್ತಿಯೂ ಕೂಡ". ಲಾಭಗಳ ನಿರೀಕ್ಷೆಯಲ್ಲಿ ಹೂಡಿಕೆಯು ನಡೆಯುತ್ತದೆ ಮತ್ತು ಲಾಭಗಳಿಂದಲೇ ಹೂಡಿಕೆಗಳಿಗೆ ಹಣಕಾಸು ದೊರಕುತ್ತದೆ. ಲಾಭಗಳ ದರದಲ್ಲಿ ಕುಸಿತವಾದರೆ ಹೊಸ ಬಂಡವಾಳವನ್ನು ರೂಪಿಸಿಕೊಳ್ಳಲು ಬೇಕಾದ ಆಸಕ್ತಿಯು ದುರ್ಬಲಗೊಳ್ಳುತ್ತದೆ ಮತ್ತು ಆರ್ಥಿಕ ಬೆಳವಣಿಗೆಯು ಸ್ಥಗಿತವಾಗುತ್ತದೆ.

ಅಂತಿಮವಾಗಿ, ಎಂಟನೆಯ ಅಂಶವೇನೆಂದರೆ, ಲಾಭಗಳ ಸಾಮಾನ್ಯ ದರದ ಪರಿಕಲ್ಪನೆಯ ಜೊತೆಜೊತೆಗೆ "ಸಹಜ" ಅಥವಾ "ಉತ್ಪಾದನಾ" ಬೆಲೆಗಳ ಪರಿಕಲ್ಪನೆಯು ಅದಕ್ಕೆ ಅನುರೂಪವಾಗಿ ಇತ್ತು. ಇವು ಚಾಲ್ತಿಯಲ್ಲಿರುವ ವ್ಯವಸ್ಥಿತವಾದ ಮತ್ತು ಶಾಶ್ವತವಾದ ಶಕ್ತಿಗಳನ್ನು ಪ್ರತಿಬಿಂಬಿಸಿದರೆ, "ಮಾರುಕಟ್ಟೆ" ಯ ಬೆಲೆಗಳು ಅದರ ಜೊತೆಗೆ ಬಹುವಾದ ಅನುಷಂಗಿಕ ಮತ್ತು ತಾತ್ಕಾಲಿಕ (ಉದಾಹರಣೆಗೆ:ಹವಾಮಾನ) ಅಂಶಗಳನ್ನು ಪ್ರತಿಬಿಂಬಿಸುತ್ತವೆ ಎಂದು ಭಾವಿಸಲಾಗಿತ್ತು. ಪೈಪೋಟಿಯು ಮಾರುಕಟ್ಟೆಯ ಬೆಲೆಗಳು ಉತ್ಪಾದನೆಯ ಬೆಲೆಗಳಿಗೆ ಹೆಚ್ಚುಕಡಮೆ ಸರಿಸಮವಾಗಿರುವಂತೆ ಅಥವಾ ಅವುಗಳಿಗೆ ಅನುಗುಣವಾಗಿ ಏರುಪೇರಾಗುವಂತೆ ಮಾಡುತ್ತದೆ, ಹಾಗಾಗಿ ಮಾರುಕಟ್ಟೆ ಬೆಲೆಗಳು ಉತ್ಪಾದನಾ ಬೆಲೆಗಳಿಗಿಂತ ಗಮನಾರ್ಹವಾಗಿ ಹೆಚ್ಚಾಗಿ ಇರುವುದಿಲ್ಲ ಎಂದು ಪರಿಗಣಿಸಲಾಗಿತ್ತು. ಕೇವಲ ಉತ್ಪಾದನಾ ಬೆಲೆಗಳ ಮೂಲಕ ಮಾತ್ರವೇ ಸಾಮಾನ್ಯೀಕರಿಸಬಹುದಾದ ಹೇಳಿಕೆಗಳನ್ನು ರೂಪಿಸಿಕೊಳ್ಳಲು ಸಾಧ್ಯ ಎಂದು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಒತ್ತಿ ಹೇಳಿದರು ಮತ್ತು ಆದ್ದರಿಂದ ಅಂತಹ ಬೆಲೆಗಳನ್ನು ಅರ್ಥಮಾಡಿಕೊಳ್ಳುವುದರ ಮೇಲೆ ಅವರ ಗಮನ ಕೇಂದ್ರಿತವಾಗಿತ್ತು. ಈ ಬೆಲೆಗಳು ಮತ್ತು ಅದಕ್ಕೆ ಅನುರೂಪವಾದ ವಿತರಕ ಚರಾಂಶಗಳು - ಲಾಭಗಳ ಸಾಮಾನ್ಯ ದರ, ನೈಜ ಕೂಲಿ, ಮತ್ತು ಭೂಮಿಯ ಮೇಲಿನ ಬಾಡಿಗೆ - ಬಂಡವಾಳ ಶೇಖರಣೆಯಾದಂತೆ, ಜನಸಂಖ್ಯೆ ಹೆಚ್ಚಿದಂತೆ, ನೈಸರ್ಗಿಕ ಸಂಪನ್ಮೂಲಗಳಲ್ಲಿ ಕೊರತೆ ಕಾಣಿಸಿಕೊಂಡಂತೆ, ಮತ್ತು ಹೊಸ ತಾಂತ್ರಿಕ ಮತ್ತು ವ್ಯವಸ್ಥೆಮಾಡಿಕೊಳ್ಳುವ ಜ್ಞಾನವು ಆರ್ಥಿಕ ವ್ಯವಸ್ಥೆಯಲ್ಲಿ ಒಳಸರಿದಂತೆ ಕಾಲಕ್ರಮೇಣವಾಗಿ ಬದಲಾಗುವುದು ಖಚಿತವಾಗಿತ್ತು. ಸಾಂಪ್ರದಾಯಿಕ (ಚಿಂತನೆಯ) ಕರ್ತರು ಆರ್ಥಿಕ ಅಭಿವೃದ್ಧಿಯನ್ನು ಆರ್ಥಿಕ ವ್ಯವಸ್ಥೆಯ ದೀರ್ಘಕಾಲೀನ ಪರಿಸ್ಥಿತಿಗಳ ಅನುಕ್ರಮಕ್ಕೆ ಸಂಬಂಧಿಸಿ ಅಧ್ಯಯನ ಮಾಡಲು ಪ್ರಯತ್ನಿಸಿದ್ದು ಅವು ಪ್ರತಿಯೊಂದು ಬೆಲೆಗಳ, ಲಾಭಗಳ ದರ, ಕೂಲಿ ಮತ್ತು ಬಾಡಿಗೆಗಳ ನಿರ್ದಿಷ್ಟ ಮಟ್ಟಗಳ ಗುಣಲಕ್ಷಣಗಳನ್ನು ಹೊಂದಿದಂತಾಗಿದ್ದವು.

ಈ ಭಾಗವನ್ನು, ಸ್ಮಿತ್ ಮತ್ತು ರಿಕಾರ್ಡೊ ಬಹಳ ಸರಳವಾದ ಗೋಧಿಯ ಮಾದರಿ (ಬ್ರಿಟಿಷರ ಇಂಗ್ಲಿಷ್ ಭಾಷೆಯಲ್ಲಿ ಹೇಳಬೇಕೆಂದರೆ "ಜೋಳದ" ಮಾದರಿ) ಎಂದು ಗುರುತಿಸಲಾಗುವ ಉದಾಹರಣೆಯ ಮೂಲಕ ಅವುಗಳನ್ನು ಚರ್ಚಿಸಿದಂತೆ, ಕೂಲಿಗಳು, ಲಾಭಗಳು, ಮತ್ತು ಸಹಜ ಬೆಲೆಗಳನ್ನು ಸಂಬಂಧಿಸುವಂತಹ ಸಂಬಂಧಕಗಳನ್ನು ತೋರಿಸುವುದರ ಮೂಲಕ ನಾವು ಈ ಭಾಗವನ್ನು ಮುಕ್ತಾಯ ಮಾಡೋಣ. ಈ ಮಾದರಿಯಲ್ಲಿ ಉತ್ಪಾದನೆಯು ಕೃಷಿ ಮತ್ತು ತಯಾರಿಕೆ ಈ ಎರಡು ಕ್ಷೇತ್ರಗಳಲ್ಲಿ ನಡೆಯುತ್ತದೆ. ವಿಷಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ನಾವು ನೆಲದ ಬಾಡಿಗೆಯನ್ನು ಗಣನೆಗೆ ತೆಗೆದುಕೊಳ್ಳದೆ ಇರೋಣ - ಅಂದರೆ ಗೋಧಿಯನ್ನು ಬೆಳೆಯುವ ಭೂಮಿಗೆ ತೆರಬೇಕಾದ ಬಾಡಿಗೆ. (ಹೀಗೆ ನಾವು ಅತ್ಯುತ್ತಮ ಗುಣಮಟ್ಟದ ಭೂಮಿಯು ಪ್ರಪುಲ್ಲವಾಗಿ ಲಭ್ಯವಿದೆ ಎಂಬುದನ್ನು ಸೂಚ್ಯವಾಗಿ ಭಾವಿಸುತ್ತೇವೆ.) ಕೃಷಿಯ ಕ್ಷೇತ್ರದಲ್ಲಿ ಗೋಧಿಯ (ಬೀಜದ) ಮೂಲಕ ಗೋಧಿಯನ್ನು ಬೆಳೆಯಲಾಗುತದೆ ಮತ್ತು ತಯಾರಿಕೆಯ ಕ್ಷೇತ್ರದಲ್ಲಿ ಅದನ್ನು ಸಮಾಜದಲ್ಲಿನ ಶ್ರೀಮಂತ ವರ್ಗಕ್ಕೆಂದು ವಿಸ್ಕಿಯನ್ನಾಗಿ ಭಟ್ಟಿ ಇಳಿಸಲಾಗುತ್ತದೆ. ಗೋಧಿಯನ್ನು ಕಾರ್ಮಿಕರ ಹೊಟ್ಟೆ ತುಂಬಿಸಲು, ಕೃಷಿಯಲ್ಲಿ ಬೀಜವಾಗಿ ಮತ್ತು ಕೈಗಾರಿಕೆಯಲ್ಲಿ ಕಚ್ಚಾ ಸಾಮಗ್ರಿಯಾಗಿ ಬಳಸಲಾಗುತ್ತದೆ. ಆದ್ದರಿಂದ ಅದು ಸ್ವತಃ ತನ್ನನ್ನೂ ಒಳಗೊಂಡು ಎಲ್ಲಾ ಉತ್ಪನ್ನಗಳ ಉತ್ಪಾದನೆಯಲ್ಲಿ ನೇರವಾಗಿ ಒಳಸೇರಿರುತ್ತದೆ. "ಗೋಧಿ" ಎಂಬುದು ಎಲ್ಲಾ ಆಹಾರ ಪದಾರ್ಥಗಳನ್ನು ಅಥವಾ ಕಾರ್ಮಿಕರ ಎಲ್ಲಾ ಅವಶ್ಯಕತೆಗಳನ್ನು ಪ್ರತಿನಿಧಿಸುವಂತಹ ಒಂದು ಸಮಷ್ಟಿಯ ಪದ. ಒಳಸುರಿಯಾಗಿ ಅದು ಎಲ್ಲ ಕಡೆಯೂ ಸಹ ಅನಿವಾರ್ಯ, ಏಕೆಂದರೆ ಎಲ್ಲೆಡೆಯೂ ಶ್ರಮವನ್ನು ಬಳಸಲಾಗುತ್ತದೆ. ಮೇಲೆ ಹೇಳಿದ ಎರಡು ಕ್ಷೇತ್ರಗಳಲ್ಲಿ ಯಾವುದರಲ್ಲೇ ಆಗಲಿ ನೀಡಲಾಗುವ ನೈಜ ಕೂಲಿಗಳು, ಕೆಲಸಗಾರರಿಗೆ ಒಂದು ಗಂಟೆಗೆ ನೀಡಲಾಗುವ ಗೋಧಿಯ ಪ್ರಮಾಣ ಮತ್ತು ಅವರು ವರ್ಷದಲ್ಲಿ ಎಷ್ಟು ಗಂಟೆಗಳ ಕಾಲ ಕೆಲಸ ಮಾಡಿದ್ದಾರೆ ಎಂಬುದನ್ನು ಗುಣಿಸಿದಾಗ ಬರುವ ಮೊತ್ತಕ್ಕೆ ಸಮನಾಗಿರುತ್ತದೆ. ಅದೇ ರೀತಿಯಲ್ಲಿ,

ಮತ್ತೊಂದೆಡೆ "ವಿಸ್ಕಿ" ಎಂಬುದು "ವಿಲಾಸಿ ವಸ್ತುಗಳು" ಎಂದು ಕರೆಯಲಾಗುವ ಎಲ್ಲಾ ಗ್ರಾಹಕ ವಸ್ತುಗಳನ್ನು ಪ್ರತಿನಿಧಿಸುವಂತಹ ಒಂದು ಸಮಷ್ಟಿಯ ಪದ; ಅದು ಎಲ್ಲಿಯೂ ಸಹ ಉತ್ಪಾದನೆಗೆ ಅಗತ್ಯವಾದ ಒಳಸುರಿಯಾಗಿ ಬಳಕೆಯಾಗುವುದಿಲ್ಲ.

ಗೋಧಿಯ ಒಟ್ಟಾರೆ ವಾರ್ಷಿಕ ಉತ್ಪನ್ನದಲ್ಲಿ ಗೋಧಿಗಾಗಿ ಮಾಡಿರುವ ಒಟ್ಟಾರೆ ವೆಚ್ಚವನ್ನು (ಗೋಧಿ ಬೀಜ ಮತ್ತು ಕಾರ್ಮಿಕರ ಆಹಾರಕ್ಕೆಂದು ಬಳಕೆಯಾದ ಬಂಡವಾಳಕ್ಕೆ ಸಮನಾದದ್ದು) ಕಳೆದರೆ ನಮಗೆ ಗೋಧಿಯ ನಿವ್ವಳ ಉತ್ಪನ್ನವು ದೊರಕುತ್ತದೆ. ಈ ನಿವ್ವಳ ಉತ್ಪನ್ನವು ರೈತರ (ಅಂದರೆ, ಭೂಮಿಯ ಗೇಣಿದಾರರಿಗೆ) ಲಾಭವಾಗಿರುತ್ತದೆ. ಲಾಭ ಮತ್ತು ಬಳಸಿದ ಬಂಡವಾಳದ ನಡುವಿನ ಅನುಪಾತವು ಕೃಷಿಯಲ್ಲಿ ಗಳಿಸಿಕೊಂಡ ಲಾಭದ ದರಕ್ಕೆ ಸಮನಾಗಿರುತ್ತದೆ. ತಯಾರಿಕೆಯ ಕ್ಷೇತ್ರದಲ್ಲಿ ಗೋಧಿಯ ನಿವ್ವಳ ಉತ್ಪನ್ನದ ಒಂದು ಭಾಗವನ್ನು ಕಾರ್ಮಿಕರನ್ನು ಕೆಲಸಕ್ಕಾಗಿ ತೆಗೆದುಕೊಳ್ಳಲು ಮತ್ತು ವಿಸ್ಕಿಯನ್ನು ಭಟ್ಟಿ ಇಳಿಸುವ ಪ್ರಕ್ರಿಯೆಯಲ್ಲಿ ಕಚ್ಚಾ ಸಾಮಗ್ರಿಯಾಗಿ ಬಳಸಲಾಗುತ್ತದೆ. ಮುಕ್ತ ಪೈಪೋಟಿಯ ಪರಿಸ್ಥಿತಿಗಳಲ್ಲಿ ವಿಸ್ಕಿಯ ಉತ್ಪಾದಕರು ರೈತರಷ್ಟೇ ಲಾಭದ ದರವನ್ನು ಪಡೆದುಕೊಳ್ಳುತ್ತಾರೆ. ಇದರ ಅರ್ಥವೇನೆಂದರೆ ಉತ್ಪಾದಿಸಲ್ಪಟ್ಟ ವಿಸ್ಕಿ ಪ್ರಮಾಣದ ಬೆಲೆಯು ಅದನ್ನು ಉತ್ಪಾದಿಸುವಲ್ಲಿ ಬಳಕೆಯಾದ ಗೋಧಿ (ಅಥವಾ ಬಂಡವಾಳ) ಮತ್ತು ಏಕರೂಪ ಲಾಭದ ದರ ಇವೆರಡರ ಮೊತ್ತಕ್ಕೆ ಸಮನಾಗಿರುತ್ತದೆ. ಆದರೆ ಈ ದರವು, ನಾವು ಗಮನಿಸಿರುವಂತೆ, ಕೃಷಿ ಕ್ಷೇತ್ರದಲ್ಲಿ ಈಗಾಗಲೇ ನಿರ್ಣಯಿಸಲ್ಪಟ್ಟಿದೆ. ಹೀಗೆ, ಕೃಷಿ ಮತ್ತು ತಯಾರಿಕೆಯ ಕ್ಷೇತ್ರದಲ್ಲಿನ ಉತ್ಪಾದನೆಯ ತಾಂತ್ರಿಕ ಪರಿಸ್ಥಿತಿಗಳು ಮತ್ತು ಗೋಧಿಯ ವಿಷಯದಲ್ಲಿ ನೈಜ ಕೂಲಿ ದರವು ದತ್ತವಾಗಿರುವುದರಿಂದ ನಾವು ಲಾಭಗಳ ಸಾಮಾನ್ಯ ದರವನ್ನು ಮತ್ತು ಗೋಧಿಯ ಬೆಲೆಗೆ ಸಾಪೇಕ್ಷವಾಗಿ ವಿಸ್ಕಿಯ ಬೆಲೆಯನ್ನು ನಿರ್ಧರಿಸಬಹುದು. (ಈ ವಿಶ್ಲೇಷಣೆಯನ್ನು ಒಂದಕ್ಕಿಂತ ಹೆಚ್ಚು ಉತ್ಪನ್ನಗಳಿರುವ ವಿಷಯಕ್ಕೂ ಕೂಡ ಸುಲಭವಾಗಿ ಅನ್ವಯಿಸಬಹುದು.)

ಆದ್ದರಿಂದ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ದತ್ತ ಒಂದು ಸಮಯದಲ್ಲಿ ಒಂದು ಅರ್ಥವ್ಯವಸ್ಥೆಯಲ್ಲಿನ ಲಾಭದ ದರ ಮತ್ತು ಬೆಲೆಗಳನ್ನು ಈ ಕೆಳಗಿನ ಮಾಹಿತಿ (ಅಥವಾ ದತ್ತವಾದ ಅಥವಾ ಪ್ರತ್ಯೇಕ ಚರಾಂಶಗಳು)ಗಳನ್ನು ಗಣನೆಗೆ ತೆಗೆದುಕೊಂಡು ಸ್ಥಾಪಿಸಿದರು: (ಅಥವಾ ದತ್ತವಾದ ಸ್ವತಂತ್ರ ಚರ ಅಂಶಗಳು): (1) ಉತ್ಪಾದಿಸಲ್ಪಟ್ಟ ವಿಭಿನ್ನ ಸರಕುಗಳ ಒಟ್ಟಾರೆ ಉತ್ಪನ್ನ, (2) ಉತ್ಪಾದಕರಿಗೆ ಒಳಸುರಿಗಳನ್ನು ಉತ್ಪನ್ನಗಳಾಗಿ ಪರಿವರ್ತಿಸಲು ಲಭ್ಯವಿರುವ ತಂತ್ರಜ್ಞಾನ, ಮತ್ತು (3) ಅಸ್ತಿತ್ವದಲ್ಲಿರುವ ನೈಜ ಕೂಲಿ. ಲಾಭ ಮತ್ತು ಕೂಲಿಗಳನ್ನು *"ಅಸಮವಾಗಿ"* ನಿರ್ಣಯಿಸಲಾಗುತ್ತದೆ: ಲಾಭ ದರದ ಗಾತ್ರವನ್ನು ನಿರ್ಣಯಿಸಬೇಕು ಎಂದಾದಾಗ ಕೂಲಿಯ ದರ ಈಗಾಗಲೇ ಗೊತ್ತಿದೆ ಎಂದು ಭಾವಿಸಲಾಗುತ್ತದೆ. ವಿಶ್ಲೇಷಣೆಯ ಇನ್ನೊಂದು ಭಾಗದಲ್ಲಿ ಬಂಡವಾಳ ಶೇಖರಣೆ, ತಾಂತ್ರಿಕ ಪ್ರಗತಿ ಮತ್ತು ಜನಸಂಖ್ಯೆಯ ಬೆಳವಣಿಗೆಯನ್ನು ಪರಿಗಣಿಸುವಾಗ ಕೂಲಿಯ ದರದ ಮಟ್ಟವನ್ನು ಆನಂತರ ಪರಿಶೀಲಿಸಲಾಗುತ್ತದೆ. ಕಾಲಾಂತರದಲ್ಲಿ ಲಾಭದ ದರ, ಕೂಲಿಗಳು, ಮತ್ತು ಬೆಲೆಗಳು ಚರಾಂಶಗಳಾದ 1-3 ಬದಲಾದಂತೆ ಇವು ಸಹ ಬದಲಾಗುವುದು.

ಇದು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಅಳವಡಿಸಿಕೊಂಡಿದ್ದ ಹೆಚ್ಚುವರಿಯ ಸಿದ್ಧಾಂತದ ವಿಧಾನವಾಗಿದ್ದು ಅದು ನಂತರದ ಕನಿಷ್ಠ ಪ್ರಮಾಣ ಮೌಲ್ಯ ವಾದದ ವಿಧಾನಕ್ಕಿಂತ (ನೋಡಿ ಅಧ್ಯಾಯ 5) ಮೂಲಭೂತವಾಗಿ ಭಿನ್ನವಾಗಿದೆ.

**ಫ್ರಾಂಸ್ವಾ ಕಿನೆ**

ಕಿನೆ ತಮ್ಮ ಯುಗ ಪ್ರವರ್ತಕ ಶೋಧನೆಯಾದ *‘ತ್ಯಾಬ್ಲೊ ಇಕನಾಮಿಕ್ (Tableau Économique)’* (1756) ಎಂಬುದರ ಫಲಿತಾಂಶಗಳನ್ನು ಮುದ್ರಿಸುವಲ್ಲಿ ನೆರವಾದುದಕ್ಕಾಗಿ ನಾವು ಲೂಯಿ XV ಅವರ ಪ್ರಿಯತಮೆಯಾದ ಮಡೇಮ್ ದು ಪುಂಪಡೂರ್ ಅವರ ವೈಯಕ್ತಿಕ ವೈದ್ಯರಿಗೆ ಕೃತಜ್ಞರಾಗಿರಬೇಕು. ಒಂದು ಯಾಂತ್ರಿಕ ಗಡಿಯಾರವನ್ನು ಹೋಲುವ ಏಕೈಕ ಚಿತ್ರದ ಮೂಲಕ ಕಿನೆ ಇಡೀ ದೇಶದ ಸಾಮಾಜಿಕ ಸಂಪತ್ತಿನ ಉತ್ಪಾದನೆ, ವಿತರಣೆ ಮತ್ತು ಬಳಕೆಯನ್ನು ಚಿತ್ರಿಸಿದ್ದರು. ಅವರ ಚಿತ್ರದ ಪ್ರಕಾರ ಉತ್ಪಾದನೆಯು ಅವಲಂಬಿತವಾಗಿರುವ ಎರಡು ಕ್ಷೇತ್ರಗಳಾದ ಕೃಷಿ ಮತ್ತು ಕೈಗಾರಿಕೆಯಲ್ಲಿ ನಡೆಯುತ್ತವೆ. ಹಣಕ್ಕೆ ವಿನಿಮಯವಾಗಿ ಕೃಷಿ ಕ್ಷೇತ್ರವು ಕೈಗಾರಿಕೆಗೆ ಕಚ್ಚಾವಸ್ತುಗಳನ್ನು ಮತ್ತು ಜೀವನಾಧಾರ ಸಾಧನಗಳನ್ನು ಸರಬರಾಜು ಮಾಡಿದರೆ ಕೈಗಾರಿಕೆಯು ಕೃಷಿಗೆ ಬೇಕಾದಂತಹ ಸಲಕರಣೆಗಳನ್ನು (ನೇಗಿಲುಗಳು, ಉತ್ಪಾದನೆಗೆ ಬೇಕಾದ ಇತರ ಉಪಕರಣಗಳು ಇತ್ಯಾದಿ) ಸರಬರಾಜು ಮಾಡುತ್ತದೆ.

ಕಿನೆ ಅವರು ಕೃಷಿಯಲ್ಲಿ ಕೆಲಸ ಮಾಡುವವರನ್ನು “ಉತ್ಪಾದಕ ವರ್ಗ” ಎಂದು ಮತ್ತು ಕೈಗಾರಿಕೆಯಲ್ಲಿ ಕೆಲಸ ಮಾಡುವವರನ್ನು “ಬರಡು ವರ್ಗ” ಎಂದು ಕರೆದರು. ಮೊದಲನೆಯದು ‘ಉತ್ಪಾದಕ’ ಏಕೆಂದರೆ ಅದು ಬಳಸಿಕೊಳ್ಳುವುದಕ್ಕಿಂತ ಹೆಚ್ಚಿನ ಗೋಧಿಯನ್ನು ಉತ್ಪಾದಿಸುತ್ತದೆ (ಬೀಜ ಮತ್ತು ಜೀವನಾಂಶಕ್ಕೆ ಸಾಧನ). ಅದರ ನಿವ್ವಳ ಉತ್ಪನ್ನವನ್ನು ಅವರು “ಪ್ರಕೃತಿಯ ಪರಿಶುದ್ಧ ಕೊಡುಗೆ” ಎಂದು ಪರಿಗಣಿಸಿದರು - ಪ್ರಕೃತಿಯು ಮನುಷ್ಯರೊಂದಿಗೆ ಒಟ್ಟಿಗೆ ಕೆಲಸ ಮಾಡುತ್ತದೆ, ಆದರೆ ಅದು ತನ್ನ ಸೇವೆಯನ್ನು ಉದಾರವಾಗಿ ನೀಡುತ್ತದೆ. ಆದ್ದರಿಂದ ಅವರ ಆರ್ಥಿಕ ಸಿದ್ಧಾಂತವನ್ನು“ನೈಸರ್ಗಿಕತಾ ಪ್ರಭುತ್ವ (physiocracy (ಫಿಸಿಯೋಕ್ರೆಸಿ))” ಎಂದು ಕರೆಯಲಾಗುತ್ತದೆ, ಅಂದರೆ ನಿಸರ್ಗದ ಆಳ್ವಿಕೆ. ಎರಡನೆಯ ವರ್ಗವು ಬರಡು, ಏಕೆಂದರೆ ಅದು ಈ ನಿವ್ವಳ ಉತ್ಪನ್ನದ ಒಂದು ಭಾಗವನ್ನು, ಅದಕ್ಕೆ ಏನನ್ನೂ ಸೇರಿಸದೆ ಕೇವಲ ಇತರ ರೂಪಗಳಿಗೆ ಬದಲಾಯಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತದೆ (ಉದಾಹರಣೆಗೆ ಗೋಧಿಯನ್ನು ವಿಸ್ಕಿಯಾಗಿ ಪರಿವರ್ತಿಸುವುದು). ಜಮೀನುದಾರ ವರ್ಗವು (ರಾಜ, ಕುಲೀನರು, ಪಾದ್ರಿಗಳು) ಕೃಷಿಯ ನಿವ್ವಳ ಉತ್ಪನ್ನದ ಮೌಲ್ಯಕ್ಕೆ ಸಮನಾದ ಬಾಡಿಗೆಯನ್ನು ಗೇಣಿದಾರರಿಂದ ಪಡೆಯುತ್ತದೆ. ಜಮೀನುದಾರರು ಈ ಬಾಡಿಗೆಯ ಒಂದು ಭಾಗವನ್ನು ತಮ್ಮ, ತಮ್ಮ ಗೃಹ ಕೆಲಸಗಾರರ, ನಾಗರಿಕ ಸೇವಾ ನೌಕರರ ಮತ್ತು ಸೈನ್ಯದ ಜೀವನಾಧಾರಕ್ಕೆ ಬೇಕಾಗಿರುವುದನ್ನು ಕೊಳ್ಳಲು ಬಳಸುತ್ತಾರೆ ಮತ್ತು ಉಳಿದದ್ದನ್ನು ಕೈಗಾರಿಕಾ ಉತ್ಪನ್ನಗಳನ್ನು (ವಿಲಾಸಿ ಗ್ರಾಹಕ ವಸ್ತುಗಳು, ಶಸ್ತ್ರಾಸ್ತ್ರಗಳು, ಕುದುರೆಗಾಡಿಗಳು ಇತ್ಯಾದಿ) ಕೊಳ್ಳಲು ಬಳಸುತ್ತಾರೆ. ಉತ್ಪನ್ನಗಳ ಬೆಲೆಗಳು ಎಲ್ಲಾ ವೆಚ್ಚಗಳನ್ನು ಸರಿದೂಗಿಸುತ್ತವೆ ಮತ್ತು ಕೃಷಿಯ ಉತ್ಪನ್ನಗಳ ಬೆಲೆಯಲ್ಲಿ ನೆಲದ ಬಾಡಿಗೆ ಅಥವಾ ಭೋಗ್ಯವು ಸೇರಿರುತ್ತದೆ.( ಕಿನೆ ಅವರ ಸಂರಚನೆಯಲ್ಲಿ ಲಾಭಗಳಿಗೆ ಯಾವುದೇ ಸ್ಪಷ್ಟ ಪಾತ್ರವಿಲ್ಲ; ಅವುಗಳನ್ನು ಗೇಣಿದಾರರ ಮತ್ತು ಸ್ವತಂತ್ರ ಕುಶಲಕರ್ಮಿಗಳ ಆದಾಯದಲ್ಲಿ ಸೇರಿಸಲಾಗಿರುತ್ತದೆ.) ಅದೇ ರೀತಿ, ಸಮಾಜದ ನಿವ್ವಳ ಆದಾಯವು ಜಮೀನುದಾರರಿಗೆ ನೀಡಲಾದ ಬಾಡಿಗೆಗಳ ಒಟ್ಟು ಮೊತ್ತಕ್ಕೆ ಸಮನಾಗಿರುತ್ತದೆ. ಕಿನೆ ಅವರ ಪ್ರಕಾರ ಬಾಡಿಗೆ ಒಂದಕ್ಕೆ ಮಾತ್ರವೇ ತೆರಿಗೆ ಹಾಕಬಹುದಾಗಿತ್ತು *(impôt unique (ಆಮ್ಪೊ ಯುನೀಕ್))*, ಏಕೆಂದರೆ ಇತರ ಎಲ್ಲಾ ಆದಾಯಗಳು ಅವುಗಳ ಸ್ವೀಕರ್ತರ ಜೀವನ ಅವಶ್ಯಕತೆಗಳಿಗಿಂತ ಸ್ವಲ್ಪ ಹೆಚ್ಚಿನದನ್ನು ಮಾತ್ರ ಸರಿದೂಗಿಸುವುದನ್ನು ಒಳಗೊಂಡಿರುತ್ತದೆ ಎಂಬ ಕಾರಣಕ್ಕೆ - ಈ ಪ್ರತಿಪಾದನೆಯು ನೈಸರ್ಗಿಕತಾವಾದಿಗಳಿಗೆ ರಾಜ ಮತ್ತು ಭೂಮಾಲೀಕರಿಂದ ಯಾವುದೇ ಮೆಚ್ಚುಗೆಯನ್ನು ದಕ್ಕಿಸಿಕೊಡಲಿಲ್ಲ.

**“ಅದೃಶ್ಯ ಹಸ್ತ” ದ ಕುರಿತು ಆಡಂ ಸ್ಮಿತ್**

*'ಆನ್ ಎನ್ಕ್ವೈರಿ ಇನ್ ಟು ದಿ ನೇಚರ್ ಅಂಡ್ ಕಾಸಸ್ ಆಫ್ ದಿ ವೆಲ್ತ್ ಆಫ್ ನೇಷನ್ಸ್ (An Inquiry into the Nature and Causes of the Wealth of Nations)'* (ಇನ್ನು ಮುಂದೆ ಇದನ್ನು ಚಿಕ್ಕದಾಗಿ ವೆಲ್ತ್ ಆಫ್ ನೇಷನ್ಸ್ ಎಂದು ಕರೆಯಲಾಗುತ್ತದೆ) ಎಂಬ ಗ್ರಂಥವನ್ನು ಮೊದಲಿಗೆ 1776 ರಲ್ಲಿ ಪ್ರಕಟಿಸುತ್ತಾ, ನಂತರ ಅದರ ನಾಲ್ಕು ಆವೃತ್ತಿಗಳನ್ನು ತರುವುದರೊಂದಿಗೆ ಸ್ಕಾಟ್ಲೆಂಡ್ ದೇಶದವರಾದ ಆಡಂ ಸ್ಮಿತ್ ರಾಜಕೀಯ ಅರ್ಥನೀತಿಯ ಹೊಸ ಕ್ಷೇತ್ರವನ್ನು ಶಾಶ್ವತವಾಗಿ ನೆಲೆನಿಲ್ಲುವಂತೆ, ವಿಷಯಾಧಾರಿತವಾಗಿಯೂ ಹಾಗೂ ವಿಧಾನಾತ್ಮಕವಾಗಿಯೂ, ರೂಪಿಸಿ ಗೌರವಾರ್ಹ ವಿಜ್ಞಾನಗಳ ವಲಯದಲ್ಲಿ ಅದಕ್ಕೊಂದು ಪ್ರಮುಖ ಸ್ಥಾನವನ್ನು ಗೆದ್ದು ಕೊಟ್ಟರು. ಅವರು ಬಳಸಿದ ಯಾವುದೇ ರೂಪಕವೂ ಸಹ ಅವರ "ಅದೃಶ್ಯ ಹಸ್ತ" ಎಂಬ ರೂಪಕದಷ್ಟು ಪ್ರಸಿದ್ಧವಾಗಿಲ್ಲ, ಮತ್ತು ಯಾವುದೂ ಸಹ ಆ ಮಟ್ಟಿಗೆ ಮೂಲಭೂತವಾಗಿ ಅಪಾರ್ಥಕ್ಕೆ ಒಳಪಟ್ಟಿಲ್ಲ.

ಅನೇಕರು ಯಾವುದೇ ರೀತಿಯ ಸ್ವಾರ್ಥ ತುಂಬಿದ ವರ್ತನೆಯು ನಿಸ್ಸಂದಿಗ್ಧವಾಗಿ ಇಡಿಯ ಸಮಾಜಕ್ಕೆ ಅನುದ್ದೇಶಿತ ಅನುಕೂಲಕರವಾದ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬ ಅತಿರೇಕದ ಅಭಿಪ್ರಾಯವನ್ನು ಸ್ಮಿತ್ ಗೆ ಆರೋಪಿಸಿರುತ್ತಾರೆ. ಈ ದೃಷ್ಟಿಕೋನದ ಪ್ರಕಾರ ಸಮಾಜಗಳು ಅತ್ಯುತ್ತಮ ಫಲಿತಾಂಶಗಳನ್ನು ಗಳಿಸಿಕೊಳ್ಳಲು ಸ್ವಾರ್ಥಪರತೆ ಮಾತ್ರವಷ್ಟೇ ಸಾಕು. ಆದರೆ ಈ ಅಭಿಪ್ರಾಯವನ್ನು ಸ್ಮಿತ್ ಹೊಂದಿರಲಿಲ್ಲ, ಬದಲಿಗೆ ವಿಡಂಬನಕಾರರೂ ಸಿನಿಕರೂ ಆಗಿದ್ದ ಬೆರ್ನಾರ್ಡ್ ಮ್ಯಾಂಡವಿಲ್ (Bernard Mandeville) (1670- 1733) ಈ ಸಿದ್ಧಾಂತವನ್ನು ತಮ್ಮ ಪ್ರಸಿದ್ಧವಾದ *'ಫೇಬಲ್ ಆಫ್ ದಿ ಬೀಸ್ (Fable of the Bees)'* (1705) ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದ್ದರು. ಸ್ಮಿತ್ ಹಾಗೂ ಅವರಿಗೆ ಮುಂಚೆ ಡೇವಿಡ್ ಹ್ಯೂಮ್ (David Hume) ಇಬ್ಬರೂ ಸಹ ಮ್ಯಾಂಡವಿಲ್ ಅವರೊಂದಿಗೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರು, ಮತ್ತು ಸ್ಮಿತ್ ತಮ್ಮ *'ಥಿಯರಿ ಆಫ್ ಮಾರಲ್ ಸೆಂಟಿಮೆಂಟ್ಸ್ (Theory of Moral Sentiments)'* (1759) ಎಂಬ ಪುಸ್ತಕದಲ್ಲಿ ಮ್ಯಾಂಡವಿಲ್‌ರ ಅಭಿಪ್ರಾಯಗಳು "ಹೆಚ್ಚು ಕಡಮೆ ಎಲ್ಲ ರೀತಿಯಲ್ಲೂ ದೋಷಪೂರಿತ" ಎಂದು ಹೇಳಿದ್ದರು. ಸಾಮುದಾಯಿಕ ಒಳಿತಿನ ಮೂಲವಿರುವುದು ಸನ್ನಡತೆಯಲ್ಲಿ ಅಲ್ಲ, ದುರ್ನಡತೆಯಲ್ಲಿ ಎಂಬುದು ಮ್ಯಾಂಡವಿಲ್‌ರ ವಾದವಾಗಿತ್ತು. ಹಾಗಾಗಿ ನೀತಿ ಮತ್ತು ನೈತಿಕತೆಯ ಮೂಲ ಹಾಗೂ ಅಭಿವೃದ್ಧಿಯ ಕುರಿತು ಶೋಧಿಸಿದ ಕರ್ತರಾಗಿ ಅಪಾರ ಮೆಚ್ಚುಗೆಯನ್ನು ಪಡೆದುಕೊಂಡ ಆಡಂ ಸ್ಮಿತ್ ಇಂತಹದೊಂದು ಅರ್ಥವಾಗದ ಕಲ್ಪನೆಯನ್ನು ಹೊಂದಿರುವುದು ಹೇಗೆ ಸಾಧ್ಯ? ವಾಣಿಜ್ಯ ವಾದವನ್ನು ಆಧರಿಸಿದ ಪದ್ಧತಿಯ ಕುರಿತಾದ ಸ್ಮಿತ್ ನ ಕಟುವಾದ ಟೀಕೆ ತೋರಿಸುವಂತೆ, ರಾಜಿಯಾಗಲು ಸಿದ್ಧವಿರದೆ ವಿರೋಧಿಸಿದಂತ ಅಭಿಪ್ರಾಯವನ್ನು ಅವರು ಹೊಂದಿದ್ದರು ಎಂದು ಇತರರು ಉದ್ದೇಶಪೂರ್ವಕವಾಗಿಯೊ ಅಥವಾ ಅಜ್ಞಾನದಿಂದಲೊ ವಾದಿಸಿದ್ದಾರೆ. ಅವರು ಈ ಪದ್ಧತಿಯ "ಪ್ರಮುಖ ರಚನಾಕಾರರನ್ನು" "ಏಕಸ್ವಾಮ್ಯದ ಹೇಯ ಚೇತನಕ್ಕೆ" ವಶವಾಗಿ, ಸಾಮಾನ್ಯ ಜನಸಮುದಾಯಕ್ಕೆ ಹಾನಿಯುಂಟಾದರೂ ವೈಯಕ್ತಿಕವಾಗಿ ಅನುಕೂಲತೆಗಳನ್ನು ಲಪಟಾಯಿಸಿಕೊಳ್ಳುವುದೇ ತಮ್ಮ ಮುಖ್ಯ ಗುರಿಯನ್ನಾಗಿ ಹೊಂದಿರುವಂತ ಹಣ ಮತ್ತು ಅಧಿಕಾರದಾಹಿ ವರ್ತಕರು ಎಂಬುದಾಗಿ ನೋಡಿದರು.

ಹಾಗಿದ್ದರೆ ಅದೃಶ್ಯ ಹಸ್ತದ ರೂಪಕವು ನಿಜವಾಗಿಯೂ ಏನನ್ನು ಸೂಚಿಸುತ್ತದೆ? ನಾವು *'ದಿ ವೆಲ್ತ್ ಆಫ್ ನೇಷನ್ಸ್'* ಪುಸ್ತಕದಲ್ಲಿ ವ್ಯಕ್ತಿಯ ಬಗ್ಗೆ ಹೀಗೆಂದು ಓದುತ್ತೇವೆ: "ತನ್ನ ಸ್ವಂತ ಹಿತಾಸಕ್ತಿಯನ್ನು ಅನುಸರಿಸುವ ಮೂಲಕ ಮನುಷ್ಯನು ಅನೇಕ ವೇಳೆ ತಾನು ವಾಸ್ತವದಲ್ಲಿ ಅದನ್ನು ಉತ್ತೇಜಿಸಬೇಕೆಂಬ ಉದ್ದೇಶವಿರುವ ಸಂದರ್ಭಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಸಮಾಜದ ಹಿತಾಸಕ್ತಿಯನ್ನು ಉತ್ತೇಜಿಸುತ್ತಾನೆ". ಇಲ್ಲಿ ಗಮನಿಸಬೇಕಾದ ವಿಷಯವೆಂದರೆ 'ಯಾವಾಗಲೂ ಅಲ್ಲ' ಎಂಬುದರ ಬದಲು 'ಅನೇಕ ವೇಳೆ' ಎಂಬ ಪದದ ಬಳಕೆ. ಸ್ವಾಹಿತಾಸಕ್ತಿಯು ಸಾಮಾನ್ಯ

ಹಿತಾಸಕ್ತಿಗೆ ಹಾನಿಕಾರಕವಾಗಿರುವುದರ ಬದಲು ಅದನ್ನು ಉತ್ತೇಜಿಸಬೇಕೆಂದರೆ ಅದು ಕೆಲವೊಂದು ಸಾಂಸ್ಥಿಕ ಪೂರ್ವ ಷರತ್ತುಗಳನ್ನು ಪೂರೈಸಬೇಕಾಗುತ್ತದೆ ಎಂದು ಸ್ಮಿತ್ ಒತ್ತಿ ಹೇಳಿದರು. ಸ್ಮಿತ್ ಕುರಿತಾದ ವಿದ್ವಾಂಸರಾದ ಎಡ್ವಿನ್ ಕ್ಯಾನನ್ (Edwin Cannan) ಬರೆದಂತೆ: "ಸ್ವಹಿತಾಸಕ್ತಿಯು ಸಾಮಾನ್ಯವಾಗಿ ಲಾಭದಾಯಕ ರೀತಿಯಲ್ಲಿ ಕೆಲಸ ಮಾಡುತ್ತದೆ, ಮತ್ತು ಅದು ಪ್ರತಿ ಒಬ್ಬರ ಸ್ವಾರ್ಥ ಮತ್ತು ಎಲ್ಲರ ಒಳಿತಿನ ನಡುವೆ ಕಾಕತಾಳಿಯವಾಗಿ ಏನೋ ಒಂದು ಸಹಜ ಸಂಗತಿ ಸಂಭವಿಸಿದ ಕಾರಣದಿಂದಲ್ಲ, ಬದಲಿಗೆ, '*ಮಾನವ ಸಂಸ್ಥೆಗಳನ್ನು ಅವು ಸ್ವಹಿತಾಸಕ್ತಿಯು ಎಲ್ಲರಿಗೂ ಲಾಭದಾಯಕವಾಗುವಂತಹ ದಿಕ್ಕಿನಲ್ಲಿ ಕೆಲಸ ಮಾಡುವಂತೆ ಒತ್ತಾಯ ಮಾಡುವ ರೀತಿಯಲ್ಲಿ ವ್ಯವಸ್ಥಿತಗೊಳಿಸಲಾಗಿದೆ ಎಂಬ ಕಾರಣಕ್ಕೆ (ಹೇಳಿಕೆಗೆ ವಿಶೇಷ ಒತ್ತನ್ನು ನಾವೇ ನೀಡಿದ್ದೇವೆ)*'. ದುರ್ಜನರ ಸ್ವಂತ ಹಿತಾಸಕ್ತಿಯು ಕೂಡ ಎಲ್ಲರ ಒಳಿತಿಗಾಗಿ ಕೆಲಸ ಮಾಡುವಂತೆ ಸಂಸ್ಥೆಗಳನ್ನು ಮತ್ತು ಕಾನೂನುಗಳನ್ನು ರೂಪಿಸುವುದು ರಾಜನೀತಿಜ್ಞರ ಕಾರ್ಯವಾಗಿತ್ತು. ಶಾಸಕರ ವಿಜ್ಞಾನವು ಉತ್ತಮ ಸರ್ಕಾರಕ್ಕೆ ದಾರಿ ತೋರಿಸಿಕೊಡಲು ರಚಿತವಾಗಿತ್ತು ಎಂದು ಸ್ಮಿತ್ ವಿಶದೀಕರಿಸಿದರು.

## ಶ್ರಮ ವಿಭಜನೆಯ ಕುರಿತು ಆಡಂ ಸ್ಮಿತ್

ಆಡಂ ಸ್ಮಿತ್ ನ ಪ್ರಕಾರ, ಶ್ರಮದ ವಿಭಜನೆಯು ಶ್ರಮದ ಉತ್ಪಾದಕತೆ ಮತ್ತು ತಲಾವಾರು ಆದಾಯದ ಬೆಳವಣಿಗೆಗೆ ಅತ್ಯಂತ ಮುಖ್ಯ ಮೂಲವಾಗಿತ್ತು. ಆರಂಭದಲ್ಲಿ, ಅವರು ಉದ್ದಿಮೆಗಳಲ್ಲಿ ಮತ್ತು ನಂತರ ಉದ್ದಿಮೆಗಳ ನಡುವೆ ಹಾಗೂ ದತ್ತ ಒಂದು ದೇಶದಲ್ಲಿನ ಪ್ರಾಂತ್ಯಗಳಲ್ಲಿ, ಮತ್ತು ಅಂತಿಮವಾಗಿ ರಾಷ್ಟ್ರಗಳ ನಡುವೆ ಶ್ರಮ ವಿಭಜನೆ ಇದೆ ಎಂದು ವಾದಿಸಿದರು. ಸ್ಮಿತ್ ಮುಕ್ತ ವ್ಯಾಪಾರದ ಪರವಾಗಿ ಮತ್ತು ಇಂದು "ಜಾಗತೀಕರಣ" ಎಂದು ಕರೆಯಲಾಗುವುದರ ನಿರರ್ಗಳ ಪ್ರತಿಪಾದಕರಾಗಿದ್ದರು. ಆದರೆ ಅವರ ಪ್ರತಿಪಾದನೆಯು ಒಂದು ಮುಖ್ಯವಾದ ಷರತ್ತಿಗೆ ತಳಕುಹಾಕಿಕೊಂಡಿತ್ತು: ಮುಕ್ತ ವ್ಯಾಪಾರದ ಅನುಕೂಲತೆಗಳು ಒಳಗೊಂಡಿರುವ **ಎಲ್ಲ** ದೇಶಗಳಿಗೂ ಮತ್ತು ವ್ಯಕ್ತಿಗಳಿಗೂ ಲಾಭದಾಯಕವಾಗಿರಬೇಕು; ಇದು ಮತ್ತೊಮ್ಮೆ ಉತ್ತಮ ಸರ್ಕಾರವನ್ನು ಹೊಂದುವುದರ ಮಹತ್ವವನ್ನು ಸೂಚಿಸುತ್ತದೆ. (ನಾವು ಈ ವಿಷಯವನ್ನು ನಂತರ ಮತ್ತೊಮ್ಮೆ ಕೈಗೆತ್ತಿ ಕೊಳ್ಳೋಣ.)

ಶ್ರಮ ವಿಭಜನೆಯು (1) ವಿಶೇಷಜ್ಞತೆಯಿಂದ ಲಾಭಗಳನ್ನು ಗಳಿಸಿಕೊಡುತ್ತದೆ, (2) ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಹೊರಳುವಾಗ ನಷ್ಟವಾಗುವ ಸಮಯವನ್ನು ಉಳಿಸುತ್ತದೆ, ಮತ್ತು ಅತ್ಯಂತ ಮುಖ್ಯವಾಗಿ, (3) ಯಂತ್ರಗಳ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಶ್ರಮ ಶಕ್ತಿಯ ಬದಲು ಯಂತ್ರ ಶಕ್ತಿಯನ್ನು ಬಳಸಲಾಗುತ್ತದೆ ಮತ್ತು ಉತ್ಪಾದನೆಯು ಯಾಂತ್ರೀಕೃತಗೊಳ್ಳುತ್ತದೆ - ಈ ಪ್ರಕ್ರಿಯೆಗೆ ಕೊನೆಯೆಂಬುದೇ ಇಲ್ಲ.

ಹೊಸ ಕಸಬುಗಳು ಮತ್ತು ಉದ್ಯೋಗಗಳು ಹುಟ್ಟಿಕೊಳ್ಳುತ್ತವೆ: "ಇದರಲ್ಲಿ ತತ್ವಶಾಸ್ತ್ರಜ್ಞರು ಅಥವಾ ಸಿದ್ಧಾಂತಿಗಳು ಎಂದು ಕರೆಯಲಾಗುವವರು ಮಾಡುವಂತದನ್ನೂ ಸೇರಿದಂತೆ. ಇವರ ಕಸಬು ಎಲ್ಲವನ್ನೂ ಗಮನಿಸುವುದು ಆದರೆ ಏನೊಂದನ್ನೂ ಮಾಡದೆ ಇರುವುದಾಗಿರುತ್ತದೆ; ಮತ್ತು ಅವರು, ಆ ಆಧಾರದ ಮೇಲೆ, ಅನೇಕವೇಳೆ ಅತ್ಯಂತ ದೂರದಲ್ಲಿರುವ ಹಾಗೂ ಹೋಲಿಕೆಯಿಲ್ಲದಂತಹ ವಿಷಯಗಳ ಪ್ರಭಾವಿಸುವ ಶಕ್ತಿಗಳನ್ನು ಒಟ್ಟಿಗೆ ಸಂಯೋಜಿಸುವಂತಹ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಸಮಾಜದಲ್ಲಿ ಪ್ರಗತಿಯಾದಂತೆ ತತ್ವಶಾಸ್ತ್ರ ಅಥವಾ ಸಿದ್ಧಾಂತವು ಇತರ ಪ್ರತಿಯೊಂದು ಉದ್ಯೋಗದಂತೆ ಒಂದು ವಿಶಿಷ್ಟ ವರ್ಗದ ನಾಗರೀಕರ ಮುಖ್ಯ ಅಥವಾ ಏಕೈಕ ಕಸಬು ಮತ್ತು

ಉದ್ಯೋಗವಾಗುತ್ತದೆ”. ಇಂದಿನ ಕಾಲದಲ್ಲಿ ನಾವು ಇದನ್ನು ಸಂಶೋಧನೆ ಮತ್ತು ಅಭಿವೃದ್ಧಿ (R&D) ಎಂದು ಕರೆಯುತ್ತೇವೆ. ವ್ಯವಸ್ಥಿತವಾಗಿ ರೂಪಗೊಳ್ಳುವ ಈ ಹೊಸ ಜ್ಞಾನವು, ಉತ್ಪಾದನೆ ಮತ್ತು ವ್ಯವಸ್ಥೆಮಾಡುವುದರಲ್ಲಿ “ಸುಧಾರಣೆಗಳನ್ನು” ಸಾಧ್ಯವಾಗಿಸುತ್ತದೆ. “ಜ್ಞಾನದ ಸಮಾಜ” ಎಂಬ ಪರಿಕಲ್ಪನೆಯು ಹೊರಹೊಮ್ಮುವ ಎರಡು ಶತಮಾನಗಳಿಗಿಂತಲೂ ಮುಂಚೆಯೇ ಸ್ಮಿತ್ ಆಗಲೇ “ವಿಜ್ಞಾನದ ಪ್ರಮಾಣವನ್ನು” ಸಮಾಜದ ಉತ್ಪಾದಕ ಶಕ್ತಿಗಳ ಆಧಾರವೆಂದು ಸ್ಪಷ್ಟವಾಗಿ ಗುರುತಿಸಿದ್ದರು.

ಬಂಡವಾಳದ ಶೇಖರಣೆ ಸಂಪತ್ತನ್ನು ಉತ್ಪಾದಿಸುವ ಯಂತ್ರದ ಚಾಲಕ ಶಕ್ತಿ ಎಂದು ಸ್ಮಿತ್ ಒತ್ತಿ ಹೇಳಿದರು. ಅದು ಒಂದು “ಸಕಾರಾತ್ಮಕ ಫಲಿತಾಂಶಗಳ ಆವರ್ತಕ ಪ್ರಕ್ರಿಯೆ (virtuous circle)”ಗೆ ಚಾಲನೆ ಕೊಟ್ಟಿತು: ಮಾರುಕಟ್ಟೆಗಳನ್ನು ವಿಸ್ತರಿಸುವ ಮೂಲಕ ಬಂಡವಾಳ ಶೇಖರಣೆಯು ಹೆಚ್ಚಿನ ಮಟ್ಟದ ಶ್ರಮ ವಿಭಜನೆಗೆ ಅನುಕೂಲ ಮಾಡಿಕೊಟ್ಟಿತು, ಮತ್ತು ಅದು ಹೆಚ್ಚಿನ ಉತ್ಪಾದಕತೆಗೆ ದಾರಿ ಮಾಡಿಕೊಟ್ಟು ತತ್ಪರಿಣಾಮವಾಗಿ ಹೆಚ್ಚು ಸಾಮಾನ್ಯವಾಗಿ ಹೆಚ್ಚಿದ ಲಾಭಗಳು ಹಾಗೂ ಹೆಚ್ಚಿದ ಆದಾಯಗಳನ್ನು ಗಳಿಸಲು ಕಾರಣವಾಗಿ ಮತ್ತಷ್ಟು ಬಂಡವಾಳ ಶೇಖರಣೆಗೆ ಎಡೆ ಮಾಡಿಕೊಟ್ಟಿತು, ಮತ್ತು ಹೀಗೆಯೇ ಮುಂದುವರಿಯಿತು. ಸ್ಪಷ್ಟವಾಗಿ ಒಂದು ಸತತವಾದ ಮೇಲ್ಮುಖವಾಗಿ ಚಲಿಸುವ ಸುರುಳಿ ಇದೆ ಎಂಬ ಚಿತ್ರಣವು ಇದರಿಂದ ಹೊರಹೊಮ್ಮುತ್ತದೆ: ಬಂಡವಾಳ ಶೇಖರಣೆ ಮಾರುಕಟ್ಟೆ ವ್ಯವಸ್ಥೆಯು ಒಳಪಡುವಂತ ಸತತವಾದ ಪರಿವರ್ತನೆಯ ಮೂಲವೂ ಹೌದೂ ಪರಿಣಾಮವೂ ಹೌದೂ - ಬದಲಾವಣೆಯು ಮತ್ತಷ್ಟು ಬದಲಾವಣೆಗೆ ಇಂಧನವನ್ನು ಒದಗಿಸುವಂತ “ಸಂಚಯಿತ ಕಾರ್ಯಕಾರಣ” ದಿಂದ ಈ ಪ್ರಕ್ರಿಯೆಯು ನಿರೂಪಿಸಲ್ಪಟ್ಟಿದೆ ಎಂಬುದು.

ಆರ್ಥಿಕ ನೀತಿಯು ಒಂದು ಸಮಗ್ರವಾದ ಚೌಕಟ್ಟನ್ನು ಸ್ಥಾಪಿಸಬೇಕಾಗಿತ್ತು. ಏಕಸ್ವಾಮ್ಯಗಳು, ಆಮದು ನಿರ್ಬಂಧಗಳು, ಮತ್ತು ರಫ್ತು ಉತ್ತೇಜನಗಳು ಇದ್ದಂತಹ ವ್ಯಾಪಾರವಾದಿ ಪದ್ಧತಿಯು ಸಂಪನ್ಮೂಲಗಳ ತಪ್ಪಾದ ವಿನಿಯೋಗಕ್ಕೆ ಕಾರಣವಾಗಿ ಆರ್ಥಿಕ ಕ್ರಿಯಾಶಕ್ತಿಯನ್ನು ಕುಗ್ಗಿಸುತ್ತದೆ, ಮತ್ತು ಅನಪೇಕ್ಷಿತವಾದಂತಹ ವಿತರಣಾ ಪರಿಣಾಮಗಳಿಗೆ ಎಡೆಮಾಡಿಕೊಡುತ್ತದೆ ಎಂಬುದು ಸ್ಮಿತ್ ಗೆ ಮನದಟ್ಟಾಗಿತ್ತು. ಅದು ಉದಾರವಾದಿ ತತ್ವಗಳಾದ “ಸಮಾನತೆ (ಸಮಾನ ಹಕ್ಕುಗಳು ಎಂಬ ಅರ್ಥದಲ್ಲಿ), ಸ್ವಾತಂತ್ರ್ಯ ಮತ್ತು ನ್ಯಾಯ” ದ ವಿರುದ್ಧವಾಗಿತ್ತು. ಸ್ಮಿತ್ ವಿಶೇಷವಾಗಿ ವ್ಯಾಪಾರವಾದಿ ಪದ್ಧತಿ ನಗರಗಳಿಗೆ (ಮತ್ತು ತನ್ಮೂಲಕ ಕೈಗಾರಿಕೆಗಳಿಗೆ) ಹಾಗೂ ವಿದೇಶಿ ವ್ಯಾಪಾರಕ್ಕೆ ಉತ್ತೇಜನ ನೀಡುವುದರ ಕುರಿತು ಕಟು ಟೀಕಾಕಾರರಾಗಿದ್ದರು. ಇದು ಕೃಷಿಯು ಅಭಿವೃದ್ಧಿ ಹೊಂದುವ ಮೊದಲನೆಯ ಕ್ಷೇತ್ರ, ಆನಂತರ ಕೈಗಾರಿಕೆಗಳು ಮತ್ತು ನಗರಗಳು ದೇಶೀಯ ವ್ಯಾಪಾರದ ಜೊತೆಗೆ ಜೊತೆಗೆ ಬೆಳೆಯುವುದು, ಮತ್ತು ವಿದೇಶಿ ವಾಣಿಜ್ಯವು ಅಂತಿಮ ಹಂತದಲ್ಲಿ ಮಾತ್ರವೇ ಬೆಳೆಯುವುದು ಎಂಬ “ಸಹಜವಾದ ಬದಲಾವಣೆಯ ಕ್ರಮ” ದ ವಿರುದ್ಧವಾಗಿತ್ತು. ಕೃಷಿ ಅತ್ಯಂತ ಹೆಚ್ಚು ಹೆಚ್ಚುವರಿ ಮೌಲ್ಯವನ್ನು ಹೊಂದಿರುವಂತಹ ಕ್ಷೇತ್ರವೆಂದು ಹೇಳಲಾಗುತ್ತದೆ, ಏಕೆಂದರೆ ಈ ಕ್ಷೇತ್ರದಲ್ಲಿ “ಪ್ರಕೃತಿಯು ಮನುಷ್ಯನ ಜೊತೆಗೆ ದುಡಿಯುತ್ತದೆ” ಮತ್ತು ಅದಕ್ಕೆ ಯಾವುದೇ “ವೆಚ್ಚ ತಗಲುವುದಿಲ್ಲ” ಎಂಬ ಕಾರಣಕ್ಕೆ. ಈ ನೈಸರ್ಗಿಕತಾವಾದ ಪ್ರಭುತ್ವ ಕಲ್ಪನೆಯು ನಂತರದ ದಿನಗಳಲ್ಲಿ ರಿಕಾರ್ಡೋ ಮನದಟ್ಟುಮಾಡುವಂತಹ ಟೀಕೆಗೆ ಒಳಪಡುವುದು. ಆದರೆ ಸ್ಮಿತ್ ರ ಪ್ರಕಾರ, ವಿದೇಶಿ ವ್ಯಾಪಾರವು ಅತಿ ಹೆಚ್ಚು ಲಾಭಕ್ಕೆ ಅವಕಾಶಗಳನ್ನು ಒದಗಿಸಿದರೂ ಸಹ ಬಂಡವಾಳದ ಹೂಡಿಕೆಗೆ ಹೆಚ್ಚು ಅಪಾಯವನ್ನು ಹಾಗೂ ಅತಿ ಹೆಚ್ಚಿನ ಅಭದ್ರತೆಯನ್ನು ಒಡ್ಡುವಂತದ್ದಾಗಿತ್ತು. ಆದ್ದರಿಂದ ಅಪಾಯವನ್ನು ಇಷ್ಟಪಡದ ಬಂಡವಾಳ ಹೊಂದಿದವರು ದೇಶದೊಳಗೆ ಹೂಡಿಕೆಯನ್ನು ಮಾಡಲು ಇಷ್ಟಪಟ್ಟನು ಮತ್ತು, ಅಲ್ಲಿ ತನ್ನ ಸ್ವಂತ ಅನುಕೂಲತೆಯನ್ನು (ಲಾಭವನ್ನು) ದಕ್ಕಿಸಿಕೊಳ್ಳುವ

ಪ್ರಯತ್ನದಲ್ಲಿ ಹೆಚ್ಚು ದೇಶೀಯ ಉದ್ಯೋಗಾವಕಾಶವನ್ನು ಮತ್ತು ಆದಾಯವನ್ನು ಒದಗಿಸಿದ್ದನು. "ಆತನು... ಅದೃಶ್ಯ ಹಸ್ತವೊಂದರಿಂದ ಆತನ ಉದ್ದೇಶದ ಭಾಗವಾಗಿರದೆ ಇದ್ದಂತಹ ಗುರಿಯೊಂದನ್ನು ಉತ್ತೇಜಿಸುವಂತೆ ಮುನ್ನಡೆಸಲ್ಪಡುತ್ತಾನೆ."

### ಕೂಲಿ, ಲಾಭ ಮತ್ತು ಬಾಡಿಗೆಯ ಕುರಿತು ಆಡಂ ಸ್ಮಿತ್

ಆದಾಯದ ವಿತರಣೆಗೆ ಸಂಬಂಧಿಸಿದಂತೆ ಆಡಂ ಸ್ಮಿತ್ ಹಿತಾಸಕ್ತಿಗಳು ಪರಸ್ಪರ ಸಂಘರ್ಷದಲ್ಲಿ ಇರುವುದನ್ನು ಮತ್ತು ಅಸಮಾನದ ಚೌಕಾಸಿ ಮಾಡುವ ಶಕ್ತಿಯು ಅಸ್ತಿತ್ವದಲ್ಲಿರುವುದನ್ನು ಕಂಡರು. "ಕಾರ್ಮಿಕರು ಸಾಧ್ಯವಾದಷ್ಟೂ ಹೆಚ್ಚು ಗಳಿಸಿಕೊಳ್ಳಲು ಮತ್ತು ಮಾಲೀಕರು ಸಾಧ್ಯವಾದಷ್ಟೂ ಕಡಮೆ ನೀಡಲು ಬಯಸುತ್ತಾರೆ" ಎಂದರು. ಅವರು ಕಾರ್ಮಿಕರು ಹೊಂದಿರುವ ಮೂರು ರೀತಿಯ ಅನಾನುಕೂಲತೆಗಳನ್ನು ಹೆಸರಿಸಿದರು: ಅವರ ಹೆಚ್ಚಿನ ಸಂಖ್ಯೆ ಅವರ ಹಿತಾಸಕ್ತಿಗಳನ್ನು ಸಂಘಟಿಸಿಕೊಳ್ಳಲು ಕಷ್ಟಸಾಧ್ಯವಾಗಿಸುತ್ತದೆ; ಅವರಿಗೆ ಸಂಘಟಿಸಿಕೊಳ್ಳಲು ಮತ್ತು ಮುಷ್ಕರ ಹೂಡಲು ಕಾನೂನು ಅನುಮತಿಸುವುದಿಲ್ಲ; ಮತ್ತು ಸಂಪನ್ಮೂಲಗಳ ಕೊರತೆಯ ಕಾರಣ ಅವರಿಗೆ ಯಾವುದೇ ಕಾರ್ಮಿಕ ವಿವಾದವು ಹುಟ್ಟಿಕೊಂಡಾಗ ದೀರ್ಘಕಾಲ ಹೋರಾಟವನ್ನು ಮುಂದುವರೆಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಕಾರ್ಮಿಕರಿಗೆ ಸರಳವಾದ ಕೆಲಸಕ್ಕೆ ಸಿಗುತ್ತಿದ್ದ ಕೂಲಿಯು ಕೇವಲ ಅವರು ಹಾಗೂ ಅವರ ಕುಟುಂಬಗಳು ಬದುಕುಳಿಯಲು ಮತ್ತು ಮುಂದಿನ ತಲೆಮಾರಿಗೆ ಜನ್ಮ ಕೊಡಲು ಮಾತ್ರವೇ ಸಾಧ್ಯವಾಗುವಂತ ಮಟ್ಟವನ್ನು ತಲುಪುವ ಪ್ರವೃತ್ತಿಯನ್ನು ಹೊಂದಿತ್ತು. ಬಂಡವಾಳವು ವೇಗವಾಗಿ ಶೇಖರಣೆಯಾದರೆ ಮತ್ತು ಶ್ರಮದ ಬೇಡಿಕೆಯು ಅದರ ಪೂರೈಕೆಗಿಂತ ವೇಗವಾಗಿ ಹೆಚ್ಚಾದಾಗ ಮಾತ್ರ ಉದ್ಯೋಗದಾತರು ಕೂಲಿಗಳನ್ನು ಹೆಚ್ಚಿಸುವುದಿಲ್ಲ ಎಂಬ ತಮ್ಮ ಒಪ್ಪಂದವನ್ನು ಮುರಿಯುವರು. ಸ್ಮಿತ್ ರ ಪ್ರಕಾರ, "ಯಾವುದೇ ಸಮಾಜದಲ್ಲಿನ ಅತಿ ದೊಡ್ಡ ಸಂಖ್ಯೆಯು ಬಡವರಾಗಿದ್ದಲ್ಲಿ ಮತ್ತು ಸಂಕಟದಲ್ಲಿದ್ದಲ್ಲಿ ಆ ಸಮಾಜವು ಖಂಡಿತವಾಗಿಯೂ ಸಮೃದ್ಧವಾಗಿಯೂ ಸಂತೋಷವಾಗಿಯೂ ಇರಲು ಸಾಧ್ಯವಿಲ್ಲವಾದುದರಿಂದ" ಅವರು ಈ ವೇಗವಾದ ಬಂಡವಾಳ ಶೇಖರಣೆಯ ಕುರಿತು ಆಸಕ್ತಿಯನ್ನು ಹೊಂದಿದ್ದರು: ಅದು "ದುಡಿಯುವ ಬಡವರ" ಸ್ಥಿತಿಯನ್ನು ಉತ್ತಮಪಡಿಸುತ್ತದೆ, ಬಹು ಸಂಖ್ಯೆಯ ಜನರ ಸಂತೋಷವನ್ನು ಹೆಚ್ಚಿಸುತ್ತದೆ ಎಂಬ ಕಾರಣಕ್ಕೆ. ಖಚಿತವಾಗಿ ಹೇಳುವುದಾದರೆ, ಹೆಚ್ಚಿದ ಕೂಲಿಯು ಉತ್ತಮ ಆಹಾರ, ಕಡಮೆ ಮರಣ ಪ್ರಮಾಣ ಮತ್ತು ಹೆಚ್ಚುತ್ತಾ ಹೋಗುವ ಜನನ ಪ್ರಮಾಣಗಳಿಗೆ ಕಾರಣವಾಗಿ ವೇಗವರ್ಧಿತ ಜನಸಂಖ್ಯೆಯ ಬೆಳವಣಿಗೆಯಲ್ಲಿ ಪರಿಣಮಿಸುತ್ತದೆ ಮತ್ತು ಅದರಿಂದಾಗಿ ಮತ್ತೊಮ್ಮೆ ಕೂಲಿಗಳು ಕೆಳಗಿನ ಮಟ್ಟಕ್ಕೆ ಬರುತ್ತವೆ. ಈ ಅವಲೋಕನಗಳನ್ನು ವ್ಯಕ್ತಪಡಿಸುವುದರೊಂದಿಗೆ ಸ್ಮಿತ್ ಅವರು ಥಾಮಸ್ ರಾಬರ್ಟ್ ಮಾಲ್ತಸ್ Thomas Robert Malthus (1766–1834) ಅವರು 1798ರಲ್ಲಿ ಪ್ರಕಟಿಸಿದ *'ಆನ್ ಎಸ್ಸೇ ಆನ್ ದಿ ಪ್ರಿನ್ಸಿಪಲ್ ಆಫ್ ಪಾಪ್ಯುಲೇಷನ್ (An Essay on the Principle of Population)'* ನಲ್ಲಿನ ಜನಸಂಖ್ಯಾ ಸಿದ್ಧಾಂತದ ಅಂಶವೊಂದನ್ನು ಪೂರ್ವಭಾವಿಯಾಗಿಯೇ ನಿರೀಕ್ಷಿಸಿದ್ದರು. ಆದಾಗ್ಯೂ, ಮಾಲ್ತಸ್ "ಜನಸಂಖ್ಯೆಯ ಶಕ್ತಿಯು ಮನುಷ್ಯನಿಗೆ ಬೇಕಾದ ಜೀವನಾಧಾರವನ್ನು ಉತ್ಪಾದಿಸುವಲ್ಲಿ ಭೂಮಿಯು ಹೊಂದಿರುವ ಶಕ್ತಿಗಿಂತ ನಿರ್ಣಯಿಸಲಾಗದಷ್ಟು ಹೆಚ್ಚು ಇದೆ" ಮತ್ತು ಆ ಕಾರಣ ಕ್ಷಾಮ ಡಾಮರಗಳಿಂದ ಜನಸಂಖ್ಯೆಯು ನಿಯಂತ್ರಿಸಲ್ಪಡುವ ಅಪಾಯದಲ್ಲಿದೆ" ಎಂಬುದರಲ್ಲಿ ದೃಢನಂಬಿಕೆ ಹೊಂದಿದ್ದರೆ, ಸ್ಮಿತ್ ಅವರು ಆರ್ಥಿಕ ಬೆಳವಣಿಗೆಯ ಕುರಿತು ನಿರಾಶಾವಾದಿಯಾಗಿರಲಿಲ್ಲ. ಸ್ಮಿತ್ ಕಲ್ಪಿಸಿಕೊಂಡ ಆರ್ಥಿಕ ವ್ಯವಸ್ಥೆಯು ಒಳಗಿನಿಂದಲೇ (ಅಂತರ್ವರ್ಧಕವಾಗಿ) ಬಂಡವಾಳ ಶೇಖರಣೆಗೆ ಅಗತ್ಯವಾದ ದುಡಿಯುವ ಜನತೆಯನ್ನು ಹುಟ್ಟುಹಾಕಲು ಶಕ್ತವಾಗಿತ್ತು. ಅವರ ಅಭಿಪ್ರಾಯದಲ್ಲಿ ಒಂದೆಡೆ ಜನಸಂಖ್ಯೆಯ ಹೆಚ್ಚಳ ಮತ್ತು

ಮತ್ತೊಂದೆಡೆ ಆಹಾರ ಒದಗಣೆ ಇವುಗಳ ನಡುವೆ, ಮುಂದೆ ಮಾಲ್ತಸ್ ವಾದ ಮಾಡಲಿರುವಂತೆ, ಯಾವುದೇ ಶಾಶ್ವತವಾದ ಅಂತರವಿರಲಿಲ್ಲ.

ಸ್ಮಿತ್ ರ ಪ್ರಕಾರ ಲಾಭಗಳು (ಮತ್ತು ಬಾಡಿಗೆಗಳು) "ವಿಶಿಷ್ಟ ರೀತಿಯ ಶ್ರಮದ, ಪರಿಶೀಲನೆ ಮತ್ತು ನಿರ್ದೇಶನದ ಶ್ರಮದ ಕೂಲಿ" ಆಗಿರಲಿಲ್ಲ, ಬದಲಿಗೆ ಅವು ಕೇವಲ ಆಸ್ತಿ ಆದಾಯಗಳಾಗಿದ್ದವು ಅಷ್ಟೆ. ಒಂದು ಸ್ಪರ್ಧಾತ್ಮಕ ಅರ್ಥವ್ಯವಸ್ಥೆಯಲ್ಲಿನ ಏಕರೂಪ ಲಾಭ ದರದ ಆಧಾರದ ಮೇಲೆ ಒಬ್ಬ ಬಂಡವಾಳ ಹೊಂದಿದವನು ಶೇರುದಾರನೊಬ್ಬನು ವಿತರಣೆಯಾದ ಲಾಭಾಂಶಗಳಲ್ಲಿ ಭಾಗವನ್ನು ತೆಗೆದುಕೊಳ್ಳುವಂತೆಯೇ ಲಾಭದಲ್ಲಿ ತನ್ನ ಪಾಲನ್ನು ತೆಗೆದುಕೊಳ್ಳುತ್ತಾನೆ - ಪ್ರತಿಯೊಬ್ಬನೂ ತಾನು ಹೂಡಿರುವ ಬಂಡವಾಳದ ಗಾತ್ರಕ್ಕೆ ಅನುಗುಣವಾಗಿ ಪಾಲನ್ನು ಪಡೆಯುತ್ತಾನೆ. ದೀರ್ಘಾವಧಿಯಲ್ಲಿ ಲಾಭಗಳ ಸಾಮಾನ್ಯ ದರವು ಕುಸಿಯುವ ಪ್ರವೃತ್ತಿಯನ್ನು ಹೊಂದಿರುತ್ತದೆ ಎಂದು ಸ್ಮಿತ ನಂಬಿದ್ದರು. ಆದಾಗ್ಯೂ, ಅವರ ಕಾರಣವಾದವು ಸಮರ್ಥನೀಯವಲ್ಲ. ಅರ್ಥವ್ಯವಸ್ಥೆಯಲ್ಲಿ ಒಂದು ಏಕೈಕ ಕ್ಷೇತ್ರಕ್ಕೆ ಅನ್ವಯವಾಗುವಂತ ಅವಲೋಕನವೊಂದನ್ನು ಇಡೀ ಅರ್ಥವ್ಯವಸ್ಥೆಗೆ ಸಾಮಾನ್ಯೀಕರಿಸುವ ಮೂಲಕ ಅವರು ತಪ್ಪಾದ ತೀರ್ಮಾನಕ್ಕೆ ಬಂದಿದ್ದರು. ಬಂಡವಾಳವು ಅರ್ಥವ್ಯವಸ್ಥೆಯ ಒಂದು ಕ್ಷೇತ್ರದಿಂದ ಬಂಡವಾಳಕ್ಕೆ ಹೆಚ್ಚಿನ ಪ್ರತಿಫಲವನ್ನು ಅಪೇಕ್ಷಿಸಿ ಇನ್ನೊಂದು ವಲಯಕ್ಕೆ ಹರಿದು ಹೋದರೆ ಆಗ ಮೊದಲನೆಯ ಕ್ಷೇತ್ರದಲ್ಲಿನ ಉತ್ಪಾದನೆಯು ಕಡಮೆಯಾಗುತ್ತದೆ ಮತ್ತು ಎರಡನೆಯದರಲ್ಲಿ ಹೆಚ್ಚಾಗುತ್ತದೆ. ಅನುರೂಪವಾಗಿ, ಆದರೆ ವಿರುದ್ಧವಾಗಿ, ಮೊದಲನೆಯ ಕ್ಷೇತ್ರದಲ್ಲಿ ಬೆಲೆಗಳು ಹೆಚ್ಚಿದರೆ ಎರಡನೆಯ ಕ್ಷೇತ್ರದಲ್ಲಿ ಅವು ಕಡಮೆಯಾಗುತ್ತವೆ. ಯಾವ ಕ್ಷೇತ್ರಕ್ಕೆ ಬಂಡವಾಳವು ಹರಿದು ಹೋಗುತ್ತದೋ ಅಲ್ಲಿ ಲಾಭದಾಯಕತೆಯು ಕುಸಿಯುವ ಬೆಲೆಗಳ ಕಾರಣ ಕುಸಿಯುತ್ತದೆ. ಒಟ್ಟಾರೆ ವ್ಯವಸ್ಥೆಯಲ್ಲಿನ ಬಂಡವಾಳವು ಹೆಚ್ಚಾದಾಗ ಅದು "ಸ್ಪರ್ಧೆಯನ್ನು ತೀವ್ರಗೊಳಿಸುತ್ತದೆ" ಮತ್ತು ಹೀಗೆ ಲಾಭದ ದರವನ್ನು ಕೆಳಗಿಳಿಸುತ್ತದೆ ಎಂದು ಸ್ಮಿತ್ ವಾದಿಸುವಾಗ ಅವರು ಈ ಎರಡನೆಯ ಸನ್ನಿವೇಶವನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದರು ಎಂದನಿಸುತ್ತದೆ. ಆದರೆ ಮೊದಲು, ಅವರು ಈಗಾಗಲೇ ಮುಕ್ತ ಪೈಪೋಟಿಯ ಇರುವಿಕೆಯನ್ನು ದತ್ತವೆಂಬುದಾಗಿ ತೆಗೆದುಕೊಂಡಿದ್ದರಿಂದ, ಸ್ಪರ್ಧೆಯು ತೀವ್ರಗೊಳ್ಳುವ ಸಾಧ್ಯತೆಯೇ ಇಲ್ಲ. ಮತ್ತು ಎರಡನೆಯದಾಗಿ, ಎರಡನೆಯ ಕ್ಷೇತ್ರದಲ್ಲಿ ಲಾಭದ ದರವು ಕುಸಿಯುವ ಪ್ರವೃತ್ತಿಯನ್ನು ಹೊಂದಿದ್ದರೆ ಮೊದಲನೆಯ ಕ್ಷೇತ್ರದಲ್ಲಿನ ಲಾಭದ ದರವು ಹೆಚ್ಚುವ ಪ್ರವೃತ್ತಿಯನ್ನು ಹೊಂದಿರುತ್ತದೆ. ಹೀಗಾಗಿ ವ್ಯವಸ್ಥೆಯೊಳಗಿನ ಒಟ್ಟಾರೆ ಲಾಭದ ದರವು ಬಹುಮಟ್ಟಿಗೆ ಸ್ಥಿರವಾಗಿರುತ್ತದೆ. ಅಂದರೆ ಬಂಡವಾಳದ ಶೇಖರಣೆಯು ಸಾಮಾನ್ಯ ಲಾಭಗಳ ದರದಲ್ಲಿನ ಕುಸಿತಕ್ಕೆ ಕಾರಣವಾಗಲು ಮಾತ್ರ ಸಾಧ್ಯ; ಯಾವಾಗೆಂದರೆ, ಒಂದೋ ಎಲ್ಲಾ ಅಂಶಗಳು ಸಮಾನವಾಗಿದ್ದು ನೈಜ ಕೂಲಿ ದರವು ಹೆಚ್ಚಾದಾಗ, ಇಲ್ಲವೇ ನೈಜ ಕೂಲಿಯ ದರವು ದತ್ತವಾಗಿದ್ದು ಕಡಮೆ ಪ್ರಮಾಣದಲ್ಲಿ ಫಲವತ್ತಾದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕಾದಾಗ ಸಂದರ್ಭದಲ್ಲಿ ಸಂಭವಿಸುತ್ತದೆ ಎಂದರ್ಥ. ಸ್ಮಿತ್ ರ ಲಾಭ ದರಗಳ ಕುಸಿಯುವಿಕೆಯ ಕುರಿತಾದ ತಪ್ಪಾದ ಸಿದ್ಧಾಂತವನ್ನು ಟೀಕಿಸಿ ಸರಿಪಡಿಸಿದವರು ರಿಕಾರ್ಡೋ.

ಸ್ಮಿತ್ ಕೂಲಿ ಮತ್ತು ಲಾಭ ದರದಲ್ಲಿನ ವ್ಯತ್ಯಾಸಗಳ ಕುರಿತಾದ ಅತ್ಯಂತ ಆಸಕ್ತಿದಾಯಕ ಸಿದ್ಧಾಂತ ಒಂದನ್ನು ರೂಪಿಸಿದರು. ಒಂದು ಉದ್ಯಮದ ಅನುಕೂಲಕರವಾದ ಅಥವಾ ಅನಾನುಕೂಲಕರವಾದ ಅಂಶಗಳನ್ನು ಬಳಸಿಕೊಂಡು - ಸ್ಮಿತ್ ಅಪರಾಧಿಯನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸುವಂತ ವ್ಯಕ್ತಿಯ ಅತಿರೇಕದ ಉದಾಹರಣೆಯೊಂದನ್ನು ಉಲ್ಲೇಖಿಸುತ್ತಾರೆ – ಅಥವಾ ಒಂದು ವೃತ್ತಿಯನ್ನು ಕಲಿಯುವಲ್ಲಿ ಅಂತರ್ನಿಹಿತವಾಗಿರುವ ಅಪಾಯಗಳನ್ನು ಹಾಗೂ ವೆಚ್ಚ(ಮಾನವ ಬಂಡವಾಳ)ವನ್ನು ಉಲ್ಲೇಖಿಸುತ್ತಾ ಅವರು ವಿವಿಧ ಉದ್ದಿಮೆಗಳ ನಡುವಿನ ಕೂಲಿಗಳಲ್ಲಿನ ಹಾಗೂ ಲಾಭದ

ದರಗಳಲ್ಲಿನ ವ್ಯತ್ಯಾಸಗಳ ಹಿಂದಿರುವ ಕಾರಣವನ್ನು ವಿವರಿಸಲು ಪ್ರಯತ್ನಿಸಿದರು. ಈ ದೃಷ್ಟಿಕೋನದ ಪ್ರಕಾರ, ಕಾರ್ಮಿಕನ(ಳ) ಉತ್ಪಾದಕತೆಯು ಕೂಲಿ ನಿರ್ಣಯದಲ್ಲಿ ಹಲವು ಅಂಶಗಳಲ್ಲಿ ಕೇವಲ ಒಂದು ಮಾತ್ರವಷ್ಟೇ. ಹಾಗಾಗಿ, ಉದಾಹರಣೆಗೆ, ಸಾರ್ವಜನಿಕ ಗಲ್ಲಿಗೇರಿಸುವವನಿಗೆ ವಿರಳವಾಗಿ ಮಾತ್ರ ಕೆಲಸವಿರುವುದರಿಂದ ಆತನ ಗಳಿಕೆಯು ಅಸಾಧಾರಣವಾಗಿ ಹೆಚ್ಚಿರುತ್ತದೆ; ಆತನ ಕೆಲಸದಲ್ಲಿನ ಅನಾನುಕೂಲತೆಗಳು, ಆತನು ಅನುಭವಿಸುವ ಸಮುದಾಯದ ತಿರಸ್ಕಾರ ಮುಂತಾದಂತಹ ವಿಷಯಗಳು ಅವನಿಗೆ ಹೆಚ್ಚಿನ ಪರಿಹಾರ ಲಭ್ಯವಾಗುವುದನ್ನು ಸಾಧ್ಯಗೊಳಿಸುತ್ತದೆ. ಸ್ಮಿತ್ ಹಲವಾರು ವೃತ್ತಿಗಳಲ್ಲಿನ (ಉದಾಹರಣೆಗೆ, ವಕೀಲರು ಮತ್ತು ವೈದ್ಯರು) ಆದಾಯಗಳನ್ನು ಲಾಟರಿಗಳಿಗೆ ಹೋಲಿಸುತ್ತಾರೆ: ಗೆದ್ದವನಿಗೆ ಹೆಚ್ಚು ಸೋತವನಿಗೆ ಕೇವಲ ಸ್ವಲ್ಪವಷ್ಟೇ. ಅವರು "ಕಾರ್ಯಪಟುತ್ವದ ವೇತನ"ಗಳ ಮೂಲಭೂತ ಪರಿಕಲ್ಪನೆಯನ್ನು ಪೂರ್ವಭಾವಿಯಾಗಿ ನಿರೀಕ್ಷಿಸಿದರು (ನೋಡಿ ಅಧ್ಯಾಯ 10): ಅಸಹಜವಾಗಿ ಹೆಚ್ಚಿರುವ ವೇತನಗಳು ಉದ್ಯೋಗಸ್ಥರು ತಮ್ಮ ಜವಾಬ್ದಾರಿಗಳನ್ನು ಕೊಡವಿಕೊಳ್ಳುವುದನ್ನು ಅಥವಾ ಉತ್ಪಾದನಾ ಪ್ರಕ್ರಿಯೆಯನ್ನೇ ಹಾಳುಗೆಡುವುದನ್ನು ತಪ್ಪಿಸಬೇಕು, ಏಕೆಂದರೆ ಕೆಲಸವನ್ನು ಕಳೆದುಕೊಳ್ಳುವುದು ಅವರ ಪಾಲಿಗೆ ಬಹಳ ದುಬಾರಿಯಾಗುತ್ತದೆ.

ಸ್ಮಿತ್ ಲಾಭ (ಮತ್ತು ಬಡ್ಡಿಯನ್ನು) ವನ್ನು ಶ್ರಮದ ಉತ್ಪನ್ನದಿಂದ ಮಾಡುವ "ಕಡಿತ" ಎಂದು ಕರೆಯುತ್ತಾರೆ. ಇದು ಬಡ್ಡಿಯ ಕುರಿತು ಅರಿಸ್ಟಾಟಲ್ ಗೆ ಇದ್ದಂತಹ ತಿರಸ್ಕಾರವನ್ನು ಸ್ವಲ್ಪ ಮಟ್ಟಿಗೆ ಪ್ರತಿಧ್ವನಿಸುತ್ತದೆ. ಆದರೆ ನೀತಿ ತತ್ವಶಾಸ್ತ್ರದಲ್ಲಿನ ದೀರ್ಘಕಾಲೀನ ಸಂಪ್ರದಾಯಕ್ಕಿಂತ ಭಿನ್ನವಾಗಿ ಸ್ಮಿತ್ ಲಾಭ (ಮತ್ತು ಬಡ್ಡಿಯನ್ನು) ವನ್ನು ಸಾಮಾಜಿಕವಾಗಿ ಅಂಗೀಕಾರಾರ್ಹ ಎಂಬುದಾಗಿ ನೋಡಿದರು - ಮತ್ತು ಲಾಭದ ನೈತಿಕತೆಯ ಸ್ಥಾನಮಾನದ ಈ ಮರುವ್ಯಾಖ್ಯಾನವು ಪ್ರಾಯಶಃ ಊಳಿಗಮಾನ್ಯೋತ್ತರ ಬಂಡವಾಳಶಾಹಿ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಪರವಾಗಿರುವ ಸ್ಮಿತ್ ರ ಅತಿ ಮಹತ್ವದ ಸಾಧನೆಯನ್ನು ಪ್ರತಿನಿಧಿಸುತ್ತದೆ. ಉದಯೋನ್ಮುಖವಾಗುತ್ತಿದ್ದ ಬಂಡವಾಳಶಾಹಿ ವರ್ಗವು ಅಹಂಕಾರಿ ಮತ್ತು ದುರಾಸೆಯುಳ್ಳದ್ದಾಗಿತ್ತು ಎಂಬುದು ನಿಜವೇ ಆಗಿತ್ತು. ಆ ಮಟ್ಟಿಗೆ ಹಳೆಯ ನೈತಿಕ ಅಭಿಪ್ರಾಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಅದಷ್ಟೇ ಸಾಲದು ಎಂದು ಸ್ಮಿತ್ ವಾದಿಸಿದರು. ಜನರನ್ನು ಅವರ ಉದ್ದೇಶಗಳು ಅಲ್ಲದೆ ಸಮಾಜ (ಉತ್ತಮ-ಆಳ್ವಿಕೆಯ!)ವೊಂದರಲ್ಲಿ ಅವರು ತರಬಹುದಾದ ಬದಲಾವಣೆಗಳ ಆಧಾರದ ಮೇಲೆ ಅವರ ಬಗ್ಗೆ ಒಂದು ನಿರ್ಣಯಕ್ಕೆ ಬಂದಲ್ಲಿ ನಮಗೆ ಕಾಣಸಿಗುವ ಚಿತ್ರಣವು ವಿಭಿನ್ನವೇ ಆಗಿರುತ್ತದೆ. ಸೂಕ್ತವಾದಂತಹ ಸಂಸ್ಥೆಗಳು ಮತ್ತು ನೀತಿಗಳಿದ್ದಲ್ಲಿ, ಸ್ವಾಹಿತಾಸಕ್ತಿ ಮತ್ತು ಅಹಂ ಸಹ ಸಾಮಾನ್ಯ ಒಳಿತನ್ನು ಉತ್ತೇಜಿಸುತ್ತದೆ ಎಂಬ ಅಭಿಪ್ರಾಯವನ್ನು ಸ್ಮಿತ್ ಹೊಂದಿದ್ದರು.

## ಪ್ರಭುತ್ವದ ಪಾತ್ರ ಮತ್ತು ತೆರಿಗೆಯನ್ನು ಕುರಿತು ಆಡಂ ಸ್ಮಿತ್

ಸ್ಮಿತ್, ಒಂದು ಹೊಸ ರೀತಿಯಲ್ಲಿ, ಯಾವ ಆರ್ಥಿಕ ಚಟುವಟಿಕೆಯ ಉಪಕ್ಷೇತ್ರಗಳನ್ನು ಪ್ರಭುತ್ವಕ್ಕೆ ಮೀಸಲಿಡಬೇಕು ಮತ್ತು ಯಾವುದನ್ನು ಖಾಸಗಿ ಕ್ಷೇತ್ರಕ್ಕೆ ಬಿಡಬೇಕು ಎಂಬುದನ್ನು ಪ್ರತ್ಯೇಕಿಸಿದರು. ಅವರ ಪ್ರಕಾರ ಪ್ರಭುತ್ವವು ಖಾಸಗಿ ಪ್ರತಿನಿಧಿಗಳು ಮಾಡಲು ಅಸಮರ್ಥರಾಗಿರುವ ಅಥವಾ ಸರ್ಕಾರದಷ್ಟು ಚೆನ್ನಾಗಿ ಮಾಡಲು ಸಾಧ್ಯವಿಲ್ಲ (ಅಥವಾ ಹೆಚ್ಚಿನ ವೆಚ್ಚದಿಂದ ಮಾತ್ರವೇ ಹಾಗೆ ಮಾಡಲು ಸಾಧ್ಯವಾಗುತ್ತದೋ) ದಂತಹ ಕಾರ್ಯಗಳನ್ನು ಮಾತ್ರ ಕೈಗೆತ್ತಿಕೊಳ್ಳಬೇಕು. ಪ್ರಭುತ್ವದ ನ್ಯಾಯಯುತ ಕಾರ್ಯಗಳನ್ನು ಒಮ್ಮೆ ನಿಗದಿ ಪಡಿಸಿದ ನಂತರ ಅದಕ್ಕೆ ಅಗತ್ಯವಾಗುವ ಹಣಕಾಸಿನ ಕುರಿತು

ಸಹ ನಿರ್ಧಾರ ಮಾಡಬೇಕಾಗುತ್ತದೆ. ಸ್ಮಿತ್ ರ ಪ್ರಕಾರ ಅನುಸರಿಸಬೇಕಾದ ಸೂತ್ರವೇನೆಂದರೆ, ಖಾಸಗಿ ಕ್ಷೇತ್ರದ ಮೇಲೆ ಅತಿ ಹೆಚ್ಚಿನ ತೆರಿಗೆಯ ಹೊರೆಯನ್ನು ಹೇರಬಾರದು ಎಂಬುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಮಿತ್ ಅಭಿವ್ಯಕ್ತಿಸಿದ ಅಭಿಪ್ರಾಯಗಳು "ಕನಿಷ್ಠ" ಅಥವಾ "ರಾತ್ರಿ ಕಾವಲುಗಾರನಂತಹ ಪ್ರಭುತ್ವ" ದ ಪರಿಕಲ್ಪನೆಯ ಪರ ವಾದ ಎಂಬುದಾಗಿ ಅನೇಕವೇಳೆ ಅರ್ಥೈಸಿಕೊಳ್ಳಲಾಗುತ್ತದೆ. ಆದರೆ ಈ ವ್ಯಾಖ್ಯಾನವು ಸಮರ್ಥನೀಯವಲ್ಲ. ಪ್ರಭುತ್ವವು ಕೈಗೊಳ್ಳಬೇಕಾದ ಅನೇಕ ಗಣನೀಯ ಪ್ರಮಾಣದ ನಿಯಂತ್ರಣ ಕಾರ್ಯಗಳನ್ನು *'ದಿ ವೆಲ್ತ್ ಆಫ್ ನೇಷನ್ಸ್'* ಪುಸ್ತಕವು ಒಳಗೊಂಡಿದೆ. ನಿಜಕ್ಕೂ ಸ್ಮಿತ್ ಹಳೆಯ ನಿರಂಕುಶಾಧಿಕಾರಿ ಪ್ರಭುತ್ವವನ್ನು ಅಂದಿನ ಬದಲಾಗುತ್ತಿರುವ ಅಗತ್ಯಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸಬಲ್ಲಂತ ಒಂದು ಆಧುನಿಕ, ಸಂವಿಧಾನಾತ್ಮಕ ಮತ್ತು ಗುರಿ-ಸಾಧನೆಯ ಪ್ರಭುತ್ವವನ್ನಾಗಿ ಪರಿವರ್ತಿಸುವುದರಲ್ಲಿ ಆಸಕ್ತಿ ಹೊಂದಿದ್ದರು. ಉದಾಹರಣೆಗೆ, ಸ್ಮಿತ್ ಶ್ರಮ ವಿಭಜನೆಯು ನಕಾರಾತ್ಮಕವಾದ ಅನುಷಂಗಿಕ ಪರಿಣಾಮಗಳನ್ನು ಹೊಂದಬಹುದು ಎಂಬುದನ್ನು ಗುರುತಿಸಿದರು: ಕರಕುಶಲಕರ್ಮಿಗಳ ಕೌಶಲಗಳ ಅಪಮೌಲ್ಯೀಕರಣ ಮತ್ತು ವಯಸ್ಕ ಕಾರ್ಮಿಕರ ಬದಲಾಗಿ ಬಾಲ ಕಾರ್ಮಿಕತೆ ಇರುವುದು. ಅವರು ಈ ಬೆಳವಣಿಗೆಯ ನಕಾರಾತ್ಮಕ ಪರಿಣಾಮಗಳ ತೀಕ್ಷ್ಣತೆಯನ್ನು ಕಡಮೆ ಮಾಡಲು ಪ್ರಭುತ್ವವು ಪ್ರಾಥಮಿಕ ಶಾಲಾಶಿಕ್ಷಣಕ್ಕೆ ಹಣಕಾಸಿನ ಬೆಂಬಲ ಒದಗಿಸಬೇಕೆಂಬುದಕ್ಕೆ ಕರೆ ನೀಡಿದರು. ನ್ಯಾಯ, ಆರಕ್ಷಕ ಕರ್ತವ್ಯ, ರಾಷ್ಟ್ರ ರಕ್ಷಣೆಯ ನಿರ್ವಹಣೆ; ಜನರು ಮತ್ತು ಸರಕುಗಳ ಚಲನೆಯನ್ನು ಸುಗಮಗೊಳಿಸಲು ಮೂಲಸೌಕರ್ಯಗಳ ಒದಗಣೆ; ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಬೃಹತ್ ಪ್ರಮಾಣದ ಯೋಜನೆಗಳನ್ನು ಯೋಜಿಸುವುದನ್ನು ಒಳಗೊಂಡಂತೆ ಪ್ರಭುತ್ವದ ಇತರ ಜವಾಬ್ದಾರಿಗಳನ್ನು ಅವರು ಪಟ್ಟಿ ಮಾಡಿದರು. ಐತಿಹಾಸಿಕ ಅನುಭವಗಳ ಹಿನ್ನೆಲೆಯಲ್ಲಿ, ವಿಶೇಷವಾಗಿ 18ನೆಯ ಶತಮಾನದ ಆರಂಭದಲ್ಲಿ ಫ್ರಾನ್ಸ್ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಕಾಗದ ರೂಪದ ಹಣವನ್ನು ಪರಿಚಯಿಸಿದ್ದು ಮತ್ತು ಅದರಿಂದ ಉಂಟಾದಂತಹ ಮಿಸ್ಸಿಸಿಪ್ಪಿ ಬಬಲ್ (1720 ರಲ್ಲಿ ಶೇರು ಮಾರುಕಟ್ಟೆಯ ಕುಸಿತದಿಂದಾದ ಹಣಕಾಸಿನ ಬಿಕ್ಕಟ್ಟು) ನ ಹಿನ್ನೆಲೆಯಲ್ಲಿ, "ಕೆಲವು ವ್ಯಕ್ತಿಗಳು ತಮ್ಮ ಸಹಜ ಸ್ವಾತಂತ್ರವನ್ನು ಚಲಾಯಿಸುವುದರ ಮೂಲಕ ಇಡೀ ಸಮಾಜದ ಭದ್ರತೆಯನ್ನು ಅಪಾಯಕ್ಕೊಡ್ಡಬಹುದಾಗಿದ್ದು ಅದಕ್ಕೆ ಎಲ್ಲಾ ಸರ್ಕಾರಗಳ ಕಾನೂನುಗಳ ಮೂಲಕ ಕಡಿವಾಣ ಹಾಕಿದೆ, ಕಡಿವಾಣ ಹಾಕಲೇಬೇಕಾಗಿದೆ" ಎಂಬ ಕಾರಣಕ್ಕೆ ಅಸ್ಥಿರವಾದ ಬ್ಯಾಂಕಿಂಗ್ ಕ್ಷೇತ್ರವನ್ನು ನಿಯಂತ್ರಿಸುವುದನ್ನೂ ಸಹ ಸ್ಮಿತ್ ಪ್ರತಿಪಾದಿಸಿದರು. ಮತ್ತು ಅವರು ಕಾಗದದ ರೂಪದಲ್ಲಿನ ಹಣವನ್ನು ತಾಂತ್ರಿಕ ಪ್ರಗತಿಗೆ ಸರಿಸಮವಾಗಿ ಪರಿಗಣಿಸಿದರಾದರೂ, ಅದು ವಿನಿಮಯಕ್ಕೆ ಚಿನ್ನ ಮತ್ತು ಬೆಳ್ಳಿ ಒದಗಣೆಯ ದುಬಾರಿ ವೆಚ್ಚವನ್ನು ಉಳಿಸಲು ಸಮಾಜಕ್ಕೆ ಅನುವು ಮಾಡಿಕೊಡುವುದರಿಂದ ಒಂದು ದೇಶದ ವಾಣಿಜ್ಯ ಮತ್ತು ಕೈಗಾರಿಕೆಯು "' ಹೀಗೆ, *ಡಿಡಿಲಿಯನ್ ನ ರೆಕ್ಕೆಗಳಂತೆ,* ಕಾಗದ *ರೂಪದಲ್ಲಿನ ಹಣ* ವನ್ನು ಅವಲಂಬಿಸಿದಾಗ ಅವು ಅಷ್ಟೇನೂ ಸಂಪೂರ್ಣವಾಗಿ ಸುಭದ್ರವಾಗಿರಲು ಸಾಧ್ಯವಿಲ್ಲ" ಎಂಬ ಎಚ್ಚರಿಕೆಯನ್ನು ಸಹ ನೀಡಿದರು. ಗ್ರೀಕ್ ಪುರಾಣದ ಪ್ರಕಾರ ಡೇಡಲಸ್ ಎಂಬಾತನು ಒಬ್ಬ ಪ್ರತಿಭಾವಂತ ಕುಶಲಕರ್ಮಿಯಾಗಿದ್ದು ಆತನು ಮತ್ತು ಆತನ ಮಗನಾದ ಇಕರಸ್ ಮಿನಾಸ್ ನಿಂದ ಕ್ರೀಟ್ ದ್ವೀಪದಲ್ಲಿ ಬಂಧಿಸಲ್ಪಟ್ಟಿದ್ದಾಗ ಅಲ್ಲಿಂದ ತಪ್ಪಿಸಿಕೊಳ್ಳಲು ಮೇಣ ಮತ್ತು ಪುಕ್ಕಗಳಿಂದ ಮಾಡಿದ ರೆಕ್ಕೆಗಳನ್ನು ನಿರ್ಮಿಸಿಕೊಂಡಿದ್ದರು. ಆದರೆ, ಮದೋನ್ಮತ್ತತೆ - ಅಥವಾ "ಅವಿವೇಕಿಯ ಉತ್ಸಾಹ" ಎನ್ನೋಣವೇ -ಇಕರಸ್ ತನ್ನ ತಂದೆಯ ಎಚ್ಚರಿಕೆಗಳನ್ನು ಉಪೇಕ್ಷಿಸುವಂತೆ ಮಾಡಿತು: ಆತನು ಸೂರ್ಯನಿಗೆ ತೀರ ಹತ್ತಿರ ಹಾರಿಹೋಗಿದ್ದು, ಅದು ಆತನ ರೆಕ್ಕೆಗಳನ್ನು ಕರಗುವಂತೆ ಮಾಡಿತು, ಮತ್ತು ಅವನು ಸಮುದ್ರದಲ್ಲಿ ಬಿದ್ದು ಸತ್ತು ಹೋದನು.

ತೆರಿಗೆಗಳು ಪ್ರಮಾಣಾತ್ಮಕವಾಗಿ ಸಮಾನವಾಗಿರಬೇಕು ಎಂದು ವಾದಿಸಿದ ಸ್ಮಿತ್, ಹೀಗೆ ತೆರಿಗೆಯನ್ನು ಕಟ್ಟುವ ಸಾಮರ್ಥ್ಯವಿರಬೇಕು ಎಂಬ ತತ್ವವನ್ನು (ಆದಾಯಕ್ಕೆ ಅನುಗುಣವಾಗಿ ತೆರಿಗೆ ಇರಬೇಕು) ಮತ್ತು ಸಮಾನತೆಯ ತತ್ವವನ್ನು (ಸರ್ಕಾರದ ಚಟುವಟಿಕೆಯಿಂದ ದಕ್ಕುವ ಅನುಕೂಲಗಳಿಗೆ ತಕ್ಕಂತೆ ತೆರಿಗೆ ಇರಬೇಕು) ಎರಡನ್ನೂ ಉದ್ದೇಶಿಸಿದರು.

**ಡೇವಿಡ್ ರಿಕಾರ್ಡೋ**

ಲಂಡನ್ ನಗರದ ಶೇರು ವಿನಿಮಯ ಕೇಂದ್ರದಲ್ಲಿ ಯಶಸ್ವಿ ಸ್ಟಾಕ್ ಜಾಬರ್ (ಶೇರು ವ್ಯಾಪಾರಿ) ಆಗಿ ವೃತ್ತಿ ಪ್ರಾರಂಭಿಸಿದ ರಿಕಾರ್ಡೋ - 1815ರಲ್ಲಿ ವಾಟರ್‌ಲೂ ಕದನದಲ್ಲಿ ನೆಪೋಲಿಯನ್ ಸೋತ ಸಂದರ್ಭದಲ್ಲಿ ಅವರು ಅಪಾರ ಸಂಪತ್ತನ್ನು ಗಳಿಸಿದರು - *'ದಿ ವೆಲ್ತ್ ಆಫ್ ನೇಷನ್ಸ್'* ಗ್ರಂಥವನ್ನು ಓದುವ ಮೂಲಕ ರಾಜಕೀಯ ಅರ್ಥನೀತಿಯ ಶಿಸ್ತಿಗೆ ಬಂದರು. ಈ ವಿಷಯವು ಅವರಿಗೆ "ಅತ್ಯಂತ ಅಚ್ಚುಮೆಚ್ಚಿನ ವಿಷಯವಾಯಿತು." ಅವರ ಮೊದಲ ಪ್ರಕಟಣೆಗಳು ವಿತ್ತೀಯತೆ ಮತ್ತು ಚಲಾವಣಾ ನಾಣ್ಯದ ಪ್ರಶ್ನೆಗಳನ್ನು ಕುರಿತಾಗಿತ್ತು. ಉದಾಹರಣೆಗೆ, 1797ರಿಂದ 1821ರವರೆಗಿನ ಅವಧಿಯಲ್ಲಿ ಕಂಡು ಬಂದ ಬೆಲೆಗಳ ಮಟ್ಟದಲ್ಲಿನ ಏರಿಕೆಯು, ಎಲ್ಲವುದಕ್ಕಿಂತಲೂ ಮುಖ್ಯವಾಗಿ, ಅತಿಯಾಗಿ ಹಣವನ್ನು ಮುದ್ರಿಸಿದ್ದರಿಂದ ಆಯಿತು ಎಂದು ಅವರು ಬರೆದರು. ಬುಲ್ಯನಿಸ್ಟ್ (bullionist (ನಾಣ್ಯವಾದಿ) - ಆರ್ಥಿಕ ವಿನಿಮಯ ವ್ಯವಸ್ಥೆಯಲ್ಲಿ ಲೋಹದ ನಾಣ್ಯಗಳ ಚಲಾವಣೆಯನ್ನು ಸಮರ್ಥಿಸುವವನು) ವಿವಾದ ಎಂದು ಕರೆಯಲಾದ ವಿವಾದದಲ್ಲಿ ಅವರು ಚಿನ್ನದ ಪ್ರಮಾಣದ ಅಳವಡಿಕೆಗೆ ಶೀಘ್ರದಲ್ಲಿ ಹಿಂದಿರುಗಬೇಕೆಂದು ಕರೆಕೊಟ್ಟಂತ ಬುಲ್ಯನಿಸ್ಟ್ ಗಳ ಪಕ್ಷದ ಪರ ವಹಿಸಿದರು. ಅಂತಹದೊಂದು ಕ್ರಮವು ದೇಶದಲ್ಲಿ ಹೆಚ್ಚುತ್ತಿದ್ದ ಬೆಲೆಗಳ ಮಟ್ಟವು (ವಿದೇಶದಲ್ಲಿನ ಮಟ್ಟಕ್ಕೆ ಸಾಪೇಕ್ಷವಾಗಿ), ಸರಕು ಮತ್ತು ಬಂಡವಾಳದ ಹರಿವುಗಳ ಮೂಲಕ ನಾಣ್ಯ ಅಪಮೌಲ್ಯೀಕರಣ ಆಗುವುದನ್ನು ಖಚಿತಪಡಿಸುತ್ತದೆ ಮತ್ತು ತತ್ಪರಿಣಾಮವಾಗಿ ದೇಶದ ಒಳಗೆ ಮತ್ತು ಹೊರಗೆ ನಾಣ್ಯಗಳ ನಡುವಿನ ಕೊಳ್ಳುವ ಶಕ್ತಿಯಲ್ಲಿ ಸಮಾನತೆ ಸ್ಥಾಪಿತವಾಗುತ್ತದೆ ಎಂದು ಅವರು ವಾದಿಸಿದರು.

ಸಾಕಷ್ಟು ವ್ಯಾವಹಾರಿಕ ಪ್ರಜ್ಞೆಯನ್ನು ಹೊಂದಿದ್ದ ರಿಕಾರ್ಡೋ "ಕೇವಲ ವಾಸ್ತವಾಂಶಗಳು ಮುಖ್ಯವೇ ಹೊರತು ಸಿದ್ಧಾಂತವಲ್ಲ ಎನ್ನುವಂತಹ ಜನರ "ಕೀಳು ಆರೋಪ" ಗಳ ವಿರುದ್ಧ ಆರ್ಥಿಕ ಸಿದ್ಧಾಂತವನ್ನು ಸಮರ್ಥಿಸಿದರು. ಅಂತಹ ವ್ಯಕ್ತಿಗಳು ವಾಸ್ತವಾಂಶಗಳನ್ನು ಬೇರ್ಪಡಿಸಲು ಅಸಮರ್ಥರು. ಅವರು ಭೋಳೆ ಸ್ವಭಾವದವರು, ಅವರಿಗೆ ಯಾವುದೇ ಮಾನದಂಡಗಳು ಇಲ್ಲದಿರುವುದರಿಂದ ಅವರು ಹಾಗಿರುವುದು ಸಹಜವೇ" ಎಂದರು." ಉತ್ತಮ ಸಿದ್ಧಾಂತಕ್ಕಿಂತ ಕಾರ್ಯಸಾಧುವಾದದ್ದು ಯಾವುದು ಇಲ್ಲ ಎಂದು ಹೇಳುವ ಮೂಲಕ ರಿಕಾರ್ಡೋ ಎಮ್ಯಾನ್ಯುಯಲ್ ಕ್ಯಾಂಟ್ (Immanuel Kant)ರ ತಿಳಿವಳಿಕೆಯೊಂದನ್ನು ದೃಢೀಕರಿಸಿದರು. ಅವರು ಸಣ್ಣ ಸಣ್ಣ ಮಾದರಿಗಳನ್ನು ಬಳಸುವ ಮೂಲಕ ಆರ್ಥಿಕ ಜಗತ್ತು ಕೆಲಸ ಮಾಡುವ ರೀತಿಯನ್ನು ಶೋಧಿಸಲು ಪ್ರಯತ್ನಿಸಿದ ಮೊದಲ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದರು; ಈ ಮಾದರಿಗಳು ಪ್ರತಿಯೊಂದು ನಿರ್ದಿಷ್ಟ ಸಮಸ್ಯೆಯ ಮೂಲದ ಆಳಕ್ಕೆ ಇಳಿಯುವಂತದ್ದಾಗಿದ್ದವು ಮತ್ತು ಆರ್ಥಿಕ ನೀತಿ ಶಿಫಾರಸ್ಸುಗಳಿಗೆ ಬುನಾದಿಯೊಂದನ್ನು ಹಾಸುವಂತ ಉದ್ದೇಶವನ್ನು ಹೊಂದಿದಂತಾಗಿದ್ದವು. ಶಂಪೀಟರ್ "ರಿಕಾರ್ಡೋನ ಮಿತಿ" ಯ ಬಗ್ಗೆ ಮಾತಾಡುತ್ತಾರೆ - ಈ ಮಿತಿಗೆ ಅವರು ಮತ್ತು ಅರ್ಥಶಾಸ್ತ್ರವೆಲ್ಲವೂ ಬಲಿಯಾಗುತ್ತವೆ. ಮಾದರಿಗಳು ಯಾವಾಗಲೂ, ವಿಷಯದ ಸಂಕೀರ್ಣತಯೆ ಹಿನ್ನೆಲೆಯಲ್ಲಿ, ಸಾಕಷ್ಟು ಸಂಕೀರ್ಣತೆಯನ್ನು ಹೊಂದಿರುವುದಿಲ್ಲ. ನಮ್ಮ ತಿಳುವಳಿಕೆಯನ್ನು ಹೆಚ್ಚಿಸಲು ಅವು ನಮಗೆ ಒಳನೋಟಗಳನ್ನು ಒದಗಿಸುತ್ತವೋ ಇಲ್ಲವೋ ಎಂಬುದು ಮಾತ್ರವೇ ಆಸಕ್ತಿದಾಯಕ ಸಂಗತಿ. ರಿಕಾರ್ಡೋರ ವಿಷಯದಲ್ಲಿ ಅವು ಸಾಮಾನ್ಯವಾಗಿ ಒದಗಿಸುತ್ತವೆ.

## ಮೌಲ್ಯ ಮತ್ತು ವಿತರಣೆಗೆ ಸಂಬಂಧಿಸಿದಂತೆ ರಿಕಾರ್ಡೋ ಅವರ ಸಿದ್ಧಾಂತ

ರಿಕಾರ್ಡೋ ಗೆ ಸ್ಮಿತ್ ನ ವಿಶ್ಲೇಷಣೆ ಅತ್ಯಂತ ಆಸಕ್ತಿದಾಯಕವಾಗಿತ್ತು, ಆದರೆ ಅದರಲ್ಲಿ ಅನೇಕ ದೋಷಗಳಿದ್ದು ಅವುಗಳನ್ನು ಸರಿಪಡಿಸುವ ಅಗತ್ಯವಿತ್ತು. ಅದನ್ನು ಅವರು 1817ರಲ್ಲಿ ಮೊದಲ ಬಾರಿಗೆ ಪ್ರಕಟಗೊಂಡು ಆನಂತರ ಎರಡು ಆವೃತ್ತಿಗಳನ್ನು ಕಂಡ *'ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಇಕಾನಮಿ ಅಂಡ್ ಟ್ಯಾಕ್ಸೇಷನ್ (Principles of Political Economy and Taxation) '* ಎಂಬ ತಮ್ಮ ಪುಸ್ತಕದಲ್ಲಿ ಮಾಡಿದರು. ಜಾನ್ ಮೇನರ್ಡ್ ಕೇನ್ಸ್ (John Maynard Keynes) (1883 - 1946) ನ ಪ್ರಕಾರ ರಿಕಾರ್ಡೋ ತಮ್ಮ ಈ ಗ್ರಂಥದ ಮೂಲಕ "ಸ್ಪೇನ್ ದೇಶವನ್ನು ಪವಿತ್ರ ಮತ ವಿಚಾರಣೆ(Inquisition) ಯು ಗೆದ್ದುಕೊಂಡಂತಷ್ಟೇ ಸಂಪೂರ್ಣವಾಗಿ ಇಂಗ್ಲೆಂಡ್ ಅನ್ನು ಸಂಪೂರ್ಣವಾಗಿ ಗೆದ್ದುಬಿಟ್ಟರು". ಇದು ಖಂಡಿತವಾಗಿಯೂ ಉತ್ಪ್ರೇಕ್ಷೆವೇ, ಆದರೆ ರಿಕಾರ್ಡೋ ಅವರ ದೀರ್ಘಕಾಲೀನ ಪ್ರಭಾವವು ಗಣನೀಯವಾಗಿತ್ತು. ಸ್ಮಿತ್ ತಮ್ಮ *'ದಿ ವೆಲ್ತ್ ಆಫ್ ನೇಷನ್ಸ್'* ಗ್ರಂಥದಲ್ಲಿ "ಸಂಪತ್ತು ಶೇಖರಣೆ ಮತ್ತು ಭೂಮಿ ಒತ್ತುವರಿಯ ಎರಡೂ ವಿದ್ಯಮಾನಗಳ ಮುನ್ನ ಹಿಂದಿದ್ದ ಸಮಾಜದ ಆರಂಭಕಾಲದ ಒರಟಾದ ಸ್ಥಿತಿಯಲ್ಲಿ" ಮಾತ್ರವೇ, ಉತ್ಪಾದನೆಯಲ್ಲಿ ತೊಡಗಿಸಿದ ಶ್ರಮದ ಪ್ರಮಾಣವು ಎರಡು ಉತ್ಪನ್ನಗಳ ಸಾಪೇಕ್ಷ ಬೆಲೆಗಳನ್ನು ನಿರ್ಣಯಿಸಿದ್ದವು ಎಂದು ವಾದಿಸಿದ್ದರು. ರಿಕಾರ್ಡೋ ಇದನ್ನು ತಪ್ಪೆಂದು ವಾದಿಸಿದರು. ದುಡಿಯುವ ಜನರು ಉಪಕರಣಗಳನ್ನು ಬಳಸಿದಾಗ (ನೀರುನಾಯಿಯನ್ನು ಹಿಡಿಯುವ ಬಲೆ, ಜಿಂಕೆ ಬೇಟೆಯಲ್ಲಿ ಬಳಸುವ ಈಟಿದಂತಹ ಬಂಡವಾಳ ಸರಕುಗಳು) ಸಹ ಶ್ರಮ ಆಧಾರಿತ ಮೌಲ್ಯ ಸಿದ್ಧಾಂತವು, ಕನಿಷ್ಠ ಹೆಚ್ಚುಕಡಮೆ, ಅನ್ವಯವಾಗುತ್ತದೆ - ಆದರೆ ಈಗ ಅಂತಹ ಉಪಕರಣ (ಬಲೆ, ಈಟಿ)ಗಳನ್ನು ರೂಪಿಸಿಕೊಳ್ಳುವಲ್ಲಿ ಬಳಸಲಾಗುವ 'ಪರೋಕ್ಷ' ಶ್ರಮವನ್ನು ನೆರೆ ಹಿಡಿಯಲು ಅಥವಾ ಬೇಟೆಯಾಡಲು ಬಳಸುವ *'ನೇರ'* ಶ್ರಮದೊಂದಿಗೆ ಸೇರಿಸಿಕೊಳ್ಳಬೇಕಾಗಿ ಬರುತ್ತದೆ ಎಂದು ವಾದಿಸಿದರು. ವ್ಯಯಸಲಾದ ಒಟ್ಟು ಶ್ರಮದ ಮಟ್ಟವನ್ನು "ಉತ್ಪಾದನೆಯ ಕಷ್ಟ ಯಾ ಪರಿಶ್ರಮ (ದುಬಾರಿಯ ಹಾಗೂ ಹೆಚ್ಚಿನ ಸಮಯ ಬೇಡುವ ಪ್ರಕ್ರಿಯೆ)" ಅಳೆಯಲು ಒಂದು ಮಾಪನವಾಗುತ್ತದೆ. ತಾಂತ್ರಿಕ ಪ್ರಗತಿಯು ಈ ಕಷ್ಟವನ್ನು ಕಡಮೆ ಮಾಡುತ್ತದೆ ಮತ್ತು ಅದು ಸರಕುಗಳ ಶ್ರಮದ ಮೌಲ್ಯ ಕಡಮೆಯಾಗುವುದರಲ್ಲಿ ಪ್ರತಿಬಿಂಬಿತವಾಗುತ್ತದೆ. ರಿಕಾರ್ಡೋ ರ ಮೂಲ ಸಂದೇಶವು ಸಂಪೂರ್ಣವಾಗಿ ಸತ್ಯವಾಗಿದೆ ಎಂಬುದು ಸಾಬೀತಾಯಿತು: ಶ್ರಮಾದ ಉತ್ಪಾದಕತೆ ಹೆಚ್ಚಿದಂತೆ, ಸರಕುಗಳನ್ನು ಉತ್ಪಾದಿಸಲು ಅಗತ್ಯವಾಗುವ ಒಟ್ಟು ಶ್ರಮಕ್ಕೆ ಸಂಬಂಧಿಸಿದಂತೆ ಅವು ಹೆಚ್ಚು "ದುಬಾರಿ" ಯಾಗಿರುವುದಿಲ್ಲ, ಮತ್ತು ರಾಷ್ಟ್ರವು ಹೆಚ್ಚು ಸಂಪದ್ಭರಿತವಾಗಿರುತ್ತದೆ.

ಒಂದು ನಿರ್ದಿಷ್ಟ ತಂತ್ರಜ್ಞಾನದ ಮಟ್ಟಕ್ಕೆ ಸಂಬಂಧಿಸಿದಂತೆ ನೈಜ ವೇತನ ದರ ಮತ್ತು ಲಾಭದ ದರವು ಪರಸ್ಪರ *'ವಿಲೋಮ'* ಸಂಬಂಧವನ್ನು ಹೊಂದಿರುತ್ತವೆ ಎಂಬುದನ್ನು ಗುರುತಿಸುವಲ್ಲಿಯೂ ಸಹ ಸ್ಮಿತ್ ವಿಫಲರಾಗಿದ್ದರು ಎಂದು ರಿಕಾರ್ಡೋ ಒತ್ತಿ ಹೇಳಿದರು. ರಿಕಾರ್ಡೋನ ಆದಾಯ ವಿತರಣೆಯ ಮೂಲಭೂತ ನಿಯಮದ ಪ್ರಕಾರ: "ಶ್ರಮಿಕನಿಗೆ ಶ್ರಮದ ಪ್ರತಿಫಲದ ದೊಡ್ಡ ಭಾಗವನ್ನು ನೀಡಿದಲ್ಲಿ ಲಾಭಗಳ ದರವು ಕಡಮೆಯಾಗಿರಲೇ ಬೇಕು ಮತ್ತು ಲಾಭಗಳ ದರ ಹೆಚ್ಚಿದರೆ ಶ್ರಮಿಕನಿಗೆ ದಕ್ಕುವ ಪ್ರತಿಫಲವು ಕಡಮೆಯಾಗಿರಲೇ ಬೇಕು."

ಆದಾಯ ವಿತರಣೆಯಲ್ಲಿನ ಬದಲಾವಣೆಯೊಂದು ಸಾಮಾನ್ಯವಾಗಿ ಸರಕುಗಳ ಸಾಪೇಕ್ಷ ಬೆಲೆಗಳ ಮೇಲೆ ಪರಿಣಾಮವನ್ನು ಉಂಟುಮಾಡುತ್ತದೆ, ಏಕೆಂದರೆ ಅವುಗಳ ಉತ್ಪಾದನೆಯು ಉತ್ಪಾದನಾ ಪ್ರಕ್ರಿಯೆಯಲ್ಲಿ ಅಗತ್ಯವಾಗುವ ಉತ್ಪನ್ನಗಳನ್ನು ಉತ್ಪಾದಿಸುವಲ್ಲಿ (intermediate) ಪ್ರತ್ಯಕ್ಷವಾಗಿ ತಗಲುವ ಶ್ರಮ ಹಾಗೂ ಪರೋಕ್ಷವಾಗಿ ತಗಲುವ ಶ್ರಮದ ನಡುವೆ ವಿಭಿನ್ನ ಪ್ರಮಾಣಗಳನ್ನು ಪ್ರದರ್ಶಿಸುತ್ತದೆ ಎಂಬುದು ರಿಕಾರ್ಡೋ ಗೆ ಸ್ಪಷ್ಟವಾಗಿತ್ತು (ಈ ಹಿಂದೆ ವಿಭಿನ್ನ

ಕಾಲ ಚಿತ್ರಣಗಳ ಕುರಿತು ಮಾಡಿದ ಉಲ್ಲೇಖವನ್ನು ನೆನಪಿಸಿಕೊಳ್ಳಿ). ಉತ್ಪಾದನೆಯ ಆರಂಭಿಕ ಹಂತಗಳಲ್ಲಿ ಸಾಪೇಕ್ಷ ದೊಡ್ಡ ಪ್ರಮಾಣದಲ್ಲಿ ತೊಡಗಿಸುವ ಶ್ರಮದಿಂದ (ಮತ್ತು ಹಾಗಾಗಿ ದೊಡ್ಡ ಪ್ರಮಾಣದಲ್ಲಿ ವೇತನಕ್ಕೆ ಪಾವತಿಗಳು) ಉತ್ಪನ್ನವಾಗುವ ಸರಕುಗಳ ಬೆಲೆಗಳು ಸಾಪೇಕ್ಷವಾಗಿ ಆರಂಭಿಕ ಹಂತಗಳಲ್ಲಿ ಲಾಭದ ದರಗಳು ಹೆಚ್ಚಾಗಿದ್ದಾಗ ಸಾಪೇಕ್ಷ ಸಣ್ಣ ಪ್ರಮಾಣದಲ್ಲಿ ತೊಡಗಿಸುವ ಶ್ರಮದಿಂದ (ಅನುರೂಪವಾಗಿ ವೇತನ ದರವು ಕಡಮೆಯಿರುತ್ತದೆ) ಉತ್ಪಾದಿಸಲ್ಪಟ್ಟ ಉತ್ಪನ್ನಗಳ  ಬೆಲೆಗಿಂತ ಹೆಚ್ಚಾಗಿರುವುದನ್ನು ಸೂಚಿಸುತ್ತದೆ. ಚಕ್ರಬಡ್ಡಿಯ ಪರಿಣಾಮದ ಕಾರಣ ಇದು ಹೀಗಿರುವುದು: ಹೆಚ್ಚಿನ ಲಾಭದ ಸಂದರ್ಭದಲ್ಲಿ ಉತ್ಪಾದನಾ ಪ್ರಕ್ರಿಯೆಯ ಆರಂಭ ಹಂತದಲ್ಲಿಯೇ ಸಾಪೇಕ್ಷವಾಗಿ ದೊಡ್ಡ ಪ್ರಮಾಣದಲ್ಲಿನ ವೇತನದ ಮೊತ್ತವನ್ನು ಮೊದಲೇ (ಚಕ್ರ ಬಡ್ಡಿಯ ಆಧಾರದ ಮೇರೆಗೆ) ಲೆಕ್ಕ ಹಾಕಿ ಸರಕಿನ ಬೆಲೆಯಲ್ಲಿ ಸೇರಿಸುವುದರಿಂದ (discounted forward) ಸಾಪೇಕ್ಷವಾಗಿ ಈ ಸರಕುಗಳು ದುಬಾರಿಯಾಗಿರುವಂತೆ ಮಾಡುತ್ತದೆ. ಆದರೂ, ದತ್ತ ಬಳಸಿದ ತಂತ್ರಜ್ಞಾನದಿಂದ, ಮತ್ತು ಹೆಚ್ಚುಕಡಮೆ ಅದು ಸರಿ ಎಂದು ಅವರಿಗೆ ತೋರಿದ್ದರಿಂದ ಶ್ರಮ ಆಧಾರಿತ ಮೌಲ್ಯದ ಸಿದ್ಧಾಂತಕ್ಕೆ ಹೊಂದುವಂತ ಉತ್ತಮ ಸಿದ್ಧಾಂತದ ಕೊರತೆಯ ಕಾರಣ, ಆದಾಯ ವಿತರಣೆಯ ಮೇಲಿನ ಸಾಪೇಕ್ಷ ಬೆಲೆಗಳ ಅವಲಂಬನೆಯನ್ನು ಸಂಪೂರ್ಣವಾಗಿ ಗ್ರಹಿಸುವಲ್ಲಿ ರಿಕಾರ್ಡೋ ವಿಫಲರಾದರು.

## ರಿಕಾರ್ಡೋ ರ ನೆಲ ಬಾಡಿಗೆಯ ಸಿದ್ಧಾಂತ

ರಿಕಾರ್ಡೋ ಅವರ ಪ್ರಕಾರ ನೆಲದ ಬಾಡಿಗೆಯು "ನಿಸರ್ಗದ ಫಲವಂತಿಕೆಯ" ಅಭಿವ್ಯಕ್ತಿ ಎಂಬ ಸ್ಮಿತ್ ನ ವಿವರಣೆಯು ವಿಶೇಷವಾಗಿ ವಿಫಲವಾಗಿತ್ತು. ಅದಕ್ಕೆ ತದ್ವಿರುದ್ಧವಾಗಿದೆ,  ಬಾಡಿಗೆಯು ನಿಸರ್ಗವು ಎಷ್ಟು "ಜಿಪುಣತನದಿಂದ ಕೂಡಿದೆ" ಎಂಬುದರ ಅಭಿವ್ಯಕ್ತಿ ಎಂದು ರಿಕಾರ್ಡೋ ಒತ್ತಿ ಹೇಳಿದರು. ಅಪರಿಮಿತ ಪ್ರಮಾಣದ ಅತ್ಯುತ್ತಮ ಗುಣಮಟ್ಟದ ಭೂಮಿ ಹಾಗೂ ಸ್ಥಳವು ಲಭ್ಯವಿದ್ದಲ್ಲಿ, ನೆಲದ ಬಾಡಿಗೆ ಎಂಬುದು ಏನೊಂದು  ಇರುವುದಿಲ್ಲ, ಏಕೆಂದರೆ ವೆಚ್ಚ-ಕನಿಷ್ಠ ಮಾಡುವ ಉತ್ಪಾದಕರು ಈ ರೀತಿಯದ ಭೂಮಿಯನ್ನು ಮಾತ್ರ ಬಳಸುವ ಮೂಲಕ ಸಮಾಜದ ಗೋಧಿಯ ಅಗತ್ಯತೆಯನ್ನು ಎಲ್ಲಾ ಮಟ್ಟದಲ್ಲಿಯೂ ಪೂರೈಸಬಲ್ಲರು ಎಂದು ಪ್ರತಿಪಾದಿಸಿದರು. ಆದರೆ ಈ ರೀತಿಯದ ಭೂಮಿಯು ಪ್ರಪುಲ್ಲವಾಗಿ ಲಭ್ಯವಿಲ್ಲದ ಕಾರಣ ಹಾಗೂ ಉತ್ಪಾದನೆ ವರ್ಧಿಸುತ್ತಾ ಹೋದಂತೆ ಯಾವುದೋ ಒಂದು ಹಂತದಲ್ಲಿ ಅದು *'ವಿರಳ'* ವಾಗುವ ಕಾರಣ, ಬೇಡಿಕೆಯನ್ನು ಪೂರೈಸಲು ಅಗತ್ಯವಾಗಿ ಉತ್ಪಾದನೆಯ ಪ್ರತಿ ಘಟಕದ ವೆಚ್ಚವನ್ನು ಹೆಚ್ಚಾಗಿಸುವ ಗುಣಮಟ್ಟ ಕಡಮೆ ಇರುವಂತಹ ಭೂಮಿಯನ್ನೂ ಸಹ ಸಾಗುವಳಿ ಮಾಡುವುದರ ಮೂಲಕ, ಇಲ್ಲವೇ ಪ್ರತಿ ಘಟಕದ ವೆಚ್ಚವು ಹೆಚ್ಚಾಗುತ್ತಲೇ ಹೋಗುವ ಮೂಲಕ ಮಾತ್ರವೇ ಸಾಧ್ಯವಾಗುವಂತ ಅತ್ಯುತ್ತಮ ಗುಣಮಟ್ಟದ ಭೂಮಿಯನ್ನು ಇನ್ನೂ ಹೆಚ್ಚು ತೀವ್ರವಾಗಿ ಸಾಗುವಳಿ ಮಾಡುವುದರ ಮೂಲಕ ಪೂರೈಸಬೇಕಾಗುತ್ತದೆ. ತತ್ಪರಿಣಾಮವಾಗಿ, ಪ್ರತಿಫಲವು ಒಂದೋ ವಿಸ್ತೀರ್ಣ ಭೂಮಿಯ ಬಳಕೆಯನ್ನು ಆಧರಿಸಿ ಇಲ್ಲವೇ ಒಂದು ನಿರ್ದಿಷ್ಟ  ಭೂಮಿಯ ಮೇಲೆ ಕೇಂದ್ರೀಕರಿಸುವ ಅಧಿಕೋತ್ಪಾದನೆಯನ್ನು ಆಧರಿಸಿ  ಕುಸಿಯುತ್ತದೆ ಮತ್ತು ಅದು ಭೂಮಿಯ ವಿಸ್ತೀರ್ಣತೆ (ಹೆಚ್ಚು ಭೂಮಿಯ ಬಳಕೆಯಿಂದ ಗಳಿಸುವ ಹೆಚ್ಚುವರಿ) ಇಲ್ಲವೇ ಅಧಿಕೋತ್ಪಾದನೆ (ಶ್ರಮ ಹಾಗೂ ಬಂಡವಾಳದಂತಹ ಹೆಚ್ಚು ಸಂಪನ್ಮೂಲಗಳ ಬಳಕೆಯಿಂದ ಗಳಿಸುವ ಪ್ರತಿಫಲ)ಯನ್ನು ಆಧರಿಸಿದ  ಬಾಡಿಗೆಗಳಲ್ಲಿ ಪರಿಣಮಿಸುತ್ತದೆ.

ಉದಾಹರಣೆಗೆ, ಒಂದು ವೇಳೆ  ಬೇಡಿಕೆಯು ದೊಡ್ಡ ಪ್ರಮಾಣದಲ್ಲಿದ್ದು ಸಾಗುವಳಿಯನ್ನು ವಿಸ್ತೀರ್ಣವಾದಂತ ಕೀಳು ಗುಣಮಟ್ಟದ ಭೂಮಿಯ ಮೇಲೆ ಮಾಡಿದಲ್ಲಿ ಆಗ ಒಂದು ಟನ್ ಗೋಧಿಯ ಪ್ರತಿ ಕಾಲು ಭಾಗದ ವೆಚ್ಚವು ಹೆಚ್ಚಾಗುತ್ತದೆ. ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸಬೇಕೆಂದರೆ ಆಗ ಗೋಧಿಯ ಬೆಲೆಯು ಅದಕ್ಕನುಗುಣವಾಗಿ ಹೆಚ್ಚಾಗಬೇಕಾಗುತ್ತದೆ.

ಗೋಧಿಗೆ ಹೆಚ್ಚಿನ ಬೆಲೆಯು, ಪ್ರತಿ ಘಟಕವನ್ನು ಕಡಮೆ ವೆಚ್ಚದಲ್ಲಿ ಉತ್ಪಾದಿಸುವ ಉತ್ತಮ ಗುಣಮಟ್ಟದ ಭೂಮಿಯ ಮಾಲೀಕರಿಗೆ ತಮ್ಮ ಗೇಣಿದಾರದಿಂದ ಎರಡೂ ಬಗೆಯ ಭೂಮಿ ತುಂಡುಗಳ ಮೇಲೆ ಸಮಾನ ವೆಚ್ಚಗಳಲ್ಲಿ (ಬಾಡಿಗೆಯು ಸೇರಿ) ಪರಿಣಮಿಸಲು ಸಾಕಾಗುವಷ್ಟು ಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ಬಾಡಿಗೆಯನ್ನು ಸಂಗ್ರಹಿಸಲು ಸಾಧ್ಯವಾಗಿಸುತ್ತದೆ. ಈ ಹೊಸ ಸನ್ನಿವೇಶದಲ್ಲಿ, ಕೊರತೆ ಇಲ್ಲದಂತಹ ಮತ್ತು ಕನಿಷ್ಠ ಮೌಲ್ಯವುಳ್ಳ ಭೂಮಿಯನ್ನು ಪ್ರತಿನಿಧಿಸುವಂತ ದತ್ತ ಸನ್ನಿವೇಶದಲ್ಲಿ ಕೀಳು ಗುಣಮಟ್ಟದ ಭೂಮಿಗೆ ಯಾವುದೇ ಬಾಡಿಗೆಯನ್ನು ನೀಡಲಾಗುವುದಿಲ್ಲ. ಆದ್ದರಿಂದ ಒಂದು ಟನ್ ಗೋಧಿಯ ಪ್ರತಿ ಕಾಲು ಭಾಗದ ಉತ್ಪಾದನಾ ವೆಚ್ಚದಲ್ಲಿನ ವ್ಯತ್ಯಾಸಗಳಿಗೆ ಅನುಗುಣವಾಗಿ ಆಗುವ ಬಾಡಿಗೆಯಲ್ಲಿನ ವ್ಯತ್ಯಾಸವು ನೆಲದ ಬಾಡಿಗೆ ಎಂದಾಗುತ್ತದೆ. ಹಣಕಾಸು ಮಾರುಕಟ್ಟೆಯಲ್ಲಿ ತರಬೇತಿ ಹೊಂದಿದ್ದ ರಿಕಾರ್ಡೋ ಗೆ ಒಂದು ನಿರ್ದಿಷ್ಟ ಗುಣಮಟ್ಟದ ಭೂಮಿಯ ಪ್ರತಿಯೊಂದು ಹೆಕ್ಟೇರಿಗೆ ನೀಡುವ ವಾರ್ಷಿಕ ಬಾಡಿಗೆ $j,r_j$ ಮತ್ತು ಹೆಕ್ಟರ್ ಒಂದರ ಭೂಮಿಯ ಬೆಲೆ $P_j$ ಇವುಗಳ ನಡುವಿನ ಸಂಬಂಧ ಸ್ಪಷ್ಟವಾಗಿತ್ತು. ಭವಿಷ್ಯದಲ್ಲಿನ ಎಲ್ಲಾ ವಾರ್ಷಿಕ ಬಾಡಿಗೆಗಳ ಪಾವತಿಯನ್ನು ಚಾಲ್ತಿಯಲ್ಲಿರುವ ಬಡ್ಡಿದರ $i$ ನಂತೆ ಲೆಕ್ಕ ಹಾಕಿ ತನ್ಮೂಲಕ ಪ್ರಸಕ್ತ ಮೌಲ್ಯ ಅಥವಾ ಬಂಡವಾಳ ಮೌಲ್ಯವನ್ನು ಕಂಡುಕೊಂಡಲ್ಲಿ ನಾವು ಚಿರಂತನವಾದ ಬಾಡಿಗೆಯ ಸೂತ್ರವನ್ನು ಕಂಡುಕೊಂಡಿರುತ್ತೇವೆ: $P_j=r_j/i$. ಉದಾಹರಣೆಗೆ ಗೇಣಿಯು 100 ಪೌಂಡ್ ಗಳಾಗಿದ್ದರೆ ಮತ್ತು ಬಡ್ಡಿಯು ಶೇಕಡಾ 4% ಆಗಿದ್ದರೆ (ಅಥವಾ 0.04) ಆಗ ಆ ಭೂಮಿಯ ಪ್ರತಿ ಹೆಕ್ಟೇರ್ ನ ಬೆಲೆಯು 2500 ಪೌಂಡ್ ಗಳಾಗಿರುತ್ತವೆ.

ಸಮಾಜದಲ್ಲಿ ಗೋಧಿಯ ಅವಶ್ಯಕತೆ ಹೆಚ್ಚುತ್ತಾ ಹೋದಂತೆ, ಮತ್ತು ತಾಂತ್ರಿಕ ಪ್ರಗತಿಯನ್ನು ಪಕ್ಕಕ್ಕಿಟ್ಟು ನೋಡುವುದಾದರೆ, ಗೋಧಿಯ ಪ್ರತಿ ಘಟಕದ ಬೆಲೆಯು ಮೇಲೇರುತ್ತದೆ ಅಲ್ಲದೆ ಅದೇ ರೀತಿಯಲ್ಲಿ ಬೆಲೆಗಳು ಮತ್ತು ನೆಲದ ಬಾಡಿಗೆ ಕೂಡ ಹೆಚ್ಚುತ್ತಾ ಹೋಗುತ್ತವೆ. ಹೀಗೆ, ದತ್ತ ಒಂದು ನೈಜ ವೇತನ ದರಕ್ಕೆ ಸಂಬಂಧಿಸಿದಂತೆ ಕೃಷಿಯಲ್ಲಿನ ಮತ್ತು ಇಡೀ ಅರ್ಥವ್ಯವಸ್ಥೆಯಲ್ಲಿನ ಉತ್ಪಾದಕರಿಗೆ ಅಗತ್ಯವಾಗಿ ಲಾಭದ ದರವು ಕುಸಿಯುತ್ತದೆ. ಇದು ಲಾಭ ದರದ ಕುಸಿತದ ಪ್ರವೃತ್ತಿಗೆ ರಿಕಾರ್ಡೋ ನ ವಿವರಣೆಯಾಗಿತ್ತು. ಆದ್ದರಿಂದ, ಇಂದು ಅವರನ್ನು ಸಾಮಾನ್ಯವಾಗಿ ಪ್ರಗತಿ ಕುರಿತಂತೆ ಒಬ್ಬ ನಿರಾಶಾವಾದಿ ಎಂಬುದಾಗಿ ನೋಡಲಾಗುತ್ತದೆ. ಇದೊಂದು ತಪ್ಪಾದ ಅರ್ಥವಿವರಣೆ. ಏಕೆಂದರೆ ರಿಕಾರ್ಡೋ ಪ್ರಕಾರ ಲಾಭ ದರಗಳ ಕುಸಿತವು ಯಾವುದೇ ತಾಂತ್ರಿಕ ಪ್ರಗತಿ ಇರಲಿಲ್ಲವೆಂಬ ಕಲ್ಪಿತ ವಿಷಯದಲ್ಲಿ ಮಾತ್ರ ಕಂಡುಬರುವಂತ ತಾರ್ಕಿಕ ಫಲಿತಾಂಶವಾಗಿತ್ತು ಅಷ್ಟೇ. ಆದರೆ ತಾಂತ್ರಿಕ ಪ್ರಗತಿ ಎಂಬುದು ಅಸ್ತಿತ್ವದಲ್ಲಿ ಇರುವುದರಿಂದ "ನಾವು ಸಂಪತ್ತನ್ನು ಶೇಖರಿಸುವುದನ್ನು ನಿಲ್ಲಿಸುವ ಹಾಗೂ ಅದರ ಬಳಕೆಯಿಂದ ಲಾಭವನ್ನು ಪಡೆದುಕೊಳ್ಳುವ ಮಿತಿ ಎಲ್ಲಿದೆ ಎಂಬುದನ್ನು ಹೇಳುವುದು ಕಷ್ಟ". ಸ್ಪಷ್ಟವಾಗಿ ರಿಕಾರ್ಡೋ ಮಾನವ ಕುಲದ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಸಾಧ್ಯತೆಗಳಿಗೆ ಸಂಬಂಧಿಸಿದಂತೆ ಮಾಲ್ತಸ್ ಹೊಂದಿದ್ದ ನಿರಾಶಾವಾದವನ್ನು ಹೊಂದಿರಲಿಲ್ಲ.

ರಿಕಾರ್ಡೋಗೆ ಈ ಸಿದ್ಧಾಂತವನ್ನು ಲಾಭದಾಯಕವಾಗಿ ಬಳಸಿಕೊಳ್ಳಲು ಸಾಧ್ಯವಾಯಿತು; ತಮ್ಮ ವಿಚಾರಗಳಿಂದ ಮೂರ್ತ ತೀರ್ಮಾನಗಳ ಆಧಾರದ ಮೇಲೆ ಅವರು ವಾಟರ್‌ಲೂ ಯುದ್ಧದ ನಂತರ ತಾವು ಗಳಿಸಿದ್ದ ಅಪಾರ ಸಂಪತ್ತನ್ನು ಭೂಮಿಯನ್ನು ಕೊಳ್ಳುವುದಕ್ಕೆ ಬಳಸಿಕೊಂಡು ಇಂಗ್ಲೆಂಡಿನ ಅತ್ಯಂತ ಶ್ರೀಮಂತ ಭೂಮಾಲೀಕರಲ್ಲಿ ಒಬ್ಬರಾದರು. ಅವರ ಲೆಕ್ಕ ಹೀಗಿತ್ತು: ವಾಟರ್‌ಲೂ ಕದನದ ನಂತರ ವೇಗವರ್ಧಕವಾಗಿ ಆದ ಬಂಡವಾಳ ಶೇಖರಣೆ ಮತ್ತು ಭೂಮಿ ಲಭ್ಯತೆಯಲ್ಲಿನ ಕೊರತೆಯಿಂದಾಗಿ ಮೇಲೆ ಹೇಳಿದ ಉದಾಹರಣೆಯಲ್ಲಿನ ಭೂಮಿಯ ಗೇಣಿ ದರವು 150 ಪೌಂಡುಗಳಿಗೆ ಏರಿದರೆ ಮತ್ತು ಬಡ್ಡಿಯ ದರವು (ಲಾಭ ದರವು ಕುಸಿಯುವ ಪ್ರವೃತ್ತಿಯನ್ನು ಹೊಂದಿರುವ ಕಾರಣ) ಶೇಕಡಾ 3% ಗೆ

(0.03) ಕುಸಿದಲ್ಲಿ ಭೂಮಿಯ ಬೆಲೆಯು 5000 ಪೌಂಡ್ ಅಷ್ಟು ಏರುವುದು. ಅವರ ಲೆಕ್ಕಾಚಾರವು ಅಪೇಕ್ಷಿತ ಫಲಿತಾಂಶವನ್ನು ನೀಡಿತು.

**"ಸೇ ಅವರ ನಿಯಮ"**

"ಒಂದು ದೇಶದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವಂತಹ ಪ್ರಮಾಣದ ಬಂಡವಾಳ ಇರುವುದಿಲ್ಲ, ಏಕೆಂದರೆ ಉತ್ಪಾದನೆಯೇ ಬೇಡಿಕೆಗೆ ಒಡ್ಡಬಹುದಾದ ಮಿತಿ" ಎಂಬ ಅಭಿಪ್ರಾಯವನ್ನು ರಿಕಾರ್ಡೊ, ತಮ್ಮ ಪೂರ್ವಿಕರಾದ ಸ್ಮಿತ್ ಅವರಂತೆಯೇ ಹೊಂದಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಬಂಡವಾಳ ದಾಸ್ತಾನನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದನ್ನು ಖಚಿತಪಡಿಸುವಷ್ಟು ಅಗತ್ಯವಾದ ಬೇಡಿಕೆ ಸರಕುಗಳಿಗೆ ಯಾವಾಗಲೂ ಇದ್ದೇ ಇರುತ್ತದೆ. ಸುಪ್ರಸಿದ್ಧ ಚರ್ಚೆಯೊಂದರಲ್ಲಿ ಅವರು, ಸರಕುಗಳ ಸಾಮಾನ್ಯ "ಅತಿ ಉತ್ಪಾದನೆ" - ಒಟ್ಟಾರೆ ಪರಿಣಾಮಕಾರಿ ಬೇಡಿಕೆಯನ್ನು ಮೀರಿದ ಅತಿಯಾದ ಉತ್ಪಾದನೆಯ ಒಟ್ಟುಮೊತ್ತ - ಇರುವುದು ಸಾಧ್ಯ ಎಂಬ ಮಾಲ್ತಸ್ ನ ವಾದವನ್ನು ವಿರೋಧಿಸಿದ್ದರು. ಉಳಿತಾಯವೆಂದರೆ  ಸರಕುಗಳ ಬೇಡಿಕೆಗೆ ನಷ್ಟ ಮತ್ತು ಪ್ರತಿಯೊಂದು ಉಳಿತಾಯದ ನಂತರ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಇರುತ್ತದೆ ಎಂಬುದರ ಬಗ್ಗೆ ಇಬ್ಬರಲ್ಲಿಯೂ ಸಮ್ಮತಿ ಇತ್ತು. ಹೂಡಿಕೆ ಎಂದರೆ ಸರಕುಗಳಿಗೆ ಬೇಡಿಕೆ ಎಂದರ್ಥ - ಉಳಿತಾಯದಿಂದ ಆಗುವ ಪ್ರತಿಯೊಂದು ಬೇಡಿಕೆಯ ನಷ್ಟವನ್ನು ಅದು ಸರಿದೂಗಿಸುತ್ತದೆ. ಹೀಗಿರುವಾಗ ಬೇಡಿಕೆ ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ನಿರ್ಬಂಧಿಸುತ್ತದೆ ಎಂದು ಮಾಲ್ತಸ್ ವಾದಿಸಲು  ಹೇಗೆ ಸಾಧ್ಯ ಎಂದು ರಿಕಾರ್ಡೊ ಪ್ರಶ್ನಿಸಿದರು.

ಆರ್ಥಿಕ ವ್ಯವಸ್ಥೆಯೊಂದು ಎಂದಿಗೂ ಬೇಡಿಕೆಯಿಂದ ಮಿತಿಗೊಳ್ಳಲು ಸಾಧ್ಯವಿಲ್ಲ ಎಂದು ಇದರಿಂದ ಉದ್ಭವಿಸಿದ ದೃಷ್ಟಿಕೋನವು ಅರ್ಥಶಾಸ್ತ್ರದ ಸಾಹಿತ್ಯದಲ್ಲಿ "ಸೇ ನ ನಿಯಮ"  ಎಂದು, ಫ್ರೆಂಚ್ ಅರ್ಥಶಾಸ್ತ್ರಜ್ಞ ಝಾನ್ ಬ್ಯಾಪ್ಟಿಸ್ಟ್ ಸೇ (Jean-Baptiste Say) (1767-1832) ಅವರ ಹೆಸರಿನೊಂದಿಗೆ ತಳಕು ಹಾಕಿ ಕರೆಯಲಾಯಿತು. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಈ "ನಿಯಮ" ವನ್ನು ಲಾಭೋದ್ದೇಶದಿಂದ ತಯಾರಿಸಲ್ಪಟ್ಟ ಸರಕುಗಳಿಗೆ ಅನ್ವಯಿಸಿದರೆ ಹೊರತು ಶ್ರಮಕ್ಕೆ ಅಲ್ಲ. ನಂತರದಲ್ಲಷ್ಟೇ ಈ ನಿಯಮವನ್ನು ಅದು ಸಂಪೂರ್ಣ ಉದ್ಯೋಗ ಸ್ಥಿತಿ ಸಾಧಿಸುವ ಸಾಧ್ಯತೆಯನ್ನು ಸೂಚಿಸುವಂತ ಪ್ರಮುಖ ವಿಚಾರವನ್ನು ಹೊಂದಿದ್ದರಿಂದ ಶ್ರಮದ ಮಾರುಕಟ್ಟೆಗೆ ಅನ್ವಯಿಸಲಾಯಿತು. ರಿಕಾರ್ಡೊ ದೃಷ್ಟಿಕೋನದಲ್ಲಿ ಈ ರೀತಿಯ ಯಾವುದೇ ಸೂಚನೆ ಕಂಡುಬರುವುದಿಲ್ಲ. ನಿಜಕ್ಕೂ, ಶ್ರಮವನ್ನು ಸ್ಥಳಾಂತರಗೊಳಿಸುವ ಯಂತ್ರಗಳ ಪರಿಣಾಮಗಳು ಕಾರ್ಮಿಕರ ಸಂಕಟಗಳಿಗೆ ಕಾರಣ ಎಂಬ ದೃಢ ನಂಬಿಕೆಯನ್ನು ಹೊಂದಿ ಪ್ರತಿಭಟಿಸಿದ್ದ ಲುಡ್ಡೈಟರ ಹೋರಾಟದಿಂದ ಪ್ರಭಾವಿತರಾಗಿ,  ಅವರು ತಮ್ಮ *'ಪ್ರಿನ್ಸಿಪಲ್ಸ್ (Principles)'* (1821) ಪುಸ್ತಕದ ಮೂರನೆಯ ಆವೃತ್ತಿಯಲ್ಲಿ "ಆನ್ ಮೆಷಿನರಿ (On Machinery)" ಎಂಬ ಹೊಸ ಅಧ್ಯಾಯವನ್ನು ಸೇರಿಸಿ, ಮಾನವ ಶ್ರಮದ ಬದಲು ಯಂತ್ರ ಶಕ್ತಿಯನ್ನು ಬಳಸಿದರೆ ಅದು  ಹೇಗೆ ನಿರಂತರ ನಿರುದ್ಯೋಗ ಸ್ಥಿತಿಗೆ ಕಾರಣವಾಗಬಹುದು ಎಂಬುದನ್ನು ತೋರಿಸಿದರು.

**ರಿಕಾರ್ಡೊ ರ ವಿದೇಶಿ ವ್ಯಾಪಾರದಲ್ಲಿನ ತುಲನಾತ್ಮಕ ಅನುಕೂಲತೆಯ ಸಿದ್ಧಾಂತ**

ರಿಕಾರ್ಡೋ ದೇಶಗಳು ಹೇಗೆ ನಿರ್ದಿಷ್ಟ ಸರಕುಗಳ ಉತ್ಪಾದನಾ ವೆಚ್ಚದಲ್ಲಿನ ಸಂಪೂರ್ಣ ಅನುಕೂಲತೆಗಳನ್ನು ಆಧರಿಸಿ ವಿಶೇಷ ಸರಕುಗಳ ಉತ್ಪಾದನೆಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುತ್ತವೆ ಎಂದು ಸ್ಮಿತ್ ನೀಡಿದ ವಿವರಣೆಯನ್ನು ಅಪೂರ್ಣವೆಂದು ಭಾವಿಸಿದರು. ಉದಾಹರಣೆಗೆ, ಎಲ್ಲ ಸರಕುಗಳನ್ನು ವಿದೇಶದಲ್ಲಿ ತಗಲುವ ವೆಚ್ಚಕ್ಕಿಂತ ತಾಯ್ನಾಡಿನಲ್ಲಿ ಕಡಮೆ ವೆಚ್ಚದಲ್ಲಿ ಎಲ್ಲ ಸರಕುಗಳನ್ನು ಉತ್ಪಾದಿಸಲು ಸಾಧ್ಯ ಎಂದು ಭಾವಿಸಿಕೊಳ್ಳಿ ಎಂಬ ವಾದವನ್ನು ಅವರು ಮುಂದಿಟ್ಟರು. ಆಗ, ಆರಂಭದಲ್ಲಿ, ತಾಯ್ನಾಡು ಮಾತ್ರವೇ ಸರಕುಗಳನ್ನು ರಫ್ತು ಮಾಡುತ್ತಿರುತ್ತದೆ ಮತ್ತು ಅವುಗಳನ್ನು ವಿದೇಶಗಳು ಆಮದು ಮಾಡಿಕೊಳ್ಳುತ್ತವೆ. ಇದು ತಾಯ್ನಾಡಿಗೆ ಚಿನ್ನವು (ಹಣ ಸರಕು) ಹರಿದು ಬರಲು ಮತ್ತು ವಿದೇಶದಿಂದ ಹೊರ ಹರಿಯಲು ಕಾರಣವಾಗುತ್ತದೆ (ಹ್ಯೂಮ್ ನ ಬೆಲೆ ನಿರ್ದಿಷ್ಟ ಹರಿವಿನ ಪ್ರಕ್ರಿಯೆ). ಹಣದ ಪರಿಮಾಣ ಸಿದ್ಧಾಂತದ ಪ್ರಕಾರ, ತಾಯ್ನಾಡಿನಲ್ಲಿ ಬೆಲೆಗಳಲ್ಲಿ ಏರಿಕೆ ಹಾಗೂ ವಿದೇಶದಲ್ಲಿ ಕುಸಿತ ಸಂಭವಿಸುತ್ತದೆ. ಯಾವುದೋ ಒಂದು ಹಂತದಲ್ಲಿ ವಿದೇಶದಲ್ಲಿನ ಕೆಲವು ಸರಕುಗಳ ಬೆಲೆಯು ತಾಯ್ನಾಡಿನಲ್ಲಿನ ಬೆಲೆಗಳಿಗಿಂತ ಕೆಳಕ್ಕೆ ಕುಸಿಯುವ ಕಾರಣ ಸಂಪೂರ್ಣ ವೆಚ್ಚದ ಅನುಕೂಲವು ತಿರುವು ಮುರುವಾಗುತ್ತದೆ ಮತ್ತು ವಿದೇಶಗಳು ಈಗ ಪರಿಗಣನೆಯಲ್ಲಿರುವ ಸರಕುಗಳನ್ನು ರಫ್ತು ಮಾಡಬಹುದು. ಇದು ಯಾವ ರೀತಿಯ ಸರಕುಗಳ ಮೇಲೆ ಪರಿಣಾಮ ಬೀರುತ್ತದೆ?

ಇದಕ್ಕೆ ಉತ್ತರವಾಗಿ ರಿಕಾರ್ಡೋ "ತುಲನಾತ್ಮಕ ಅನುಕೂಲದ ತತ್ವವನ್ನು" ರೂಪಿಸಿದರು. ಇಂಗ್ಲೆಂಡ್ ಮತ್ತು ಪೋರ್ಚುಗಲ್ ನಡುವಿನ ಜವಳಿ ಹಾಗೂ ವೈನ್ ನ ವ್ಯಾಪಾರದ ಉದಾಹರಣೆಯನ್ನು ಪರಿಗಣಿಸಿ ಎಂದರು. ಪೋರ್ಚುಗಲ್ ನಲ್ಲಿ ಒಂದು ಪಿಂಡಿ (bale) ಬಟ್ಟೆಯನ್ನು ಉತ್ಪಾದಿಸಲು 90 ಗಂಟೆಗಳ ಶ್ರಮ ಮತ್ತು ಒಂದು ಪೀಪಾಯಿ ವೈನ್ ಅನ್ನು ಉತ್ಪಾದಿಸಲು 80 ಗಂಟೆಗಳು ಅಗತ್ಯವೆಂದು ಭಾವಿಸಿಕೊಳ್ಳಿ. ಅದೇ ಇಂಗ್ಲೆಂಡಿನಲ್ಲಿ ಅಷ್ಟೇ ಪ್ರಮಾಣದ ಬಟ್ಟೆಯನ್ನು ಉತ್ಪಾದಿಸಲು 100 ಗಂಟೆಗಳು ಮತ್ತು ಅಷ್ಟೇ ಪ್ರಮಾಣದ ವೈನ್ ಅನ್ನು ಉತ್ಪಾದಿಸಲು 120 ಗಂಟೆಗಳು ಬೇಕಾಗುತ್ತದೆ. ಎರಡೂ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಪೋರ್ಚುಗಲ್ ಸಂಪೂರ್ಣ ಅನುಕೂಲತೆಯನ್ನು ಹೊಂದಿದೆ ಮತ್ತು ವೈನ್ ಗೆ ಸಂಬಂಧಿಸಿದಂತೆ ಒಂದು ತುಲನಾತ್ಮಕ (ಸಾಪೇಕ್ಷವಾಗಿ) ಅನುಕೂಲತೆಯನ್ನೂ ಸಹ ಹೊಂದಿದೆ: ವೈನ್ ಗೆ ಸಂಬಂಧಿಸಿದಂತೆ ವೆಚ್ಚ ವ್ಯತ್ಯಾಸವು 80 /120 ಇದ್ದು, ಅದು ಬಟ್ಟೆಗಿರುವ 90 /100ಗಿಂತ ಹೆಚ್ಚಾಗಿದೆ. (ಅನುರೂಪವಾಗಿ ಇಂಗ್ಲೆಂಡ್ ಎರಡು ಉತ್ಪನ್ನಗಳಿಗೂ ಸಂಬಂಧಿಸಿದಂತೆ ಸಂಪೂರ್ಣ ಅನಾನುಕೂಲತೆಯನ್ನು ಹೊಂದಿದೆ, ಆದರೆ ಬಟ್ಟೆಗೆ ಸಂಬಂಧಿಸಿದಂತೆ ಒಂದು ತುಲನಾತ್ಮಕ ಅನುಕೂಲತೆಯನ್ನು ಹೊಂದಿದೆ). ಪೋರ್ಚುಗೀಸ್ ಉತ್ಪಾದಕರಿಗೆ ವೈನ್ ಉತ್ಪಾದನೆಯ ಮೇಲೆ ವಿಶೇಷವಾಗಿ ಕೇಂದ್ರೀಕರಿಸಿ ಅದನ್ನು ರಫ್ತು ಮಾಡುವುದು ಮತ್ತು, ಬಟ್ಟೆಯ ವಿಷಯದಲ್ಲಿ ಇಂಗ್ಲಿಷರಿಗೆ ಹೋಲಿಸಿದಂತೆ ತುಲನಾತ್ಮಕವಾಗಿ ಸಣ್ಣ ಪ್ರಮಾಣದಲ್ಲಿ ಸಂಪೂರ್ಣ ಅನಾನುಕೂಲತೆಯನ್ನು ಹೊಂದಿದ್ದು ಅದನ್ನು ಇಂಗ್ಲೆಂಡಿನಿಂದ ಆಮದು ಮಾಡಿಕೊಳ್ಳುವುದು ಲಾಭದಾಯಕವಾಗಿರುವುದು.

ರಿಕಾರ್ಡೋ ರ ಮುಖ್ಯ ತತ್ವವನ್ನು "ನೈಜ" ಮತ್ತು "ಕ್ಷುಲ್ಲಕವಲ್ಲ" ಎಂದು ನೊಬೆಲ್ ಪ್ರಶಸ್ತಿ ವಿಜೇತರಾದ ಪಾಲ್ ಎ ಸ್ಯಾಮ್ಯುಲ್ಸನ್ (Paul A. Samuelson) (1915 -2009) ಕರೆದದ್ದನ್ನು, ನಾವು ಇನ್ನೊಂದು ರೀತಿಯಲ್ಲಿ, "ಆರ್ಬಿಟ್ರೇಜ್ (arbitrage)" ಒಳಗೊಂಡಿರಬಹುದಾದ ಸಾಧ್ಯತೆಗೆ ಗಮನ ಸೆಳೆಯುವುದರ ಮೂಲಕ ವಿವರಿಸಬಹುದು, ಅಂದರೆ ಇಲ್ಲಿ ವಿನಿಮಯದಲ್ಲಿ ತೊಡಗಿರುವ ಎರಡು ದೇಶಗಳ ಬೆಲೆಗಳ ನಡುವಿನ ವ್ಯತ್ಯಾಸಗಳನ್ನು ಬಳಸಿಕೊಳ್ಳುವುದು ಎಂದರ್ಥ. ಎರಡು ದೇಶಗಳು ತಮ್ಮದೇ ಆದ ಚಲಾವಣೆ ನಾಣ್ಯಗಳನ್ನು ಹೊಂದಿದೆ ಮತ್ತು ಅವು ಅಪರಿವರ್ತನೀಯ ಎಂದು ಭಾವಿಸಿಕೊಳ್ಳಿ – ಪೋರ್ಚುಗಲ್ ದೇಶದಲ್ಲಿ ರಿಯಾಲ್ ಮತ್ತು ಇಂಗ್ಲೆಂಡಿನಲ್ಲಿ ಪೌಂಡ್. ಎರಡು ದೇಶಗಳಲ್ಲಿ ನಿಗದಿತ ಪರಿಮಾಣದ ಬಟ್ಟೆ ಮತ್ತು ವೈನ್ ಗೆ ಇರುವ ಹಣದ ಬೆಲೆಗಳು, ಅವುಗಳನ್ನು ಉತ್ಪಾದಿಸಲು ವ್ಯಯಿಸಿದ ಶ್ರಮದ

ಪರಿಮಾಣಕ್ಕೆ ಪ್ರಮಾಣಾನುಗುಣವಾಗಿದೆ ಎಂದು ಭಾವಿಸಿ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಆ ಸಂಖ್ಯೆಗಳು ಒಂದೇ ಎಂದು ಭಾವಿಸಿ; ಈಗ ಇರುವ ಒಂದೇ ವ್ಯತ್ಯಾಸವೇನೆಂದರೆ ಪೋರ್ಚುಗೀಸ್ ಮತ್ತು ಇಂಗ್ಲಿಷ್ ಶ್ರಮದ ಬದಲು ನಾವು ರಿಯಾಲ್ ಮತ್ತು ಪೌಂಡ್ ಗಳನ್ನು ಪರಿಗಣಿಸಿಲಿದ್ದೇವೆ ಎಂಬುದು (ಕೋಷ್ಟಕ 2.1).

**ಕೋಷ್ಟಕ 2.1. ಪೋರ್ಚುಗಲ್ ನ ರಿಯಾಲ್ ಮತ್ತು ಇಂಗ್ಲೆಂಡ್ ನ ಪೌಂಡ್ ಗಳಲ್ಲಿ ನಿರ್ದಿಷ್ಟ ಪರಿಮಾಣದ ಬಟ್ಟೆ ಮತ್ತು ವೈನ್ ನ ಬೆಲೆ**

| | ಬಟ್ಟೆ | ವೈನ್ |
|---|---|---|
| ಪೋರ್ಚುಗಲ್ ನಲ್ಲಿ (ರಿಯಾಲ್) | 90 | 80 |
| ಇಂಗ್ಲೆಂಡ್ ನಲ್ಲಿ (ಪೌಂಡ್) | 100 | 120 |

ವ್ಯಾಪಾರವು ಎರಡೂ ದೇಶದ ವರ್ತಕರುಗಳಿಗೆ ಅನುಕೂಲಕರವಾಗಿರುತ್ತದೆ ಎಂಬುದನ್ನು ಯಾರೇ ಆಗಲಿ ಸುಲಭವಾಗಿ ಮನಗಾಣಬಹುದು. (ಈ ಕೆಳಗಿನ ಚರ್ಚೆಯಲ್ಲಿ, ವಿಷಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು, ನಾವು ಸಾಗಾಣಿಕೆಯ ವೆಚ್ಚವನ್ನು ಪಕ್ಕಕ್ಕೆ ಇಡೋಣ). ಈಗ ಇಂಗ್ಲಿಷ್ ವರ್ತಕನೊಬ್ಬನ ಉದಾಹರಣೆಯನ್ನು ತೆಗೆದುಕೊಳ್ಳಿ. ಅವನು ಒಂದು ನಿರ್ದಿಷ್ಟ ಪರಿಮಾಣದ ಬಟ್ಟೆಯನ್ನು 100 ಪೌಂಡ್ ಗಳಿಗೆ ಕೊಂಡುಕೊಂಡು ಅದನ್ನು ಹಡಗಿನಲ್ಲಿ ಪೋರ್ಚುಗಲ್ ಗೆ ಸಾಗಿಸಿ ಅಲ್ಲಿ ಅದನ್ನು 90 ರಿಯಾಲ್ ಗಳಿಗೆ ಮಾರುತ್ತಾನೆ. ಆ ಹಣದಿಂದ ಅವನು ಪೋರ್ಚುಗೀಸ್ ದ್ರಾಕ್ಷಿ ಬೆಳೆಗಾರನಿಂದ ವೈನ್ ಅನ್ನು ಕೊಳ್ಳುತ್ತಾನೆ ಮತ್ತು ಒಟ್ಟಿನಲ್ಲಿ 90/80=9/8 ಘಟಕಗಳಷ್ಟು ವೈನ್ ಅನ್ನು ಪ್ರತಿ ಘಟಕಕ್ಕೆ 80 ರಿಯಾಲ್ ಗಳಂತೆ ಕೊಳ್ಳುತ್ತಾನೆ. ನಂತರ ಈ ಪರಿಮಾಣದ ವೈನ್ ಅನ್ನು ಅವನು ಇಂಗ್ಲೆಂಡಿಗೆ ಹಡಗಿನಲ್ಲಿ ಸಾಗಿಸಿ ಅಲ್ಲಿ 9/8× 120=135 ಪೌಂಡ್ ಗಳಿಗೆ ಮಾರುತ್ತಾನೆ. ಹೀಗೆ ಅವನು ಮಾಡಿದ ನೂರು ಪೌಂಡ್ ಅಷ್ಟು ಹೂಡಿಕೆಯ ಮೇಲೆ ಬಟ್ಟೆಯನ್ನು ರಫ್ತು ಮಾಡಲು ಹಾಗೂ ವೈನ್ ಅನ್ನು ಆಮದು ಮಾಡಲು ತೆಗೆದುಕೊಂಡ ಕಾಲಾವಧಿಯಲ್ಲಿ 135-100=35 ಪೌಂಡ್ ಅಷ್ಟು ಲಾಭ ಅಥವಾ ಶೇಕಡಾ 35% ರಷ್ಟು ಲಾಭ ದರವನ್ನು ಗಳಿಸಿರುತ್ತಾನೆ. (ಇಂಗ್ಲೆಂಡಿನ ವ್ಯಾಪಾರಿಯು, ಇಂಗ್ಲೆಂಡಿನಿಂದ ರಫ್ತು ಮಾಡಲು ಮತ್ತು ಇಂಗ್ಲೆಂಡ್ ಗೆ ಆಮದನ್ನು ಮಾಡಲು ಅದೇ ಹಡಗನ್ನು ಬಳಸಬಹುದು ಎಂಬುದನ್ನು ನಾವು ಗಮನಿಸುವುದು ಮುಖ್ಯವಾಗುತ್ತದೆ.) ಪೋರ್ಚುಗೀಸ್ ವ್ಯಾಪಾರಿಯೊಬ್ಬನ ವಿಷಯವನ್ನೂ ಸಹ ಹಾಗೆಯೇ ಪರಿಗಣಿಸಬಹುದು.

ಇಲ್ಲಿರುವ ಗಮನಾರ್ಹ ಅಂಶವೇನೆಂದರೆ (ಚಿನ್ನವನ್ನು ಸಾರ್ವತ್ರಿಕ ಪಾವತಿಗೆ ಸಾಧನವನ್ನಾಗಿ ಬಳಸಿದ ಈ ಹಿಂದೆ ನೀಡಿದ ವಿವರಣೆಗೆ ವಿರುದ್ಧವಾಗಿ) ಸರಕುಗಳನ್ನು ರಫ್ತು ಮತ್ತು ಆಮದು ಮಾಡಿಕೊಳ್ಳಲಾಗುವುದಾದರೂ ಈ ಎರಡು ದೇಶಗಳ ಚಲಾವಣ ನಾಣ್ಯಗಳು ಗಡಿಗಳನ್ನು ದಾಟಿ ಹೋಗುವುದಿಲ್ಲ ಎಂಬುದು; ಅವು ತಮ್ಮ ಮೂಲ ದೇಶಗಳಲ್ಲಿಯೇ ಉಳಿಯುತ್ತವೆ; ದೇಶದೊಳಗೆ ಮತ್ತು ಹೊರಗೆ ಯಾವುದೇ ಹಣ ಹರಿದು ಹೋಗುವುದಿಲ್ಲ.

ದೇಶಗಳ ನಡುವೆ ಆಗುವ ವಿಶೇಷೀಕರಣಕ್ಕೆ ಏನು ಅನ್ವಯವಾಗುತ್ತದೋ ಅಂತೆಯೇ ಜನಗಳ ನಡುವೆ ನಡೆಯುವ ವ್ಯಾಪಾರಕ್ಕೂ ಸಹ ಅದು ಅನ್ವಯವಾಗುತ್ತದೆ. ರಿಕಾರ್ಡೋ ಕಂಡುಕೊಂಡ ಶೋಧನೆಯ ಶುಭ ಸಂದೇಶ ಇದು: ಯಾರೇ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗಿಂತ ಎಲ್ಲಾ ವಿಷಯದಲ್ಲಿಯೂ ಕೆಳಗಿನ ಮಟ್ಟದಲ್ಲಿದ್ದರೂ ಆತನು ಪರಸ್ಪರ ಅನುಕೂಲಕರವಾಗಿರುವಂತಹ ಒಂದು ಶ್ರಮ ವಿಭಜನೆಯಲ್ಲಿ ತೊಡಗಿಕೊಳ್ಳಬಹುದು. ಈ ರೀತಿಯಲ್ಲಿ ಶ್ರಮದ ವಿಭಜನೆಯ

ಲಾಭದಾಯಕ ಪರಿಣಾಮಗಳ ಕುರಿತು ಆಡಂ ಸ್ಮಿತ್ ಹಾಡಿದ ಮೆಚ್ಚುಗೆಯ ಸ್ತುತಿಗೀತೆಗೆ ರಿಕಾರ್ಡೊ ಒಂದು ಮುಖ್ಯವಾದ ಚರಣವನ್ನು ಸೇರಿಸಿದರು.

## ಜಾನ್ ಸ್ಟುವರ್ಟ್ ಮಿಲ್

ಮಿಲ್ (1806-1873) ತಮ್ಮನ್ನು ತಾವು ಕೇವಲ ರಿಕಾರ್ಡೋನ ಸಿದ್ಧಾಂತವನ್ನು ತಿದ್ದುತ್ತಿರುವ ಮತ್ತು ಪೂರ್ಣಗೊಳಿಸುತ್ತಿರುವ ವ್ಯಕ್ತಿಯನ್ನಾಗಿ ನೋಡಿದರಾದರೂ ಸಹ ಅವರು ವಾಸ್ತವದಲ್ಲಿ ನಂತರ ಬಂದ ಕನಿಷ್ಠ ಪ್ರಮಾಣ ಮೌಲ್ಯ ಸಿದ್ಧಾಂತ (marginalist doctrine)ದ ಕೆಲವೊಂದು ಅಂಶಗಳಿಗೆ ಪೂರ್ವಸೂಚಕನಾಗಿ ಸಮಾಜದ ಸಂಕ್ರಮಣ ಕಾಲದಲ್ಲಿ ಪ್ರಖ್ಯಾತನಾದಂತಹ ಒಬ್ಬ ವ್ಯಕ್ತಿ. (ನೋಡಿ ಅಧ್ಯಾಯ 4). ಅವರ *"ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಇಕಾನಮಿ ವಿತ್ ಸಮ್ ಆಫ್ ಧ್ಯೇರ್ ಅಪ್ಲಿಕೇಶನ್ಸ್ ಟು ಸೋಶಿಯಲ್ ಫಿಲಾಸಫಿ (Principles of Political Economy with Some of Their Applications to Social Philosophy) "* ಎಂಬ ಮೊದಲಿಗೆ 1848ರಲ್ಲಿ ಮುದ್ರಣವಾದ ಗ್ರಂಥವು ಆ ಒಟ್ಟಾರೆ ಕ್ಷೇತ್ರದ ಅತ್ಯಂತ ಯಶಸ್ವಿಯಾದ ಅವಲೋಕನಗಳಾದವು, ಮತ್ತು 1890ರಲ್ಲಿ ಹೊರಬಂದ ಆಲ್ಫ್ರೆಡ್ ಮಾರ್ಷಲ್ (Alfred Marshall) (1842–1924) ರ *"ಪ್ರಿನ್ಸಿಪಲ್ಸ್ (Principles)"* ಗ್ರಂಥ ಅವುಗಳನ್ನು ದಾಟಿ ಮುಂದೆ ಹೋಯಿತು. ಇಲ್ಲಿ ನಾವು ಅವರ ಕೆಲವು ವಿಚಾರ ಮತ್ತು ಪರಿಕಲ್ಪನೆಗಳು ಮಾತ್ರವಷ್ಟೇ ಚರ್ಚಿಸಲಿದ್ದೇವೆ.

ಲಾಭದ ಕುರಿತಾದ ಮಿಲ್ನ ವಿವರಣೆಯು ಅವರ ದೃಷ್ಟಿಕೋನವು ಹೇಗೆ ರಿಕಾರ್ಡೋನ ದೃಷ್ಟಿಕೋನಕ್ಕಿಂತ ಭಿನ್ನವಾಗಿತ್ತು ಎಂಬುದನ್ನು ಹೆಚ್ಚು ಸ್ಪಷ್ಟವಾಗಿ ತೋರಿಸುತ್ತದೆ. ಅವರ " (ಸ್ವಯಂ)ನಿಗ್ರಹದ ಸಿದ್ಧಾಂತ"ದ ಪ್ರಕಾರ ಉಳಿತಾಯ ಎಂಬುದು "ಇಂದಿನ ಬಳಕೆಯನ್ನು ನಿಗ್ರಹಿಸಿಕೊಳ್ಳುವುದನ್ನು" ಒಳಗೊಳ್ಳುತ್ತದೆ ಮತ್ತು ಅದನ್ನು ಲಾಭದಿಂದ (ಅಥವಾ ಬಡ್ಡಿ) ಸರಿದೂಗಿಸಲ್ಪಡುವ "ತ್ಯಾಗ" ಎಂಬುದಾಗಿ ಪರಿಗಣಿಸಬೇಕು. ರಿಕಾರ್ಡೊ ಅವರು ಲಾಭಗಳನ್ನು ವಸ್ತುನಿಷ್ಠದ ಪರಿಭಾಷೆಯಲ್ಲಿ ವಿವರಿಸಿದ್ದರೆ, ಮಿಲ್ ಒಂದು ವ್ಯಕ್ತಿನಿಷ್ಠ ಅಂಶವನ್ನು ಸೇರಿಸಿದರು. ವಿಮರ್ಶಕರು (ಸ್ವಯಂ) ನಿಗ್ರಹವನ್ನು ಸ್ಪಷ್ಟವಾಗಿ ಅಳೆಯಲಾಗುವುದಿಲ್ಲ ಎಂಬ ಕಾರಣಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದರು ಮತ್ತು ಅದನ್ನು ತ್ಯಾಗವನ್ನಾಗಿ ಏಕೆ ಪರಿಗಣಿಸಬೇಕು ಎಂದು ಕೇಳಿದರು. ಒಬ್ಬ ಕೋಟ್ಯಾಧೀಶನು ಉಳಿತಾಯ ಮಾಡಿದಾಗ ಆತನು ಬಳಕೆಯ ಮೇಲೆ (ಸ್ವಯಂ)ನಿಗ್ರಹವನ್ನು ಸಾಧಿಸಿದ್ದಾನೆ ಎನ್ನಲಾಗದು. ಇಂತಹ ವ್ಯಕ್ತಿನಿಷ್ಠ ಕಲ್ಪನೆಗಳನ್ನು ಆಧಾರಿಸಿ ಯಾವುದೇ ಸಂಗತಿಯನ್ನು ಮತ್ತು ಅದಕ್ಕೆ ವಿರುದ್ಧವಾದ ಒಂದನ್ನು ಸ್ಥಾಪಿಸಬಿಡಬಹುದು ಎಂದೂ ಸಹ ಮಿಲ್ ನ ಸಿದ್ಧಾಂತವನ್ನು ಟೀಕಿಸದವರು ವಾದಿಸಿದರು ಅಲ್ಲದೆ ಅಂತಹ ವಿವರಣೆಗಳನ್ನು ಸುಲಭವಾಗಿ ಏನನ್ನಾದರೂ ಸಮರ್ಥಿಸಿಕೊಳ್ಳುವ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಬಹುದು ಎಂದರು.

ಕೆಲವು ಕಾಲ ಮಿಲ್ ವೇತನ-ನಿಧಿ ಸಿದ್ಧಾಂತ ಎಂದು ಕರೆಯಲ್ಪಟ್ಟ ಸಿದ್ಧಾಂತವನ್ನೂ ಸಹ ಪ್ರತಿಪಾದಿಸಿದ್ದು, ಅದು ಶ್ರಮದ ಮಾರುಕಟ್ಟೆಗೆ ಅನ್ವಯಿಸಿದ ಸೇ ನಿಯಮದ ಪೂರ್ವಭಾವಿಯಾಗಿ ನಿರೀಕ್ಷಿಸಿದ ಮೂಲ ಕಲ್ಪನೆಯಾಗಿತ್ತು. ಆ ಪರಿಕಲ್ಪನೆ ಹೀಗಿದೆ: ದತ್ತ ಒಂದು ವರ್ಷದಲ್ಲಿ, ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಒಂದು ನಿಗದಿತ ಪ್ರಮಾಣದ ಆಹಾರವು ಲಭ್ಯವಾಗಿದ್ದು ಅದನ್ನು ವೇತನ-ನಿಧಿ ***F*** ಎಂದು ಕರೆಯಲಾಗುತ್ತದೆ. ಈ ನಿಧಿಗೆ ಅನುಗುಣವಾಗಿ ಹೊಂದಿಸಿ ಒಂದು ಬದಲಾಯಿಸಬಲ್ಲ ವೇತನ ದರ ***w*** ವನ್ನು ***N*** ಇಂದ ಸೂಚಿತವಾಗುವ ಎಲ್ಲ ಉದ್ಯೋಗಾಕಾಂಕ್ಷಿಗಳೂ ಕೂಡ ಕೆಲಸವನ್ನು ಪಡೆದುಕೊಳ್ಳಲು ಸಾಧ್ಯವಾಗುವಂತ ರೀತಿಯಲ್ಲಿ ನಿಗದಿಪಡಿಸಲಾಗುತ್ತದೆ. ಇದರಿಂದ ದೊರಕುವ

ಸಮೀಕರಣವು ಹೀಗಿದೆ: ***w=F/N*** ಅಥವಾ ***F=wN***. ದತ್ತ ಒಂದು ***F*** ಗೆ, ಈ ಸಮೀಕರಣವನ್ನು ಶ್ರಮ ಬೇಡಿಕೆಗೆ ಸಂಬಂಧಿಸಿದ ಮೂಲ ಕಾರ್ಯ (rudimentary demand function) ಎಂಬುದಾಗಿಯೂ ಸಹ ವ್ಯಾಖ್ಯಾನಿಸಬಹುದಾಗಿದೆ: ***w*** ಹೆಚ್ಚು ಇದ್ದಷ್ಟೂ ***N*** ಕಡಮೆ ಇರುತ್ತದೆ ಮತ್ತು ***N*** ಹೆಚ್ಚು ಇದ್ದಷ್ಟೂ w ಕಡಮೆ ಇರುತ್ತದೆ. ಆದರೆ ಈ ರೀತಿಯಲ್ಲಿ ಅಭಿವ್ಯಕ್ತಿಸಲ್ಪಟ್ಟ ಕಲ್ಪನೆಯು ಮನದಟ್ಟುಮಾಡುವುದಿಲ್ಲ: ಇಲ್ಲವೇ ವೇತನ-ನಿಧಿ ***F*** ಅನ್ನು ಸ್ಥಿರ ಎಂದು ಭಾವಿಸಲೂ ಸಾಧ್ಯವಿಲ್ಲ, ಇಲ್ಲ ವೇತನಗಳು ಯಾವ ಮಟ್ಟಕ್ಕೆ ಬೇಕಾದರೂ ಇಳಿಯುವಷ್ಟು ಬದಲಾಯಿಸಲು ಸಾಧ್ಯ ಎಂದೂ ಪರಿಗಣಿಸಲಾಗುವುದಿಲ್ಲ, ಮತ್ತು ಒಂದು ವೇಳೆ ಅದನ್ನು ಮಾಡಲು ಸಾಧ್ಯವಾದರೂ ಸಹ ಅಸ್ತಿತ್ವದಲ್ಲಿರುವ ಭೌತ ವಸ್ತುಗಳ ಬಂಡವಾಳ ದಾಸ್ತಾನು (ಯಂತ್ರಗಳು, ಕಟ್ಟಡಗಳು) ಅನಿರ್ದಿಷ್ಟ ಸಂಖ್ಯೆಯಲ್ಲಿ ಕೆಲಸಗಾರರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿಸುವುದಿಲ್ಲ. ನಂತರ ಮಿಲ್ ವೇತನ-ನಿಧಿ ಸಿದ್ಧಾಂತವು ಸಮರ್ಥನೀಯವಲ್ಲ ಎಂದು ಒಪ್ಪಿಕೊಂಡು ಅದನ್ನು ಹಿಂದಕ್ಕೆ ತೆಗೆದುಕೊಂಡರು.

ವಿದೇಶಿ ವ್ಯಾಪಾರ ಸಿದ್ಧಾಂತದಲ್ಲಿ, ಮಿಲ್ ರಿಕಾರ್ಡೋ ನ ವಿಶ್ಲೇಷಣೆಯು ಅಪೂರ್ಣ ಎಂದು ವಾದಿಸಿದರು, ಏಕೆಂದರೆ ಅದು ದೇಶವೊಂದು ಉತ್ಪಾದಿಸಿದ, ರಫ್ತು ಮಾಡಿದ ಅಥವಾ ಆಮದು ಮಾಡಿಕೊಂಡ ಸರಕುಗಳ ಪ್ರಮಾಣವನ್ನು ವಿವರಿಸುವುದಿಲ್ಲ ಎಂಬ ಕಾರಣಕ್ಕೆ. ಅವರು ರಿಕಾರ್ಡೋರ ಸಿದ್ಧಾಂತವನ್ನು ವರ್ಧಿಸುವಂತ ಬೇಡಿಕೆಯ ಸಿದ್ಧಾಂತವೊಂದನ್ನು ಸೇರಿಸಲು ಪ್ರಯತ್ನಿಸಿದರು.

ಉಪಯೋಗಿತಾವಾದಿಯಾಗಿದ್ದ ಯಾ ಪ್ರಯೋಜಕತಾವಾದಿಯಾಗಿದ್ದ (utilitarian) ಅವರು ಆದಾಯ ಹೆಚ್ಚುತ್ತಾ ಹೋದಂತೆ ಪ್ರಯೋಜನ ಕಡಮೆಯಾಗುತ್ತಾ ಕನಿಷ್ಠ ಪ್ರಮಾಣವಾಗುತ್ತದೆ ಎಂಬುದಾಗಿ ನೋಡಿದರು (ಅಂದರೆ ಪ್ರತಿಯೊಂದು ಹೆಚ್ಚುವರಿ ಡಾಲರ್ ಹೂಡಿಕೆಗೆ ಉಪಯುಕ್ತತೆಯಲ್ಲಿನ ಹೆಚ್ಚಳವು ಮತ್ತಷ್ಟು ಸಣ್ಣ ಪ್ರಮಾಣದಲ್ಲಿರುವುದು). ಆದ್ದರಿಂದ ಅವರು ಅಸಮಾನತೆಯನ್ನು ಕಡಮೆ ಮಾಡಲು ಆದಾಯ ಮತ್ತು ಉತ್ತರಾಧಿಕಾರದ ಮೇಲೆ ತೆರಿಗೆ ಹಾಕುವುದನ್ನು ಪ್ರತಿಪಾದಿಸಿದರು. ಉದಾರವಾದಿ ಮಿಲ್ಗೆ ಆದಾಯ ಮತ್ತು ಸಂಪತ್ತಿನಲ್ಲಿ ದೊಡ್ಡ ಪ್ರಮಾಣದಲ್ಲಿ ಅಸಮಾನತೆ ಇದ್ದರೆ ಅದು ತರುಣರಿಗೆ ಸಮಾನ ಅವಕಾಶ ಸಿಗಬೇಕೆಂಬ ತತ್ವಕ್ಕೆ ಅಪಾಯವನ್ನು ತಂದೊಡ್ಡುತ್ತದೆ, "ಶ್ರೀಮಂತರ" ಮಕ್ಕಳ ಪರವಾಗಿದ್ದು "ಬಡವರ" ಮಕ್ಕಳನ್ನು ತಾರತಮ್ಯದಿಂದ ಪರಿಗಣಿಸುತ್ತದೆ ಎಂದರು. ಉತ್ತರಾಧಿಕಾರದ ಮೇಲಿನ ತೆರಿಗೆಯ ಕಾರ್ಯೋಪಯೋಗವು ಕೈಗಾರಿಕೆ ಮತ್ತು ವ್ಯವಹಾರ ಚಾತುರ್ಯತೆಯ ಉಸಿರಡಗಿಸದೆ ವ್ಯವಸ್ಥೆಯನ್ನು ಸಮಾನ ಅವಕಾಶಗಳನ್ನು ಒದಗಿಸುವಂತೆ ಮಾಡುವುದಾಗಿತ್ತು.

## ಸಾಂಪ್ರದಾಯಿಕ ವಿಧಾನದ ಬೆಳವಣಿಗೆ

ಸಾಂಪ್ರದಾಯಿಕ ಆರ್ಥಿಕ ಸಿದ್ಧಾಂತವು ಅನೇಕ ಸ್ವರೂಪಗಳಲ್ಲಿ ಹಾಗೂ ಸಂರಚನೆಗಳಲ್ಲಿ ಉಳಿದುಕೊಂಡು ಬಂದಿತು ಮತ್ತು ಅರ್ಥಶಾಸ್ತ್ರದ ಬೆಳವಣಿಗೆಯ ಮೇಲೆ ದೊಡ್ಡ ಪರಿಣಾಮವನ್ನು ಬೀರಿತು. ಮೌಲ್ಯ ಹಾಗೂ ವಿತರಣೆಯ ಕುರಿತಾದ ಸಾಂಪ್ರದಾಯಿಕ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಪರಿಶೀಲನೆ ಮಾಡುವ ಉದ್ದೇಶದಿಂದ ಮಾರ್ಕ್ಸ್ ಕೈಗೆತ್ತಿಕೊಂಡರು ಮತ್ತು ಹೆಚ್ಚುಕಡಮೆ ಅದೇ ವೇಳೆಗೆ ಅದು ಉದಯೋನ್ಮುಖವಾಗುತ್ತಿದ್ದ ಕನಿಷ್ಠ ಪ್ರಮಾಣ ಮೌಲ್ಯ ಚಿಂತನೆಯ ಪಂಥದ ಪ್ರತಿನಿಧಿಗಳಿಂದ ಕಟು ಟೀಕೆಗೆ ಒಳಪಟ್ಟಿತು (ನೋಡಿ ಅಧ್ಯಾಯ 3 ಮತ್ತು 4 ). ಹತ್ತೊಂಬತ್ತನೇ ಶತಮಾನದ ಅಂತ್ಯದ ಹೊತ್ತಿಗೆ ರಷ್ಯಾದ ಅರ್ಥಶಾಸ್ತ್ರಜ್ಞರಾದ ವ್ಲಾಡಿಮಿರ್ ಕೆ ದಿಮಿತ್ರೀವ್ (Vladimir K. Dmitriev)

(1868-1913) ರಿಕಾರ್ಡೋ ರ ಸಿದ್ಧಾಂತದ ಕೆಲವು ಭಾಗಗಳಿಗೆ ನಿರ್ದಿಷ್ಟ ರೂಪಕೊಟ್ಟರು. ಬರ್ಲಿನ್ ನಲ್ಲಿ ಬೋಧಿಸುತ್ತಿದ್ದ ಲ್ಯಾಡಿಸ್ಲೌಸ್ ವಾನ್ ಬಾರ್ಟ್ಕೆವಿಚ್ (Ladislaus von Bortkiewicz) (1868–1931), ದಿಮಿತ್ರೀವ್ ಅವರ ಕೆಲಸವನ್ನು ಮುಂದುವರೆಸಿದರು. 1937 ರಲ್ಲಿ ಹಂಗೇರಿ ದೇಶದ ಗಣಿತಶಾಸ್ತ್ರಜ್ಞರೂ ಮತ್ತು ನೈಸರ್ಗಿಕ ವಿಜ್ಞಾನಿಗಳೂ ಆದ ಯಾನೋಷ್ (ನಂತರ ಜಾನ್) ವಾನ್ ನ್ಯೆಮನ್ (Janos von Neumann) (1903–1957), ಸ್ಪಷ್ಟವಾಗಿ ಸಾಂಪ್ರದಾಯಿಕ ಕೃತಿಗಳ ಬಗ್ಗೆ ಅರಿವಿಲ್ಲದೆ, ನಿಜವಾಗಿಯೂ ಸಾಂಪ್ರದಾಯಿಕ ಲಕ್ಷಣಗಳನ್ನು ಪ್ರದರ್ಶಿಸುವಂತ ಆರ್ಥಿಕ ಬೆಳವಣಿಗೆಯನ್ನು ಕುರಿತಾದ ಮಾದರಿಯೊಂದನ್ನು ಪ್ರಕಟಿಸಿದರು.

ಆದಾಗ್ಯೂ, ಸಾಂಪ್ರದಾಯಿಕ ಸಿದ್ಧಾಂತಕ್ಕೆ ಅತ್ಯಂತ ಮುಖ್ಯವಾದ ಕೊಡುಗೆಯನ್ನು ನೀಡಿದವರು ಇಟಲಿಯ ಪಿಯೆರೋ ಸ್ರಾಫಾ (Piero Sraffa) (1898-1983) ಆಗಿದ್ದು ಅವರನ್ನು ಕೇನ್ಸ್ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿದರು. ರಾಯಲ್ ಎಕನಾಮಿಕ್ ಸೊಸೈಟಿಯಿಂದ ವಿಶೇಷವಾಗಿ ನಿಯೋಗಿಸಲ್ಪಟ್ಟ ಸ್ರಾಫಾ, *"ದಿ ವರ್ಕ್ಸ್ ಅಂಡ್ ಕರೆಸ್ಪಾಂಡೆನ್ಸ್ ಆಫ್ ಡೇವಿಡ್ ರಿಕಾರ್ಡೋ (The Works and Correspondence of David Ricardo)"* ಎಂಬ ಗ್ರಂಥವನ್ನು (1951–1973) ಸಂಪಾದಿಸಿದರು ಮತ್ತು, ತಮ್ಮದೇ ಗ್ರಂಥವಾದ *"ಪ್ರೊಡಕ್ಷನ್ ಆಫ್ ಕಮಾಡಿಟೀಸ್ ಬೈ ಮೀನ್ಸ್ ಆಫ್ ಕಮಾಡಿಟೀಸ್ (Production of Commodities by Means of Commodities)"* (1960) ಎಂಬ ಗ್ರಂಥದಲ್ಲಿ "ಆಡಂ ಸ್ಮಿತ್ ರಿಂದ ರಿಕಾರ್ಡೋ ವರೆಗಿನ ಎಲ್ಲಾ ಹಿಂದಿನ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ನಿಲುವು" ಗಳನ್ನು ತಾರ್ಕಿಕವಾಗಿ ಸುಸಂಗತವಾದ ಸ್ವರೂಪದಲ್ಲಿ ಮರು ಸೂತ್ರೀಕರಿಸಿದರು. ಅವರು ದತ್ತ ಒಂದು ಉತ್ಪಾದನಾ ವ್ಯವಸ್ಥೆ ಮತ್ತು ದತ್ತ ಒಂದು ವೇತನ ದರಕ್ಕೆ, ಸಾಪೇಕ್ಷ ಬೆಲೆಗಳು, ಲಾಭ ಧರಗಳು, ಮತ್ತು ಬಾಡಿಗೆಗಳನ್ನು ಸ್ಥಿರವಾಗಿ ಯಾವುದೇ ಪೂರೈಕೆ ಮತ್ತು ಬೇಡಿಕೆಯ ಕಾರ್ಯಗಳಿಗೆ ಸಂಬಂಧಿಸದೆ ನಿರ್ಣಯಿಸಬಹುದು ಎಂದು ತೋರಿಸಿದರು (ಅಧ್ಯಾಯ 12 ಅನ್ನೂ ನೋಡಿ). ಸ್ರಾಫಾರ ಸಂಪ್ರದಾಯವನ್ನು ಅನುಸರಿಸಿ ಕೆಲಸ ಮಾಡುವವರನ್ನು ಸಾಮಾನ್ಯವಾಗಿ "ನವ ರಿಕಾರ್ಡಿಯನ್ನರು" ಎಂದು ಕರೆಯಲಾಗುತ್ತದೆ ( ನೋಡಿ ಅಧ್ಯಾಯ12).